ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 5ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು (ಬೇಡಿಕೆ ಸಂಖ್ಯೆ 30,31)

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಸನ್ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನ ನಗರಾಭಿವೃದ್ಧಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ನಡೆಯಬೇಕಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ (ಕೆಂಗೇರಿ) : ಅಧ್ಯಕ್ಷರೇ, ಇಂದು ಪ್ರಶ್ನೋತ್ತರ ತೆಗೆದುಕೊಳ್ಳಲಿಲ್ಲವಲ್ಲ?

ಅಧ್ಯಕ್ಷರು : ಮೊದಲು ಬೇಡಿಕೆ, ಬೇಡಿಕೆಗಳಿಗೆ ಉತ್ತರ, ಆಮೇಲೆ ಊಟ, ಊಟದ ನಂತರ ಪ್ರಶ್ನೋತ್ತರ, ಅನಂತರ ಶೂನ್ಯವೇಳೆ, ಅನಂತರ ಗಮನ ಸೆಳೆಯುವ ಸೂಚನೆ, ಆಮೇಲೆ ಕೃಷ್ಣಾ ಮೇಲ್ದಂಡೆ ವಿಚಾರ, ನೀವು ಇವತ್ತಿನ ಅಜೆಂಡಾ ನೋಡಲಿಲ್ಲವೇ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ಪ್ರಶ್ನೋತ್ತರವಾದ ನಂತರ, ಬೇಡಿಕೆಗಳನ್ನು ತೆಗೆದುಕೊಂಡರೆ ಅನುಕೂಲಕರವಾಗಿತ್ತು ಎಂದು ನನ್ನ ಭಾವನೆ.

ಅಧ್ಯಕ್ಷರು : ಇಲ್ಲ. ಮಾನ್ಯ ಸಗೀರ್ ಅಹಮದ್‌ರವರಿಗೆ ಅವಕಾಶ ಕೊಡುವ ದೃಷ್ಟಿಯಿಂದಾಗಿ ಸ್ವಲ್ಪ ಸಂಪ್ರದಾಯದಲ್ಲಿ ಬದಲಾವಣೆ ಮಾಡಿದ್ದೇನೆ. ಅವರೆಲ್ಲಾ ರಿವರ್ಸ್ ತಾನೆ. ಸಗೀರ್ ಅಹಮದ್ ಭಾಷಣ ಎಂದರೆ ಎಲ್ಲಾ ರಿವರ್ಸ್.

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲಾ ವಿಚಾರಕ್ಕೂ ಸಗೀರ್ ಅಹಮದ್ ಉಲ್ಟಾ ಅಲ್ಲ ಸಾರ್. ಕೆಲವಕ್ಕೆ ಮಾತ್ರ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾವುದರಲ್ಲಿ ಉಲ್ಟಾ ಎಂದು ಈಶ್ವರಪ್ಪನವರು ಹೇಳಬೇಕು.

ಶ್ರೀ ಕುಂಬ್ಳೆ ಸುಂದರರಾವ್ : ಅಧ್ಯಕ್ಷರ ಈ ಅನುಗ್ರಹ ಪಡೆಯಲಿಕ್ಕೆ, ಸಗೀರ್ ಅಹಮದ್‌ರವರು ಏನು ಮಾಡಿದರು ಎಂಬ ಗುಟ್ಟು ನಮಗೆ ಸ್ವಲ್ಪ ಹೇಳಿಕೊಡಬೇಕು.

ಅಧ್ಯಕ್ಷರು : ಎಲ್ಲಾ ಹೇಳಿಬಿಟ್ಟರೆ, ಆಮೇಲೆ ನೀವು ನಮ್ಮ ಕೈಗೆ ಸಿಕ್ಕುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬೇಡಿಕೆಗಳ ಮೇಲೆ ನಡೆಯುತ್ತಿರುವಂಥ ಈ ಚರ್ಚೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡಿನ ವಿಚಾರಗಳನ್ನು ತಮ್ಮ ಮುಖಾಂತರವಾಗಿ ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನ ನಡೆಸಿದ್ದೇನೆ. ಸರ್ಕಾರದವರು ಬಂದು ಎರಡು ವರ್ಷ 8 ತಿಂಗಳುಗಳ ಕಾಲ ಆಗಿದೆ. ಕರ್ನಾಟಕ ಹೌಸಿಂಗ್ ಬೋರ್ಡಿನ ಅನೇಕ ಬಡಾವಣೆಗಳು ಈ ರಾಜ್ಯದಲ್ಲಿ ಬಂದಿದ್ದು ಇದರ ಅಭಿವೃದ್ಧಿಗೆ ಚಿಂತನೆ ಮಾಡಲಿಲ್ಲ ಎನ್ನುವುದರ ಬಗ್ಗೆ ನಾನು ತಮ್ಮ ಮುಖಾಂತರವಾಗಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಅನೇಕ ಬಡಾವಣೆಗಳು ಬಂದಿರುವಂಥ ಈ ಸಂದರ್ಭದಲ್ಲಿ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರ ಬಹಳ ಹಿಂದೆ ಬಿದ್ದಿದೆ. ಇವತ್ತು ಅನೇಕ ಬಡಾವಣೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದಾಗಲೀ ರಸ್ತೆಗಳಿಗೆ ಡಾಂಬರೀಕರಣ ಮಾಡುವುದಾಗಲೀ, ಅಥವಾ ಇವತ್ತು ಸ್ವಚ್ಛತೆಯನ್ನು ಕಾಪಾಡುವುದರ ಬಗ್ಗೆಯಾಗಲೀ ಯಾವುದೇ ರೀತಿಯ ಕ್ರಮವನ್ನು ಕಾನೂನು ಬದ್ಧವಾಗಿ ಕರ್ನಾಟಕ ಹೌಸಿಂಗ್ ಬೋರ್ಡಿನವರು ಜರುಗಿಸಲಿಲ್ಲ, ಇವತ್ತು ಉದಾಹರಣೆಗಾಗಿ ಹೇಳುವುದಾದರೆ, ಬೇರೆ ಬೇರೆ ಕ್ಷೇತ್ರಗಳಲ್ಲಿ, ಬೇರೆ ಬೇರೆ ಜಿಲ್ಲೆಗಳಲ್ಲಿ ಸಾವಿರಾರು ಮನೆಗಳನ್ನು ನಿರ್ಮಿಸಿರುವಂಥ ಈ ಸಂದರ್ಭದಲ್ಲಿ ಮನೆಗಳ ಕಾಮಗಾರಿ ಬಹಳ ಕಳಪೆಯಾಗಿದ್ದು, ಅನೇಕ ಬಡಾವಣೆಗಳಲ್ಲಿ ಮನೆಗಳು ಬೀಳುವಂಥ ಹಂತದಲ್ಲಿವೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಈ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಕಟ್ಟಿರುವಂಥ ಮನೆಗಳ ಈ ಒಂದು ಕಳಪೆ ಕಾಮಗಾರಿ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಆ ಬಡಾವಣೆಯಲ್ಲಿ ನಿರ್ಮಿಸಿರುವಂಥ ಮನೆಗಳ ಉಸ್ತುವಾರಿಯನ್ನು ನೋಡಿ ಕೊಳ್ಳುವಂಥ ಇಂಜಿನಿಯರುಗಳ ಬಗ್ಗೆ ಸಹ ಯಾವುದೇ ರೀತಿಯ ಕಾನೂನು ಕ್ರಮವನ್ನು ಜರುಗಿಸಲಿಲ್ಲ. ಉದಾಹರಣೆಗೆ ತಮ್ಮ ಗಮನಕ್ಕೆ ತರುವುದಾದರೆ, ಚಿಕ್ಕಮಗಳೂರಿನಲ್ಲಿ 1993-94 ಮತ್ತು 1995ನೇ ಸಾಲಿನಲ್ಲಿ ಸರ್ಕಾರ ಅನುಮತಿ ಕೊಟ್ಟಿರುವಂಥಾದ್ದು ಇದೆ. ಇವತ್ತು ಹೆಚ್ಚು ಕಡಿಮೆ 8 ಮನೆಗಳು ಬೀಳುವಂಥ ಸ್ಥಿತಿಯಲ್ಲಿವೆ. ಹಾಗೆ ಬೀಳುವಂಥ ಸ್ಥಿತಿಯಲ್ಲಿರುವ ಮನೆಗಳ ಗುತ್ತಿಗೆದಾರರು ಯಾರು? ಆ ಮನೆಗಳನ್ನು ಕಟ್ಟುವಂಥ ಸಂದರ್ಭದಲ್ಲಿ ಕಳಪೆ ಕಾಮಗಾರಿ ಆಗಿರುವ ಬಗ್ಗೆ ತನಿಖೆಯನ್ನು ನಡೆಸುವಂಥ ಸೌಜನ್ಯತೆಯನ್ನು ಕರ್ನಾಟಕ ಗೃಹನಿರ್ಮಾಣ ಮಂಡಳಿಯವರು ತೋರಿಸಿಕೊಟ್ಟಿಲ್ಲ. ಜೊತೆಗೆ ಈ ಸಂದರ್ಭದಲ್ಲಿ ಗುತ್ತಿಗೆದಾರರು ಆಗಲಿ ಇಂಜಿನಿಯರ್‌ಗಳು ಆಗಲಿ, ಅವರು ಮಾಡಿದಂತಹ ಕೆಲಸಗಳ ಬಗ್ಗೆ ಯಾವುದೇ ರೀತಿಯ ಕಾನೂನು ಕ್ರಮ ಸರ್ಕಾರದಿಂದ ಜರುಗಿಸಲು ಸಾಧ್ಯವಾಗಲಿಲ್ಲ. ಜನಗಳಿಂದ ಅತೀ ಹೆಚ್ಚಿನ ಮನೆಗಳ ಬೇಡಿಕೆ ಇದ್ದಂತಹ ಸಂದರ್ಭದಲ್ಲಿ ಕರ್ನಾಟಕ ಗೃಹ ಮಂಡಲಿಯವರು ಆ ಮನೆಗಳನ್ನು ಯಾರು ಪಡೆಯುವಂತಹ ಪ್ರಯತ್ನ ಮಾಡಿದರು ಅವರಿಂದ ಒಂದು ಪ್ರಮಾಣ ಪತ್ರವನ್ನು ತೆಗೆದುಕೊಂಡು ಯಾಥಾ ಸ್ಥಿತಿಯಲ್ಲಿ ತಾವು ಈ ಮನೆಗಳನ್ನು ತೆಗೆದುಕೊಳ್ಳುವುದಾದರೆ ಈ ಮನೆಗಳನ್ನು

ಕೊಡುತ್ತೇವೆಂದು ಹೇಳಿ ಅವರಿಗೆ ಮನೆಗಳನ್ನು ಅಲಾಟ್ ಮಾಡಿದ್ದಾರೆ. ಅಲ್ಲಿ ವಾಸಿಸುತ್ತಿರುವಂತಹ ಕುಟುಂಬದ ಸದಸ್ಯರ ಮೇಲೆ ಆಗಲಿ ಯಾರ ಮೇಲೆ ಆಗಲಿ ಬಿದ್ದರೆ ಆ ಕುಟುಂಬದ ಎಲ್ಲಾ ಸದಸ್ಯರು ಸಾವಿಗೆ ಈಡಾಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಏಕೆ ಆಲೋಚನೆ ಮಾಡಿಲ್ಲ? ಈ 8 ತಿಂಗಳ ಅವಧಿಯಲ್ಲಿ ಹಾಗೆಯೇ ಉಳಿದಿದ್ದಂತಹ ಮನೆಗಳನ್ನು ನೋಡಿ ಕಾನೂನು ಕ್ರಮ ಜರುಗಿಸುವುದಕ್ಕಾಗಿ ಅಧಿಕಾರಿಗಳು ಆಗಲಿ ಸರ್ಕಾರ ಆಗಲಿ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ಇದುವರೆಗೂ ಯಾರಿಗೂ ಮಾಹಿತಿ ಇಲ್ಲ. ಈ ಬಡಾವಣೆಗಳ ಅಭಿವೃದ್ಧಿ ಬಹಳ ಕುಂಠಿತವಾಗಿದೆ. ಇದರ ಜೊತೆಗೆ ಇನ್ನೊಂದು ವಿಚಾರ ಅಂದ್ರೆ ಕಳೆದ ಎರಡು ತಿಂಗಳ ಹಿಂದೆ ಹುಡ್ಕೋದವರಿಗೆ ಸಾಲ ಮರುಪಾವತಿ ಮಾಡಬೇಕೆನ್ನುವ ಉದ್ದೇಶದಿಂದ ಬಹಿರಂಗ ಹರಾಜು ಮೂಲಕ ಕೆಲವು ನಿವೇಶನಗಳನ್ನು ವಿಲೇವಾರಿ ಮಾಡಬೇಕು ಎಂದು ಹೇಳಿ ಒಂದು ಸುತ್ತೋಲೆಯನ್ನು ಕರ್ನಾಟಕ ಗೃಹ ಮಂಡಲಿಯವರು ರಾಜ್ಯಾದ್ಯಂತ ಹೊರಡಿಸಿದ್ದಾರೆ. ಅನೇಕ ಕಡೆ ಬಹಿರಂಗ ಹರಾಜು ಮೂಲಕ ನಿವೇಶನಗಳನ್ನು ಮಾರಾಟ ಮಾಡಿ ಹಣವನ್ನು ಸಂಗ್ರಹಿಸಿ ಹುಡ್ಕೋದವರಿಗೆ 15 ಕೋಟಿ ರೂಪಾಯಿಗಳ ಸಾಲವನ್ನು ಮರುಪಾವತಿ ಮಾಡಬೇಕೆನ್ನುವ ದೃಷ್ಟಿಯಿಂದ ಪ್ರಯತ್ನಮಾಡಿದ್ದಾರೆ. ಸಾರ್ವಜನಿಕರಿಗೆ ಒಂದು ರೀತಿಯಲ್ಲಿ ಆತಂಕ ಉಂಟಾಗಿ ಬಹಿರಂಗ ಹರಾಜು ಮಾಡುವುದನ್ನು ಸಾರ್ವಜನಿಕರು ತಡೆಹಿಡಿದಿದ್ದಾರೆ. ಇದಕ್ಕೆ ಕಾರಣ ಏನು ಎಂದು ಹೇಳಬೇಕು. ಅಂದರೆ ಬಡಾವಣೆಗಳಲ್ಲಿ ಅಭಿವೃದ್ಧಿ ಆಗದೇ ಇರುವುದೇ ಒಂದು ದೊಡ್ಡ ಕಾರಣ. ಉದಾಹರಣೆಗೆ ಹೇಳುವುದಾದರೆ ಬಡಾವಣೆಯನ್ನು ಅಭಿವೃದ್ಧಿ ಮಾಡಿದ್ದೇವೆ ಎಂದು ಹೇಳಿ ಕರ್ನಾಟಕ ಗೃಹ ಮಂಡಲಿಯವರು ಮನೆ ಮಾಲೀಕರಿಗೆ ಒಂದು ನೋಟೀಸ್ ನೀಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಅಪರೂಪಕ್ಕೆ ಸರ್ಕಾರ ಅನೇಕ ಬೋರ್ಡ್ ಕಾರ್ಪೊರೇಷನ್‌ಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿದೆ. ಸಾಮಾನ್ಯವಾಗಿ ಸದಸ್ಯರು ಮಾತನಾಡುವಾಗ ಅನೇಕ ಉತ್ತಮವಾದ ಸಲಹೆಗಳನ್ನು ಕೊಡುವುದಕ್ಕೆ ಅವಕಾಶ ಇದೆ. ಆ ಮಂಡಲಿಯ ಅಧ್ಯಕ್ಷರು ಬಂದು ಅಲ್ಲಿ ಕುಳಿತುಕೊಂಡು ಅವರ ಕಿವಿಗೆ ಹಾಕಿ ಕೊಂಡರೆ ಒಳ್ಳೆಯದು. ಕನಿಷ್ಟಪಕ್ಷ ಅವರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳು ಬಂದಾಗ ಆ ಸಂಸ್ಥೆಯ ಅಧ್ಯಕ್ಷರು ಉಪಸ್ಥಿತರಿದ್ದರೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಮಂತ್ರಿಗಳು ಎಲ್ಲಾ ವಿಷಯಗಳ ಕಡೆ ಗಮನ ಕೊಡಲು ಸಾಧ್ಯವಿರುವುದಿಲ್ಲ. ಆ ಬಗ್ಗೆ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಇನ್ನೂ ವಾಸ್ತವ ಜಗತ್ತಿಗೆ ಬಂದಿಲ್ಲ ಎಂದು ಕಾಣುತ್ತದೆ. ಮೊದಲನೇ ಸಾಲಿನಲ್ಲಿ ಯಾವ ಮಂತ್ರಿಗಳೂ ಇಲ್ಲ. ಏನೋ ಒಂದು ರೀತಿ ಸಂತೆ ಮಾಡಿಕೊಂಡು ಹೋಗಲು ಅವರು ತೀರ್ಮಾನ ಮಾಡಿರುವಾಗ ಬಲವಂತವಾಗಿ ತಾವು ಏಕೆ ಅವರನ್ನು ಉಳಿಸಲು ಹೊಗುತ್ತೀರಿ? ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತೇನೆ ಮುಖ್ಯಮಂತ್ರಿಗಳು ಯಾವುದೋ ವಿಶೇಷವಾದ ಕಾರಣದಿಂದ ಬಂದಿಲ್ಲ. ಆದರೆ, ಇದು ಶೋಭೆ ತರುವಂತಹ ಸಂಗತಿಯೇ? ಈಗ ಪ್ರಮುಖವಾದ ವಿಷಯ ಮೇಲೆ ಚರ್ಚೆ ಪ್ರಾರಂಭವಾಗಿದೆ. ಮೊದಲನೇ

ಸಾಲಿನಲ್ಲಿ ಒಬ್ಬ ಕ್ಯಾಬಿನೆಟ್ ಸಚಿವರೂ ಇಲ್ಲ. ಮುಖ್ಯಮಂತ್ರಿಗಳು ಇಲ್ಲ. ಈ ವಿಷಯ ರಾಜ್ಯದ ಜನರಿಗೆ ಗೊತ್ತಾಗಲಿ ಎಂದು ನಾವು ವಾಕ್‌ಔಟ್‌ಮಾಡುತ್ತೇವೆ. ಮುಖ್ಯಮಂತ್ರಿಗಳು ಅಥವಾ ಉಪ ಮುಖ್ಯಮಂತ್ರಿಗಳು ಸದನ ನಡೆಯುವಾಗ ಇರಲೇಬೇಕು. ಇಲ್ಲದಿದ್ದರೆ ನಾನು ವಾಕ್ ಔಟ್‌ಮಾಡುತ್ತೇನೆ. ಅಧಿಕಾರಿಗಳು ಬರೆದುಕೊಳ್ಳುವುದಾದರೆ, ಈ ವ್ಯವಸ್ಥೆಯೆ ಅಗತ್ಯವಿಲ್ಲ. ಬೆಳಿಗ್ಗೆ ಬೇಗ ಎದ್ದು 10 ಗಂಟೆಗೆ ಬರಲು ಆಗುವುದಿಲ್ಲ ಅಂದರೆ ಸದನ 12 ಗಂಟೆಗೆ ಸೇರೋಣ. ಇದನ್ನು ನಾನಂತೂ ಖಂಡನೆ ಮಾಡುತ್ತೇನೆ. ಇದು ಈ ಸರ್ಕಾರದ ಬೇಜವಾಬ್ದಾರಿ ವರ್ತನೆಯಾಗಿದೆ. ತಾವು ಮೊದಲನೇ ಸಾಲಿನಲ್ಲಿ ಕುಳಿತಿರುವವರಿಗೆ ದಯವಿಟ್ಟು ಸೂಚನೆ ಕೊಡಿ. ಮುಖ್ಯಮಂತ್ರಿಗಳು ಅಥವಾ ಉಪ ಮುಖ್ಯಮಂತ್ರಿಗಳು ಇರಲೇಬೇಕೆಂದು ತಿಳಿಸಿ ತಾವು ವಿಶೇಷ ಕಾರಣದಿಂದ ಅನುಮತಿ ಕೊಟ್ಟರೆ ಅದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ. ಇದು ಆಗಲಿಲ್ಲ ಅಂದ್ರೆ ನಾವು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲ. ನಾವು ತಮ್ಮ ಮನಸ್ಸಿಗೆ ನೋವು ಮಾಡಬೇಕೆಂದಿಲ್ಲ. ನಮ್ಮ ಕೆಲಸ ನಾವು ಮಾಡಬೇಕಾಗುತ್ತದೆ. ಇದಕ್ಕಿಂತ ದೊಡ್ಡ ಕೆಲಸ ಅವರಿಗೆ ಏನು ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕೋರಂ ನಾವೇ ಮಾಡಿ ಕೊಡಬೇಕು ಜೊತೆಗೆ ನಾವೇ ಭಾಷಣ ಮಾಡಬೇಕು. ನಮ್ಮ ಭಾಷಣ ಬರೆದುಕೊಳ್ಳುವವರು ಇಲ್ಲ, ಯಾರು ಇಲ್ಲ ಅಂದರೆ, ನಮ್ಮ ಸಲಹೆಗಳನ್ನು ನಾವು ಯಾರಿಗೆ ಹೇಳುವುದು?

ಅಧ್ಯಕ್ಷರು : ಏನೋ ತಿಳಿದವರು ಎಂದು ನಿಮ್ಮ ಮೇಲೆ ನಂಬಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಛೀಮಾರಿ ಆದರೂ ಹಾಕಬೇಕಲ್ಲ. ಪದೇ ಪದೇ ತಾವು ನಮ್ಮ ಕಡೆಯೇ ಹೇಳಿಕೊಂಡು ಹೋದರೆ ಹೇಗೆ? ಆ ಕಡೆ ಸ್ವಲ್ಪ ಒತ್ತಾಯ ಮಾಡಿ ನಿಮಗೆ ನಾಚಿಕೆ ಬರುವುದಿಲ್ಲವೆ ಎಂದು ಕೇಳಿದರೆ ಆಗ ಸ್ಪೀಕರ್‌ರವರು ನಮಗೆ ಈ ರೀತಿ ಹೇಳಿದ್ದಾರೆ ಎಂದು ಹೇಳಿ ಸಿಟ್ಟು ಬಂದರೂ ಬರಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಸದಸ್ಯರೂ ಇಲ್ಲ, ಮಂತ್ರಿಗಳೂ ಇಲ್ಲ, ಇಲ್ಲಿ ಗ್ರೂಪ್ ಮೀಟಿಂಗ್ಸ್ ಏನೋ ನಡೆಯುತ್ತಿದೆ. ಅದು ಏನು ನಡೆಯುತ್ತಿದೆ ಎಂದು ಅದನ್ನಾದರೂ ಹೇಳಿ.

ಅಧ್ಯಕ್ಷರು : ನಿಮಗೆ ಗೊತ್ತಿಲ್ಲದೆ ಅದು ಹೇಗೆ ನಡೆದುಹೋಗುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ನಂಜೇಗೌಡರೆ ಹೇಳಿ ಬಿಡಲಿ ಸಾರ್.

ಶ್ರೀ ಬಿ.ಎಸ್.ಯಡಿಯೂರಪ್ಪ : 3 ದಿವಸಗಳಿಂದ ತಾವು ನೋಡುತ್ತಿರಬಹುದು. ಒಬ್ಬರ ಮುಖದಲ್ಲಿಯೂ ಕಳೆ ಇಲ್ಲ. ಗೊಂದಲದ ವಾತಾವರಣದಲ್ಲಿ ಇದ್ದಾರೆ. ಒಬ್ಬೊಬ್ಬರದ್ದು ಒಂದೊಂದು ಗುಂಪು. ಬೆಳಿಗ್ಗೆ ಏನಾದರೂ ಸಭೆ ಇದ್ದು ಮಂತ್ರಿಗಳು ಎಲ್ಲಾ ಒಟ್ಟಿಗೆ ಸೇರಿದ್ದರೆ ಅದನ್ನಾದರೂ ಹೇಳಿ. ಪತ್ರಿಕೆಗಳ ಮೂಲಕ ನನಗೆ ತಿಳಿದು ಬಂದಿರುವುದೇನೆಂದರೆ ಈ ಸರ್ಕಾರ ಗೊಂದಲದಲ್ಲಿ ಇದೆ. ಅವರು ತಮ್ಮ ಕಡೆಯ ದಿನಗಳನ್ನು ಎಣಿಸುತ್ತಿದ್ದಾರೆ.

ಶ್ರೀ ಎನ್.ರಾಜಣ್ಣ : ನಾವು ದಿನಗಳನ್ನು ಎಣಿಸುತ್ತಿಲ್ಲ. 5 ವರ್ಷಗಳನ್ನು ಪೂರ್ಣಗೊಳಿಸುತ್ತೇವೆ.

ಅಧ್ಯಕ್ಷರು : ರಾಜಣ್ಣನವರ ಹೇಳಿಕೆ ನಿಜ. ಆ ನಿಜ ಏನೂ ಎಂದು ಅವರೇ ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ನನ್ನ ಕಛೇರಿಯಲ್ಲಿ ಕುಳಿತಿದ್ದಾರೆ. ಆದ್ದರಿಂದ ಎಲ್ಲಾ ಫ್ಲೋರ್ ಲೀಡರ್ಸ್ ನನ್ನ ಕಛೇರಿಗೆ ಬಂದರೆ ಅನುಕೂಲ ಮಾತುಕತೆ ಮಾಡಬಹುದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಹೆಚ್.ಯು.ಡಿ ಮಂತ್ರಿ ಇದ್ದಾರೆ. ಅರ್ಬನ್ ಡೆವಲಪ್‌ಮೆಂಟ್ ಮಂತ್ರಿ ಇದ್ದಾರೆ. ಮಾನ್ಯ ಸದಸ್ಯರು ಏನು ಸಲಹೆ ಕೊಡುತ್ತಾರೋ ಕೊಡಲಿ ಅವರು ಬರೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಸ್ಪತ್ರೆಗೆ ಕೆಲವು ಜನ ಹೋಗಿದ್ದಾರೇನು?

ಶ್ರೀ ಎಂ.ಸಿ. ನಾಣಯ್ಯ : ನಮ್ಮ ಆರೋಗ್ಯ ಬಹಳ ಚೆನ್ನಾಗಿದೆ. ನಮ್ಮಲ್ಲಿ ಯಾರಿಗೂ ಬ್ಲಡ್ ಪ್ರೆಜರ್, ಡಯಾಬಿಟೀಸ್ ಯಾವುದೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನವನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದಾರೆ.

(ಮಾನ್ಯ ಉಪಾಧ್ಯಕ್ಷರು, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ರಾಜ್ಯದ ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಿಸಿರತಕ್ಕಂಥ ಅನೇಕ ಬಡಾವಣೆಗಳಲ್ಲಿ ಅನೇಕ ಜನ ಗೃಹ ನಿರ್ಮಾಣ ಮಂಡಲಿಯಿಂದ ಮನೆಯನ್ನು ಕೊಂಡುಕೊಂಡಿದ್ದಾರೆ. 10 ವರ್ಷಗಳ ಹಿಂದೆ ಅದಕ್ಕೆ ಬೆಲೆಯನ್ನು ನಿಗದಿಪಡಿಸಲಾಗಿತ್ತು. 10-12 ವರ್ಷಗಳ ನಂತರ ಇಲಾಖೆ ವತಿಯಿಂದ ಆ ಮನೆಯ ಮಾಲೀಕರಿಗೆ ತಮಗೆ ಈ ಹಿಂದೆ ಈ ಮನೆ ಅಲಾಟ್ ಆಗಿದ್ದು ಇದರ ಬೆಲೆ ಈಗ ಹೆಚ್ಚಾಗಿದ್ದು ಈ ಬೆಲೆಯನ್ನು ಇಲಾಖೆಗೆ ಕಟ್ಟಬೇಕು ಎಂದು ನೋಟಿಸ್ ಕೊಡುತ್ತಾರೆ. ಮಾನ್ಯ ಉಪಾಧ್ಯಕ್ಷರೇ, ನಮಗೆಲ್ಲಾ ತಿಳಿದ ಹಾಗೆ ಈ ಕೆ.ಹೆಚ್.ಬಿ ಮನೆಗಳನ್ನು ಕೊಡುವಂತಹ ಸಂದರ್ಭದಲ್ಲಿ 10 ವರ್ಷಗಳ ಕಾಲ ಕಂತಿನ ಆಧಾರದ ಮೇಲೆ ಮನೆ ಮಾಲೀಕರು ಆ ಹಣವನ್ನು ಸಂದಾಯ ಮಾಡಲು ಅವಕಾಶ ಇದ್ದು ಹಿಂದೆ ಸಹ ಆ ಮನೆಗಳಿಗೆ ಬೆಲೆ ನಿಗದಿ ಮಾಡಿರುವುದು ಕಾನೂನು ಬದ್ಧವಾಗಿದೆ ಎನ್ನುವುದು ಕಡತಗಳಲ್ಲಿ ಇರುವ ವಿಚಾರ. 10 ವರ್ಷಗಳ ನಂತರ ಮನೆ ಮಾಲೀಕರಿಗೆ ನೋಟಿಸ್ ಕೊಟ್ಟು ಹೆಚ್ಚಿನ ಹಣ ಪಾವತಿ ಮಾಡಿ ಎಂದು ಯಾವ ಕಾನೂನಿನ ಪ್ರಕಾರ ಅವರನ್ನು ಒತ್ತಾಯ ಮಾಡುತ್ತೀರಿ ಎನ್ನುವುದಕ್ಕೆ ಮಾಹಿತಿ ಇಲ್ಲ. ಈಗ ಆಯುಕ್ತರು ಮತ್ತು ಹಾಲಿ ಇರತಕ್ಕಂಥ ಕೆ.ಹೆಚ್.ಬಿ ಅಧ್ಯಕ್ಷರು, ಇವರಿಬ್ಬರಿಗೂ ಇದರ ಸಂಪೂರ್ಣ ಮಾಹಿತಿಯನ್ನು ಮನೆಯ ಮಾಲೀಕರಿಗೆ ತಾವು ಕೊಡಬೇಕೆಂದು ನಾನು ಮನವಿ ಮಾಡಿದ್ದೆ. 10 ವರ್ಷದ ನಂತರ ಪ್ರಾಯಶಃ 70 ಸಾವಿರ ರೂಪಾಯಿಗಳನ್ನು ಕೊಟ್ಟು ಪಡೆದಿರತಕ್ಕಂಥ ಮನೆಗೆ ಇವತ್ತು 80 ಸಾವಿರ ರೂಪಾಯಿ ಹಣ ಕಟ್ಟಿ ಎಂದು ನೋಟೀಸ್ ಕೊಟ್ಟಿದ್ದಾರೆ. ಇದು ಯಾವ ಆಧಾರದ ಮೇಲೆ ಎಂದು ಹೇಳಬೇಕಾಗುತ್ತದೆ. ಕಾರಣ ಏನು ಎಂದು ಹೇಳಿದರೆ ಸನ್ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಬಡ್ಡಿ ಸಮೇತ ಈ ಕಂತುಗಳನ್ನು ಕೆ.ಹೆಚ್.ಬಿಯವರು

ನಿಗದಿಪಡಿಸಿದ್ದಾರೆ. ಆದರೆ, ಹೆಚ್ಚಿಗೆ ಹಣವನ್ನು ಪಾವತಿ ಮಾಡುವ ಬಗ್ಗೆ ಯಾವ ಆಧಾರದ ಮೇಲೆ ಈ ಮನೆಯ ಮಾಲೀಕರಿಗೆ ನೋಟೀಸ್ ನೀಡಿದ್ದಾರೆ ಎಂಬುದರ ಬಗ್ಗೆ ನಾನು ತಮ್ಮ ಮುಖಾಂತರ ಸರ್ಕಾರದ ಗಮನ ಮತ್ತು ಇಲಾಖೆಯ ಮಂತ್ರಿಗಳ ಗಮನ ಸಳೆಯುತ್ತಿದ್ದೇನೆ. ಪ್ರತಿಯೊಬ್ಬ ಮನೆಯ ಮಾಲೀಕನಿಗೆ ವಿವರವಾದ ಮಾಹಿತಿಯನ್ನು ತಾವು ಕೊಡಬೇಕಾಗಿದೆ. ಏಕೆಂದರೆ,10 ವರ್ಷಗಳ ಹಿಂದೆ ಅದಕ್ಕೆ ಬೆಲೆ ನಿಗದಿಪಡಿಸಿದಂತದ್ದು ಬಹುಶಃ 80,000 ರೂಪಾಯಿಗಳು ಇದ್ದರೆ ಇವತ್ತು ಹೆಚ್ಚುವರಿಯಾಗಿ 60,000 ರೂಪಾಯಿಗಳನ್ನು ಕಟ್ಟುವಂತೇ ತಾವು ನೋಟೀಸ್ ನೀಡಿದ್ದೀರಿ. ರಾಜ್ಯದ ಯಾವ ಯಾವ ಭಾಗಗಳಲ್ಲಿ ಯಾವಯಾವ ಜಿಲ್ಲೆಗಳ ಬಡಾವಣೆಗಳಲ್ಲಿ ಬಂದಿದ್ದಾವೋ ಆ ಮಾಲೀಕರಿಗೆ ಇವತ್ತು ನೋಟೀಸ್ ಮುಖಾಂತರ ಹಣ ಪಾವತಿಸಲು ಈಗಾಗಲೇ ಸರ್ಕಾರ ಮತ್ತು ಇಲಾಖಾ ಅಧಿಕಾರಿಗಳು ಕೋರಿರುವುದರಿಂದ ಇದರ ಸಂಪೂರ್ಣವಾದಂತಹ ಮಾಹಿತಿ ಆ ಮಾಲೀಕರಿಗೆ ಒದಗಿಸಿಕೊಡಬೇಕಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ತಾವು ಬಹಳ ಉತ್ಸಾಹದಿಂದ ಈ ಬಡಾವಣೆಗಳ ಅಭಿವೃದ್ಧಿಗಾಗಿ, ನಾಗರೀಕ ಸೌಲಭ್ಯಗಳ ಸವಲತ್ತುಗಳನ್ನು ಒದಗಿಸುವುದಕ್ಕಾಗಿ ಅನೇಕ ಸಂದರ್ಭಗಳಲ್ಲಿ ಮತ್ತು ಸಾರ್ವಜನಿಕ ವೇದಿಕೆಯಲ್ಲಿ ಪತ್ರಿಕೆಯ ಮುಖಾಂತರವಾಗಿ ಈ ಸದನದಲ್ಲಿ ಹೇಳಿರುವಂತಹ ವಿಚಾರಗಳನ್ನು ಇವತ್ತು ನೋಡಿದಾಗ ಪ್ರಾಯಶಃ ಈ ಬಡಾವಣೆಯ ಅಭಿವೃದ್ಧಿಯ ಬಗ್ಗೆ ತಾವು ಈ 2 ವರ್ಷ 8 ತಿಂಗಳ ಅವಧಿಯಲ್ಲಿ ಏನು ಕೆಲಸ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯಬೇಕಾಗುತ್ತದೆ. ಕಾರಣವೇನೆಂದರೆ, ನಮ್ಮ ಕಾರ್ಯಕ್ರಮದಂತೆ ಈ ಬಡಾವಣೆಗಳಿಗೆ ಡಾಂಬರೀಕರಣ ಮಾಡತಕ್ಕಂಥದ್ದು ಬಹಳ ಅವಶ್ಯಕವಾಗಿದ್ದು ಇದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ. ಅಲ್ಲಿ ನಾಗರೀಕ ಸವಲತ್ತುಗಳು ಎಂದು ಹೇಳಿದರೆ, ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಇವತ್ತು ಈ ಇಲಾಖೆಯಾಗಲೀ, ಸರ್ಕಾರಕ್ಕೆ ಆಗಲಿ, ಅದರ ಬಗ್ಗೆ ಯಾವುದೇ ರೀತಿಯ ಕಾಳಜಿ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮುಖ್ಯವಾಗಿ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುವಂತಹ ವಿಚಾರ ಅಂದರೆ ನನ್ನದೇ ಆದಂತಹ ಮತಕ್ಷೇತ್ರದಲ್ಲಿ 2,000 ಕ್ಕಿಂತ ಮೀರಿ ಮನೆಯನ್ನು ಹೊಂದಿರುವಂತಹ ಒಂದು ಬಡಾವಣೆ ಇವತ್ತು ನಮ್ಮ ಕ್ಷೇತ್ರದಲ್ಲಿ ಇದೆ. ಆದರೆ ಇಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವ ಬಗ್ಗೆ ಇವತ್ತಿನವರೆಗೂ ಈ ಇಲಾಖೆಯಿಂದ ಪೌರಕಾರ್ಮಿಕರನ್ನು ನೇಮಿಸುವುದಾಗಲ್ಲಿ, ಅಥವಾ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವುದರ ಬಗ್ಗೆ ಯಾವುದೇ ರೀತಿಯ ತೀರ್ಮಾನವನ್ನು ಇಲಾಖೆಯಲ್ಲಾಗಲೀ ಅಥವಾ ಮಂಡಳಿಯಲ್ಲಾಗಲಿ ತೆಗೆದುಕೊಂಡಿಲ್ಲ ಎಂದು ಹೇಳಿದರೆ ಇದು ವಿಷಾದನೀಯವಾದದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೊತೆಗೆ ತಮಗೆ ಗೊತ್ತಿರುವ ಹಾಗೆ ನನ್ನ ಮತ ಕ್ಷೇತ್ರದಲ್ಲಿ ಅಲ್ಲ, ಇವತ್ತು ರಾಜ್ಯದ ಅನೇಕ ಕ್ಷೇತ್ರಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇದೆ. ಇನ್ನು 2,000 ಕ್ಕಿಂತ ಹೆಚ್ಚು ಮನೆಗಳನ್ನು ಹೊಂದಿರುವಂತಹ ನನ್ನ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ ಬಹಳ ಉಂಟಾಗಿದ್ದು, ತಾತ್ಕಾಲಿಕವಾಗಿ ಬಡಾವಣೆಗಳಲ್ಲಿ ಕೊಳವೆ ಬಾವಿಗಳನ್ನು ಅಳವಡಿಸುವ ಬಗ್ಗೆ ಆದರೂ ಸಹ ಈ ಸರ್ಕಾರ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಆದುದರಿಂದ, ತಮ್ಮ ಮುಖಾಂತರವಾಗಿ ಸರ್ಕಾರವನ್ನು ಇವತ್ತು ಒತ್ತಾಯ ಮಾಡುವುದೇನೆಂದರೆ, ಈ ಬಡಾವಣೆಗಳ ಅಭಿವೃದ್ಧಿಯ ಬಗ್ಗೆ

ಚಿಂತನೆ ಮಾಡಬೇಕು. ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದಕ್ಕಾಗಿ ಕೊಳವೆ ಬಾವಿಗಳನ್ನಾದರೂ ಕನಿಷ್ಟ ಪಕ್ಷ ಅಳವಡಿಸುವಂತಹ ಪ್ರಯತ್ನ ಮಾಡಬೇಕು. ಈ ಅಭಿವೃದ್ಧಿ ಕೆಲಸವನ್ನು ಮಾಡಿರುವಂತಹ ಖರ್ಚು ವೆಚ್ಚವನ್ನು ಮನೆಯ ಮಾಲೀಕರ ತಲೆಯ ಮೇಲೆ ಹಾಕುವಂತಹ ಪ್ರಯತ್ನ ಇವತ್ತು ಸರ್ಕಾರದಲ್ಲಿ ನಡೆಯುತ್ತಾ ಇದೆ. ಈ ಪ್ರಯತ್ನಗಳು ನಡೆಯಕೂಡದು. ಸಾರ್ವಜನಿಕರಿಗೆ ಸವಲತ್ತುಗಳನ್ನು ಒದಗಿಸಿಕೊಡುವಂತಹ ಪ್ರಯತ್ನ ಅಥವಾ ಸೌಕರ್ಯವನ್ನು ಒದಗಿಸುವಂತಹ ನಿರ್ಣಯವನ್ನು ಮಾಡಿರುವಂತಹ ಮಂಡಳಿ ಹಾಗೂ ಸರ್ಕಾರ ಸಾರ್ವಜನಿಕರು ಅಥವಾ ಮನೆಯ ಮಾಲೀಕರ ಮೇಲೆ ಹೊರೆಯಾಗದಂತೆ ಈ ಅಭಿವೃದ್ಧಿ ಕೆಲಸಗಳನ್ನು ಸರ್ಕಾರದ ವತಿಯಿಂದ, ಇಲಾಖಾ ವತಿಯಿಂದ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಾ, ತಮ್ಮ ಗಮನಕ್ಕೆ ಬಂದಿರುವಂತಹ ಒಂದು ವಿಚಾರವನ್ನು ನಾನು ಮತ್ತೊಮ್ಮೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇನ್ನು ಮನೆಗಳಿಗೆ ನಿಗದಿಪಡಿಸಿದಂತಹ ಬೆಲೆಗಿಂತ ಹೆಚ್ಚು ಬೆಲೆ ಪಾವತಿಸುವಂತೆ ನೋಟೀಸ್ ಕೊಟ್ಟಿರುವ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಆ ಭಾಗದ ಶಾಸಕರಿಗಾಗಲೀ, ಮನೆಯ ಮಾಲೀಕರಿಗಾಗಲಿ, ತಲುಪಿಸುವಂತೆ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಕಾನೂನು ದೃಷ್ಟಿಯಲ್ಲಿ ನಾವು ನೋಡಿದಾಗ 12 ವರ್ಷಗಳ ಕಾಲ ಮೀರಿದ ನಂತರ ಕಾನೂನು ಬಾಗಿಲು ತಟ್ಟಿದರೂ ಸಹ ನ್ಯಾಯ ಸಿಗದಿರುವಂತಹ ಅವಕಾಶಗಳು ಆ ಮನೆಯ ಮಾಲೀಕರಿಗೆ ಇರುವುದರಿಂದ ನಾವು ಸರ್ಕಾರದಿಂದ ಈ ನ್ಯಾಯವನ್ನು ಒದಗಿಸಿಕೊಡಬೇಕೆಂದು ಹೇಳಿ ತಮ್ಮ ಮುಖಾಂತರ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಜೊತೆಗೆ ಹೊಸ ಬಡಾವಣೆಗಳನ್ನು ಮಾಡುವುದರ ಬಗ್ಗೆ ಆಗಲೇ ಗೃಹಮಂಡಳಿಯ ಅಧ್ಯಕ್ಷರು, ಮಂತ್ರಿಗಳು, ಹಾಗೂ ಸರ್ಕಾರದವರು ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದಾರೆ. ನಾನು ಇವತ್ತು ಒಂದು ವಿಚಾರವನ್ನು ಹೇಳುತ್ತೇನೆ. ಬೇಡಿಕೆ ಇರುವಂತಹ ಜಾಗಗಳಲ್ಲಿ ಮನೆಗಳನ್ನು ನಿರ್ಮಿಸುವಂತಹ ಕಾರ್ಯ ತಾವು ಆರಂಭ ಮಾಡಬೇಕಾಗುತ್ತದೆ. ಇವತ್ತು ಚಿಕ್ಕಮಗಳೂರಿನಲ್ಲಿ ಹೊಸ ಮನೆಗಳಿಗೆ ಸಾಕಷ್ಟು ಬೇಡಿಕೆ ಇದ್ದು ಅಗತ್ಯವಾಗಿ ಬೇಕಾಗುತ್ತದೆ. ಏಕೆಂದರೆ, ಗೃಹಮಂಡಳಿಯ ಅಧ್ಯಕ್ಷರು ಎಲ್ಲಾ ಶಾಸಕ ಮಿತ್ರರಿಗೆ ಗ್ರಾಮಾಂತರ ಪ್ರದೇಶದಲ್ಲಿ ನಾನು ನಿವೇಶನಗಳನ್ನು ಹಂಚುತ್ತೇನೆ ಮತ್ತು ಮನೆಗಳನ್ನು ಕಟ್ಟಿಸಿಕೊಡುತ್ತೇನೆಂದು ಪತ್ರ ಬರೆದಿದ್ದಾರೆ. ಆದುದರಿಂದ, ಆ ಭಾಗದ ಶಾಸಕರು ಇದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿ ನಮಗೆ ಒದಗಿಸಿಕೊಡಬೇಕೆಂದು ಕೇಳಿದ್ದಾರೆ. ಆದರೆ, ನಾನು ಒಂದು ವಿಚಾರವನ್ನು ಇವತ್ತು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ರೈತರು 50,000, 1,00,000, 2 ಲಕ್ಷ ರೂಪಾಯಿಗಳನ್ನು ಕೊಟ್ಟು ಕಟ್ಟಿದಂತಹ ಮನೆ ಪಡೆದುಕೊಳ್ಳಲು ಯಾರೂ ಪ್ರಯತ್ನ ಮಾಡುವುದಿಲ್ಲ. ಏಕೆಂದರೆ, ಆ ದೃಷ್ಟಿಯಿಂದ ತಾವು ಗ್ರಾಮಾಂತರ ಪ್ರದೇಶದಲ್ಲಿ ಪ್ರವೇಶ ಮಾಡುವುದಕ್ಕಿಂತ ಮುಂಚೆ ದಯಮಾಡಿ ಪಟ್ಟಣ ಪ್ರದೇಶಗಳಲ್ಲಿ ಮನೆಗಳ ಅಭಿವೃದ್ಧಿ ಮತ್ತು ಬಡಾವಣೆಗಳ ಅಭಿವೃದ್ಧಿ ಮಾಡುವಂತಹ ಪ್ರಯತ್ನವನ್ನು ಮಾಡಬೇಕು. ಅಲ್ಲಿ ನಾಗರೀಕ ಸವಲತ್ತುಗಳನ್ನು ಒದಗಿಸುವಂತಹ ಪ್ರಯತ್ನವನ್ನು ತಾವು ಮಾಡಬೇಕು. ಆ ದೃಷ್ಟಿಯಿಂದ ಪಟ್ಟಣಗಳ ಭಾಗಗಳಲ್ಲಿ ಪ್ರಯತ್ನ ನಡೆಯಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮಾರಾಟ ಮಾಡಲು ತಾವು ಸಿದ್ಧವಾಗಿದ್ದರೂ ಸಹ ಮನೆಕೊಳ್ಳುವ

ಜನರು ಯಾರೂ ಸಿಗುವುದಿಲ್ಲ, ಎನ್ನುವ ಭಾವನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಗೃಹಮಂಡಳಿಯ ಮನೆಯನ್ನು ಕೊಳ್ಳುವಂತಹ ಶಕ್ತಿಯುಳ್ಳಂತಹ ರೈತರು ಗ್ರಾಮಾಂತರ ಪ್ರದೇಶಗಳಲ್ಲಿ ಸಿಗದೇ ಇರುವುದರಿಂದ ಪಟ್ಟಣ ಭಾಗಗಳಲ್ಲಿ ತಾವು ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವಂತೆ ತಾವು ಪ್ರಯತ್ನ ನಡೆಸಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮ್ಮನ್ನು ಕೋರುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಇದು ಒಂದು ವಿಚಿತ್ರವಾದಂತಹದ್ದು, ಮಾನ್ಯ ಬಚ್ಚೇಗೌಡರು ದಯವಿಟ್ಟು ಇದರ ಕಡೆಗೆ ಗಮನಕೊಡಬೇಕು. ತಾವು ನೀಡಿರುವಂತಹ ವಾರ್ಷಿಕ ವರದಿ ಮತ್ತು ಪರ್‌ಫಾರ್ಮೆನ್ಸ್ ಬಜೆಟ್ ಪುಸ್ತಕ ಏನು ಇದೆ ಅವೆರಡನ್ನೂ ತಾವು ಹೊಂದಾಣಿಕೆ ಮಾಡಿ ನೋಡಬೇಕಾಗುತ್ತದೆ. ಒಂದು ಕಡೆ ಪುರಸಭೆ ನಗರಸಭೆ, ಪಟ್ಟಣದ ಪಂಚಾಯತಿ ಸಂಖ್ಯೆ 208 ಇದೆ ಎಂದು ಹೇಳಿದ್ದೀರಿ. ಇನ್ನೊಂದು ಪುಸ್ತಕದಲ್ಲಿ ಸಂಖ್ಯೆ. 205 ಇವೆ ಎಂದು ಹೇಳುತ್ತಾರೆ. ಇದು ಯಾವ ಕಾರಣಕ್ಕಾಗಿ ವ್ಯಾತ್ಯಾಸ ಆಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ಅಧಿಕೃತವಾಗಿ ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿ ಹೆಚ್ಚು ಮುನಿಸಿಪಾಲಿಟಿಗಳು ಇವೆ ಎನ್ನುವುದರ ಬಗ್ಗೆ ಸರಿಯಾದಂತಹ ಮಾಹಿತಿ ಈ ಪುಸ್ತಕದಲ್ಲಿ ಇಲ್ಲವೆಂದು ಹೇಳಿದ್ದೀರಿ. ಇದು ಏಕೆ ಹೀಗಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಹಿಂದಿನ ವರ್ಷ ನಗರಾಭಿವೃದ್ಧಿ ಇಲಾಖೆಯ ವಾರ್ಷಿಕ ವರದಿಯಲ್ಲಿ 208 ಪುರಸಭೆಗಳಿವೆ ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಪರ್‌ಫಾರ್ಮೆನ್ಸ್ ಪುಸ್ತಕದಲ್ಲಿ 205 ಪುರಸಭೆ, ನಗರಸಭೆ, ಮತ್ತು ಪಟ್ಟಣ ಪಂಚಾಯತಿಗಳು ಇವೆ ಎಂದು ಹೇಳುತ್ತಾರೆ. ಈ ವ್ಯತ್ಯಾಸಗಳು ಏಕೆ ಆಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಆದುದರಿಂದ, ನಗರಾಭಿವೃದ್ಧಿ ಸಚಿವರು ಇದರ ಬಗ್ಗೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ತಾವು ನೀಡಿರುವ ಮಾಹಿತಿ ಪ್ರಕಾರ ಈ ಕಾರ್ಪೋರೇಷನ್‌ಗಳು 5 ಇವೆ, ಸಿಟಿ ಮುನಿಸಿಪಾಲಿಟಿ 32 ಇವೆ, ಟಿಎಂಸಿ 81 ಇವೆ, ಟೌನ್ ಪಂಚಾಯತಿ 87 ಇವೆ.

ಶ್ರೀ ಬಿ.ಎನ್. ಬಚ್ಚೇಗೌಡ 205ಕ್ಕೆ 8 ಸೇರಿಸುವುದರಿಂದ 213 ಆಗುತ್ತವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : 205 ಮತ್ತು 8 ಸೇರಿ 213 ಆಗಿದೆ. ಆ ದೃಷ್ಟಿಯಿಂದ ವ್ಯತ್ಯಾಸಗಳು ಏಕೆ ಆಗಿದೆ ಇದರ ಬಗ್ಗೆ ತಾವು ದಯವಿಟ್ಟು ಗಮನಕೊಡಬೇಕೆಂದು ಹೇಳುತ್ತೇನೆ. ಪರ್ ಫಾರ್ಮೆನ್ಸ್ ಬಡ್ಜೆಟ್ ಪುಸ್ತಕ 3 ತಿಂಗಳ ಹಿಂದೆ, ತಯಾರು ಆಗಿರತಕ್ಕಂತಹ ಪುಸ್ತಕ ಆದ್ದರಿಂದ ಇದರಲ್ಲಿ ವ್ಯತ್ಯಾಸಗಳಿವೆ. ಇದು ಆಗುವಂತದ್ದು ಬಿಡಿ. ಸನ್ಮಾನ್ಯ ಉಪಾಧ್ಯಕ್ಷರೆ, ಮುಖ್ಯವಾಗಿ ಇವತ್ತು ಸರ್ಕಾರದ ಕಾರ್ಯಕ್ರಮಗಳೇನೆಂದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಬಡವರ ಹಿತದೃಷ್ಟಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಒಂದು ಏಳಿಗೆಗಾಗಿ ಸರ್ಕಾರ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಆ ಕಾರ್ಯಕ್ರಮ ಏನೆಂದರೆ, ಆಶ್ರಯ ಯೋಜನೆ ತಮಗೆ 1996-97ನೇ ಸಾಲಿನ ಬಡ್ಜೆಟ್ ಪುಸ್ತಕದಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಅಳವಡಿಸಿದ್ದಾರೆ. ಅದರಲ್ಲಿ ವಸತಿ ಬಗ್ಗೆ ನಮ್ಮ ಆರ್ಥಿಕ ಮಂತ್ರಿಗಳು ಈ ಪುಸ್ತಕದ ಪುಟಸಂಖ್ಯೆ : 35ರಲ್ಲಿ ಐಟಂ 91ನೇ ವಿಚಾರ ಏನೆಂದರೆ ಸರ್ಕಾರ ಆರ್ಥಿಕವಾಗಿ ದುರ್ಬಲ ವರ್ಗಗಳ ವಸತಿ ಸಮಸ್ಯೆಯನ್ನು ಪರಿಹರಿಸಲು ಬದ್ದವಾಗಿದ್ದು ಇದಕ್ಕೆ ತೀವ್ರ ಗಮನ ನೀಡುವ ಸಲುವಾಗಿ ಒಂದು ಪ್ರತ್ಯೇಕ ವಸತಿ ಇಲಾಖೆಯನ್ನು ರಚಿಸಲಾಗಿದೆ ಎಂದು ಹೇಳಿದ್ದಾರೆ.

10.40 ಎ ಎಂ

1995ರ ಆಡಳಿತದಲ್ಲಿ ಸರ್ಕಾರ 2 ಲಕ್ಷ 54 ಸಾವಿರ ಮನೆ ನಿವೇಶನಗಳನ್ನು ವಿತರಣೆ ಮಾಡುವ ಮತ್ತು 1 ಲಕ್ಷ 26 ಸಾವಿರದ 244 ಮನೆಗಳನ್ನು ನಿರ್ಮಿಸುವ ಬೃಹತ್ ಯೋಜನೆಯನ್ನು ಪ್ರಾರಂಭಿಸಿದ್ದು ವಸತಿ ಯೋಜನೆಗಳ ವಿವರ ಈ ಮುಂದಿನಂತೆ ಇದೆ. ಆಶ್ರಯ ಯೋಜನೆಯಡಿಯಲ್ಲಿ 60 ಸಾವಿರ ಮನೆಗಳು, ಡಾ|| ಅಂಬೇಡ್ಕರ್ ವಸತಿ ಯೋಜನೆಯಲ್ಲಿ 25 ಸಾವಿರ ಮನೆಗಳು, ಇಂದಿರಾ ಅವಾಸ್ ಯೋಜನೆಯಡಿಯಲ್ಲಿ 41,244 ಮನೆಗಳು ಒಟ್ಟು 1 ಲಕ್ಷ 26 ಸಾವಿರದ 244 ಮನೆಗಳನ್ನು ನಿರ್ಮಿಸುತ್ತೇವೆಂದು ಈ ಸದನದಲ್ಲೇ ಮಾನ್ಯ ಅರ್ಥ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಯವರು ವಿವರವಾದ ಒಂದು ಹೇಳಿಕೆಯನ್ನು ಹೇಳಿದ್ದಾರೆ. ಆದರೆ, ಆಶ್ರಯ ಯೋಜನೆ ಅಸ್ತಿತ್ವಕ್ಕೆ ಬಂದನಂತರ ಎಷ್ಟು ಮನೆಗಳನ್ನು ಈ ಸರ್ಕಾರ ನಿರ್ಮಿಸಿದೆ ಎಂಬ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತಮ್ಮ ಮುಂದಿಡಲು ಪ್ರಯತ್ನ ಮಾಡುತ್ತೇನೆ. ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಾಗಲೀ, ನಗರ ಸಭೆ ವ್ಯಾಪ್ತಿಯಲ್ಲಾಗಲೀ, ಪುರಸಭೆ ವ್ಯಾಪ್ತಿಯಲ್ಲಾಗಲೀ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಾಗಲೀ ಒಂದು ಮನೆಯನ್ನು ಸಹಾ ಇವತ್ತಿನವರೆಗೆ ನಿರ್ಮಿಸುವಲ್ಲಿ ಈ ಸರ್ಕಾರ ವಿಫಲವಾಗಿದೆ. ಮನೆಗಳನ್ನು ವಿತರಣೆ ಮಾಡುವ ಬಗ್ಗೆ ಹತ್ತಾರು ಆದೇಶಗಳನ್ನು ಮಾತ್ರ ಹೊರಡಿಸಿ ಆಯಾ ಕ್ಷೇತ್ರದಲ್ಲಿ ತಾಲ್ಲೂಕಿನ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿದ್ದು ಆ ಸಮಿತಿಯವರು ನಿವೇಶನ ಹಾಗೂ ಮನೆಗಳನ್ನು ವಿತರಿಸುವಂಥ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆಂದು ತಿಳಿಸಲಾಗಿದೆ. ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ಆಶ್ರಯ ಮನೆಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದಂಥ ಸರ್ಕಾರ ಎಷ್ಟು ಮನೆಗಳನ್ನು ಕೊಡಲಾಗಿದೆ ಎಂಬ ಬಗ್ಗೆ ಕೇಳುತ್ತೇನೆ. ಇದರ ಬಗ್ಗೆ ಸರ್ಕಾರವೇ ಒದಗಿಸಿಕೊಟ್ಟಿರುವ ಮಾಹಿತಿಯನ್ನು ತಮ್ಮ ಗಮನಕ್ಕೆ ತರುವುದಾದರೆ, 1995-96ನೇ ಸಾಲಿನಲ್ಲಿ 25 ಸಾವಿರ ಮನೆಗಳನ್ನು ನಿರ್ಮಿಸುವುದಕ್ಕೆ ಯೋಜನೆ ಹಾಕಿಕೊಳ್ಳಲಾಗಿತ್ತು, ಆದರೆ, ಅದರಲ್ಲಿ 10 ಪರ್‌ಸೆಂಟ್‌ನಷ್ಟೂ ಮನೆಗಳನ್ನು ಕಟ್ಟಿಸಿಕೊಡಲಿಕ್ಕೆ ಸಾಧ್ಯವಾಗಿಲಿಲ್ಲ. ನಮ್ಮ ಚಿಕ್ಕಮಗಳೂರು ಕ್ಷೇತ್ರದಲ್ಲಿ 1995-96ನೇ ಸಾಲಿನಲ್ಲಿ 375 ಮನೆಗಳನ್ನು ನಿರ್ಮಿಸುವಂಥ ಯೋಜನೆ ಇತ್ತು, ಅದರಲ್ಲಿ ಎರಡು ಮನೆಗಳನ್ನು ಮಾತ್ರ ಪೂರೈಸಿದ್ದೇವೆಂದು ಮಾಹಿತಿ ಕೊಡಲಾಗಿದೆ. ನಾನು ಹೇಳುವುದಾದರೆ, ಆ ಎರಡೂ ಮನೆಗಳೂ ಕೂಡ ಆಗಿಲ್ಲ. ಪಟ್ಟಣ ಪ್ರದೇಶದಲ್ಲಿ ಹಮ್ಮಿಕ್ಕೊಂಡಿರುವ ಆಶ್ರಯ ಕಾರ್ಯಕ್ರಮ ಏನೆದೆ? ಇದು ಸಂಪೂರ್ಣವಾದ ಸುಳ್ಳು ಮಾಹಿತಿಯನ್ನು ಸದನದ ಮುಂದೆ ಇಡಲಾಗಿದೆಯೆಂದು ಸರ್ಕಾರವನ್ನು ತಮ್ಮ ಮುಖಾಂತರ ನಾನು ದೂಷಣೆ ಮಾಡುತ್ತಿದ್ದೇನೆ. ನನ್ನ ಕ್ಷೇತ್ರ ಚಿಕ್ಕಮಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ 750 ನಿವೇಶನಗಳನ್ನು ಕೊಡಬೇಕೆಂದು 2 ವರ್ಷ 8 ತಿಂಗಳ ಹಿಂದೆ ನಿರ್ಣಯವಾಗಿದ್ದರೂ ಕೂಡ ಇವತ್ತಿನವರೆಗೂ ಒಂದು ನಿವೇಶನವನ್ನು ಸಹಾ ಕೊಡಲು ಸರ್ಕಾರ ವಿಫಲವಾಗಿದೆ. 2 ವರ್ಷ 8 ತಿಂಗಳಲ್ಲಿ ನಮ್ಮ ಕ್ಷೇತ್ರದಲ್ಲಿ ಒಂದು ಮನೆಯನ್ನು ನಿರ್ಮಿಸುವುದಕ್ಕೂ ಈ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಅದಕ್ಕಾಗಿ ಅವರು ಈ ಬಗ್ಗೆ ಹಮ್ಮಿಕ್ಕೊಂಡಿರುವ ಕಾರ್ಯಕ್ರಮಗಳೇನೆಂದು ಈ ಸಂದರ್ಭದಲ್ಲಿ ನಾನು ಕೇಳಬೇಕಾಗುತ್ತದೆ. ನಗರ ಸಭೆ ವ್ಯಾಪ್ತಿಯಲ್ಲಿ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಮತ್ತು ಮನೆಗಳನ್ನು ಕೊಡುವ ಬಗ್ಗೆ ಯಾವ ಪ್ರಸ್ತಾವಗಳು ಸರ್ಕಾರದ ಎದುರುಗಡೆ ಇವೆ ಎಂಬ ಬಗ್ಗೆ ಮಾನ್ಯ

ನಗರಾಭಿವೃದ್ಧಿ ಇಲಾಖೆ ಮಂತ್ರಿಯವರು ಹೇಳಬೇಕಾಗುತ್ತದೆ. ನಗರ ಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ನಿವೇಶನವಾಗಲೀ, ಮನೆಗಳನ್ನಾಗಲೀ ನಿರ್ಮಿಸುವುದಕ್ಕೆ ಈ ಸರ್ಕಾರ ಟೋಟಲ್ ಆಗಿ ಫೇಲ್ಯೂರ್ ಆಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಸರ್ಕಾರದಲ್ಲಿ ಏನೂ ಆಗಲೇ ಇಲ್ಲ, ಏನೂ ಮಾಡಲೇ ಇಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಶಿವರಾಮೇಗೌಡರು ಯಾವಾಗಲೂ ಸರ್ಕಾರದ ಪರವಾಗಿಯೇ ಮಾತನಾಡುತ್ತಾರೆ, ಅದಕ್ಕೆ ಏನು ಮಾಡುವುದೆಂದು ನಮಗೆ ಅರ್ಥವಾಗುತ್ತಿಲ್ಲ. ಇವರು ಇಂಡಿಪೆಂಡೆಂಟ್ ಆಗಿ ನಿಂತು ಗೆದ್ದು ಬಂದು ಸರ್ಕಾರದ ಪರವಾಗಿ ವಹಿಸಿ ಮಾತನಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಗೀರ್ ಅಹಮದ್ ಅವರು ಮಂತ್ರಿಯಾಗಿ ಕೆಲಸ ಮಾಡಿದವರು, ಈ ಸರ್ಕಾರ ಏನೂ ಮಾಡಿಲ್ಲ, ಅಧಿಕಾರಿಗಳೆಲ್ಲಾ ಸುಳ್ಳು ಮಾಹಿತಿ ಕೊಡುತ್ತಾರೆ, ಎನ್ನುವ ವಿಚಾರವನ್ನು ಹೇಳಿದ್ದಾರೆ. ಇಂಥ ವಿಷಯದಲ್ಲಿ ಸುಳ್ಳು ಮಾಹಿತಿ ಕೊಟ್ಟಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ನಿರ್ದಿಷ್ಟವಾಗಿ ಹೇಳಲಿ. ಅವರ ಕಾಲದಲ್ಲಿ ಯಾವ ಅಧಿಕಾರಿಗಳಿದ್ದರೋ ಅವರೇ ಈಗಲೂ ಇದ್ದಾರೆ. ಯಾವ ಅಧಿಕಾರಿಗಳನ್ನೂ ಬದಲಾವಣೆ ಮಾಡಿಲ್ಲ. ಈ ಸರ್ಕಾರ ಬಂದ ಮೇಲೆ ನನ್ನ ಕ್ಷೇತ್ರದಲ್ಲಿ ಒಂದು ಸಾವಿರ ಮನೆಗಳನ್ನು ಕಟ್ಟಲಾಗಿದೆ. ಗ್ರಾಮಾಂತರ ಪ್ರದೇಶ ಮತ್ತು ಪಟ್ಟಣ ಪ್ರದೇಶಗಳಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲವೆಂದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರ ಏನೂ ಮಾಡಿಲ್ಲ ಎಂಬ ವಿಷಯವನ್ನು ಸರ್ಕಾರದವರು ಇಟ್ಟಿರತಕ್ಕಂಥ ಬೇಡಿಕೆ ಮುಖೇನವೇ ಅವರು ಸಮರ್ಥನೆ ಮಾಡುತ್ತಿದ್ದಾರೆ. ಹಿಂದೆ ಸಚಿವರಾಗಿದ್ದಾಗ ಇವರು ಏನು ಮಾಡಿದ್ದರು ಎಂದು ಈ ಸಂದರ್ಭದಲ್ಲಿ ಹೇಳಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವರಾಮೇಗೌಡರು ನನ್ನ ಒಳ್ಳೆಯ ಆತ್ಮೀಯ ಸ್ನೇಹಿತರು. ಅವರು ಬಹಳ ಜಾಣರಿದ್ದಾರೆ. ಅವರು ಏಕೆ ಜಾಣರಿದ್ದಾರೆಂದರೆ, ಮೊದಲು ನಾವು ಆ ಭಾಗದಲ್ಲಿ ಇದ್ದೆವಲ್ಲಾ? ಇದೇ ವಾತಾವರಣದಲ್ಲಿ ಮಾತನಾಡುತ್ತಿದ್ದರು. ಆ ಕುರ್ಚಿಯೂ ಅದೇ ಇತ್ತು. ಸರ್ಕಾರ ಏನೂ ಮಾಡಿಲ್ಲವೇ ಎಂದು ಅವರಿಗೆ ಹೇಳುತ್ತಿದ್ದರು. ಯಾವಾಗ ನಮ್ಮಲ್ಲಿ ಏನೂ ನಡೆಯುವುದಿಲ್ಲವೆಂದು ಆಯಿತೋ, ಈಗ ಆ ಕಡೆ ಮಾತನಾಡುತ್ತಾರೆ. ಅವರು ಯಾವಾಗಲೂ ಆ ಕಡೆಯೇ ಮಾತನಾಡುವುದು. ನಾಳೆ ನಾವು ಆ ಕಡೆ ಬಂದರೂ ನಮ್ಮ ವಿಚಾರವೇ ಮಾತನಾಡುತ್ತಾರೆ. ಈ ಕಡೆ ಇರುವವರ ವಿಚಾರ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಒಂದು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಇವತ್ತು, ಕರ್ನಾಟಕ ಹೌಸಿಂಗ್ ಬೋರ್ಡಿನ ಅಧ್ಯಕ್ಷರಾಗಿದ್ದಾರೆ. ನಾನು ಇದನ್ನು ಏಕೆ ಹೇಳಿದೆ ಎಂದರೆ, ನಮ್ಮ ಶಿವರಾಮೇಗೌಡರು ಸರ್ಕಾರದಲ್ಲಿದ್ದು ಒಂದು ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿದ್ದರೂ ಸಹಾ ಅಧಿಕಾರಿಗಳ ಜೊತೆಗೆ, ಮಂತ್ರಿಗಳ ಜೊತೆಗೆ ಚರ್ಚೆ

ನಡೆಸುವುದಿಲ್ಲ ಎನ್ನುವುದಕ್ಕೆ ಅವರೇ ಒಂದು ಉದಾಹರಣೆ. ಸರ್ಕಾರ ಕೊಟ್ಟಿರತಕ್ಕಂಥ ಮಾಹಿತಿಯನ್ನು ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ, ನಾನು ತಯಾರು ಮಾಡಿಕೊಂಡು ತಂದಿರತಕ್ಕಂಥ ಮಾಹಿತಿ ಅಲ್ಲ ಇದು. ಅವರಿಗೆ ಪಟ್ಟಣದ ಬಗ್ಗೆ ಯಾವುದೂ ಚಿಂತೆಯೇ ಇಲ್ಲ. ಏಕೆಂದರೆ, ಅವರು ಗ್ರಾಮಾಂತರ ಪ್ರದೇಶದಿಂದ ಆಯ್ಕೆಯಾಗಿ ಬಂದಿದ್ದಾರೆ. ಆದರೆ, ಬೆಂಗಳೂರಿನ ವಿಚಾರ ಏನಾದರೂ ಕೇಳಿದರೆ ಮಾತ್ರ ಅವರು ಹೇಳುತ್ತಾರೆ. ಯಾವ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ಯಾವ ಮನೆ ಖಾಲಿ ಇದೆ? ಹೌಸಿಂಗ್ ಬೋರ್ಡ್‌ನ ಜಾಗದಲ್ಲಿ ಯಾವ ನಿವೇಶನ ಖಾಲಿ ಇದೆ? ಅದನ್ನು ಸಗೀರ್ ಅಹಮದ್ ಹೆಸರಿಗೆ ಹೇಗೆ ಮಾಡಬಹುದು? ಎಂಬ ಬಗ್ಗೆ ಬಹಳ ಕ್ಲೀನ್ ಆಗಿ ನಕಾಶೆಯನ್ನು ತಯಾರು ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಆ ಅನುಭವ ಎಲ್ಲಾ ಅವರಿಗೆ ಇರುವುದರಿಂದ ಆ ಮಾತನ್ನು ನನಗೆ ಹೇಳುತ್ತಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾರು?

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಅಲ್ಲಿದ್ದಾಗ, ಬೆಂಗಳೂರು ನಗರದಲ್ಲಿ ಏನೇನು ನಡೆಯುತ್ತಿದೆಯೆಂದು ಮಾಹಿತಿ ತೆಗೆದುಕೊಂಡಿದ್ದರಲ್ಲಾ, ಆ ಅನುಭವವನ್ನು ನನಗೆ ಹೇಳಲಾಗುತ್ತಿದೆ ಅಷ್ಟೇ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದಕ್ಕೇ ನಾನು ಹೇಳುತ್ತಿರುವುದು, ಅವರು ಯಾವಾಗಲೂ ವಿರೋಧ ಪಕ್ಷದಲ್ಲಿ ಕೂರುವುದಕ್ಕೆ ರೆಡಿ ಇಲ್ಲ. ವಿರೋಧ ಪಕ್ಷದವರ ಪರವಾಗಿ ಮಾತನಾಡುವುದಕ್ಕೂ ತಯಾರಿಲ್ಲ. ಆಡಳಿತ ಪಕ್ಷ ಯಾವುದು ಇರುತ್ತದೆಯೋ ಅವರ ಪರವಾಗಿಯೇ ಮಾತನಾಡುತ್ತಾರೆ. ಅಲ್ಲಿ ಅದರ ಬಗ್ಗೆ ದಾಖಲೆ ಇದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. 5 ವರ್ಷಗಳ ಕಾಲ ಅವರ ಪಕ್ಷದ ಪರವಾಗಿ ನಾನು ಮತ್ತು ನಾಗೇಗೌಡರು ಬಾಯಿ ಬಡಿದುಕೊಳ್ಳುತ್ತಿದ್ದರೂ ನೀವು ಸರಿಯಿಲ್ಲವೆಂದು ಹೊರಗೆ ಕಳುಹಿಸಿದ ಮೇಲೆ ನಮ್ಮ ಶಕ್ತಿ ತೋರಿಸಿ ನಾವು ಎಲ್ಲಿಂದ ಬೇಕಾದರೂ ನಿಂತು ಗೆಲ್ಲುತ್ತೇವೆಂದು ತೋರಿಸಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ನಾಗೇಗೌಡರನ್ನು ಏಕೆ ಮಧ್ಯದಲ್ಲಿ ತರುತ್ತೀರಿ? ಏನೇ ಆಗಲೀ, ಅವರು ಇಲ್ಲಿರಲಿ ಅಥವಾ ಅಲ್ಲಿರಲಿ, ಆಡಳಿತದಲ್ಲಿ ಯಾವ ಪಕ್ಷ ಇರುತ್ತದೆಯೋ ಅಲ್ಲಿ ಇರುವ ಜನ ಅವರು. ಮುಂದೆ ಆಡಳಿತಕ್ಕೆ ಬರುವಂಥ ಸಾಧ್ಯತೆಗಳು ನಮಗೆ ಕಂಡು ಬರುತ್ತಿದೆ. ಅದಕ್ಕಾಗಿ ನಾನು ಮುಂಚೆಯೇ ಅವರಿಗೆ ಆಹ್ವಾನವನ್ನು ಕೊಟ್ಟಿರುತ್ತೇನೆ, ಅವರು ಆಗ ನಮ್ಮ ಜೊತೆಗೆ ಬರಲಿ.

ಶ್ರೀ ಕೆ.ಎನ್. ನಾಗೇಗೌಡ : ಕೆಲವರಿಗೆ ಜಯಬಲ ಇರುತ್ತದೆ, ಕೆಲವರು ಎಲ್ಲಿ ಕಾಲು ಇಡುತ್ತಾರೋ ಆ ಪಕ್ಷ ಆಡಳಿತಕ್ಕೆ ಬರುತ್ತದೆ. ಕೆಲವರು ಎಲ್ಲಿ ಕಾಲು ಇಡುತ್ತಾರೋ ಆ ಸರ್ಕಾರ

ಹೋಗಿಬಿಡುತ್ತದೆ. ಹೋದ ಕಡೆ ಸರ್ಕಾರ ಬರತಕ್ಕಂಥಾದ್ದು ಶಿವರಾಮೇಗೌಡರ ಜಾಯಮಾನ. ಅವರ ಜಾಯಮಾನವನ್ನು ಕೊಶ್ಚನ್ ಮಾಡಬಾರದು. ಅದೇ ರೀತಿ ಮಾನ್ಯ ಡಿ.ಬಿ. ಚಂದ್ರೇಗೌಡರು ಹೋದಂಥ ಪಕ್ಷ ಆಡಳಿತಕ್ಕೆ ಬರುತ್ತದೆ ಆದರೆ ಅವರು ಸೋತುಹೋಗಿಬಿಡುತ್ತಾರೆ. ಅವರು ಕಾಂಗ್ರೆಸ್ ಟಿಕೆಟ್ ತೆಗೆದುಕೊಂಡು ಗೆದ್ದು ಬಂದಿಲ್ಲ. ಇಂಡಿಪೆಂಡೆಂಟ್ ಆಗಿ ಗೆದ್ದು ಬಂದಿರುವುದರಿಂದ ಅವರಿಗೆ ಯಾರ ಪರವಾಗಿ ಬೇಕಾದರೂ ಮಾತನಾಡಲು ಸ್ವಾತಂತ್ರ್ಯ ಇದೆ. ನಾನು ಅವರ ಪಾರ್ಟಿ ಟಿಕೆಟ್ ಮೇಲೆ ಗೆದ್ದು ಈ ಕಡೆ ಬಂದಿದ್ದರೆ ನನ್ನದು ತಪ್ಪಾಗುತ್ತಿತ್ತು. ಯಾವ ಸರ್ಕಾರಕ್ಕೆ ಹೋಗಬೇಕು, ಯಾವ ಪಾರ್ಟಿಗೆ ಸೇರಿಕೊಳ್ಳಬೇಕೆಂದು ನಾವು ಜನಗಳಿಂದಲೇ ಅಧಿಕಾರ ತೆಗೆದುಕೊಂಡು ಬಂದಿದ್ದೇವೆ. ಜನರಿಂದ ಓಟು ತೆಗೆದುಕೊಂಡು ಬಂದವರಿಗೆ ಟೀಕೆ ಮಾಡಿದರೆ ಹೇಗೆ? ಮಾನ್ಯ ಶಿವರಾಮೇಗೌಡರು40 ಸಾವಿರ ಓಟು ತೆಗೆದುಕೊಂಡು ಗೆದ್ದಿದ್ದಾರೆ. ಅದು ಸಣ್ಣ ಪುಟ್ಟ ವಿಷಯವಲ್ಲ. ಅದಕ್ಕಾಗಿ ಎಲ್ಲರೂ ಅವರನ್ನು ಅಪ್ರಿಷಿಯೇಟ್ ಮಾಡಬೇಕು. ಅವರನ್ನು ಮುಗಿಸಬೇಕೆಂದು ಇನ್‌ಕ್ಲೂಡಿಂಗ್ ಕಾಂಗ್ರೆಸ್ ಪಾರ್ಟಿ ಎಲ್ಲಾ ಪಾರ್ಟಿಯವರು ಎರಡು ಸಾರಿ ಪ್ರಯತ್ನ ಮಾಡಿದರು. ಎರಡೂ ಸಾರಿಯೂ 30 ಸಾವಿರ 40 ಸಾವಿರ ಓಟು ತೆಗೆದಕೊಂಡು ಗೆದ್ದು ಬಂದಿದ್ದಾರೆ. ಆದ್ದರಿಂದ ಜನರು ಅವರ ಪರ ಇದ್ದಾರೆಂದು ತೀರ್ಮಾನವಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅವರನೆ ನಮ್ಮ ಹಿರಿಯ ಸಚಿವರು, ನಮ್ಮ ನಾಯಕರು ಎಂದು ಹೇಳಿದರೂ ತಪ್ಪಾಗುವುದಿಲ್ಲ. ನಾವು 50 ವರ್ಷದ ಸ್ವಾತಂತ್ರ್ಯ ಉತ್ಸವವನ್ನು ಆಚರಿಸುವಂಥ ಸಂದರ್ಭದಲ್ಲಿ ಸುಮಾರು 45 ವರ್ಷಗಳಷ್ಟು ಕಾಲ ನಮ್ಮ ಜೊತೆಗೆ ಇದ್ದವರು. ಇವೊತ್ತು ಮಾನ್ಯ ಜಾಲಪ್ಪನವರು ನಿಮಗೆ ಹುಶಾರ್ ಆಗಿರಿ, ಎಚ್ಚರಿಕೆ ವಹಿಸಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಗೌಡರು ಏನು ಮಾಡುತ್ತಾರೆ ಎಂದು ನನಗೆ ಗೊತ್ತಾಗಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸ್ನೇಹಿತರಾದ ಸಗೀರ್‌ರವರು ನಾವು 45 ವರ್ಷಗಳ ಕಾಲ ಕಾಂಗ್ರೆಸ್‌ನಲ್ಲಿದ್ದವರು ಎಂದು ಹೇಳಿದರು. ಇಲ್ಲಿ ಸೀನಿಯರ್ ಮೋಸ್ಟ್ ಲೀಡರ್ ಮಾನ್ಯ ಘೋರ್ಪಡೆಯವರು ಕುಳಿತಿರುತ್ತಿದ್ದರು. ಅವರನ್ನು ನೀವು ಕೇಳಿ. ನಾನು ಆ ಪಾರ್ಟಿ ಬಿಡಬೇಕಾದರೆ ನಾನೇ ಕಾರಣನೇ? ಯಾರು ಕಾರಣ ಸ್ವಾಮಿ? ಅದಕ್ಕೆ ನೀವೇ ಕಾರಣ? ಅದನ್ನು ಬಿಟ್ಟು ಈಗ ಜಾಲಪ್ಪನವರ ವಿಚಾರ ಹೇಳುತ್ತಿದ್ದೀರಿ? ಜಾಲಪ್ಪನವರು ಕೂಡ ಕಾಂಗ್ರೆಸ್‌ನಲ್ಲಿದ್ದರು ಎಂಬುದನ್ನು ಕೂಡ ನೀವು ತಿಳಿದುಕೊಳ್ಳಬೇಕು. ಅದನ್ನು ತಾವು ಮರೆಯಬಾರದು. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರದಲ್ಲಿ ಇಂದು ನಾವು ಇರಬೇಕಾದರೆ, ಮುಂದೆಯೂ ನಾವು ಬರಬೇಕಾದರೆ ಅದಕ್ಕೆ ನೀವೇ ಕಾರಣರೇ ಹೊರತು ಬೇರೆ ಯಾರು ಕಾರಣರಲ್ಲ. ಮುಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರ ಸರಕಾರ ಇನ್ನೂ ಎರಡೂವರೆ ವರ್ಷಗಳ ಕಾಲ ಅಧಿಕಾರದಲ್ಲಿರುತ್ತದೆ. ನಮಗೆ ಒಳಗಡೆ ಗುಟ್ಟು ಗೊತ್ತಿದೆ. ಆದರೆ ನಿಮ್ಮವರು ಏನೇನೋ ಮಾತನಾಡುತ್ತಿದ್ದಾರೆ. ಮೊದಲು ನಿಮ್ಮ ಪರಿಸ್ಥಿತಿಯನ್ನು ನೀವು ನೋಡಿಕೊಳ್ಳಿ. ಕಲ್ಕತ್ತಾದಲ್ಲಿ ಮಮತಾ ಬ್ಯಾನರ್ಜಿ, ಬಿಹಾರದಲ್ಲಿನ ಜಗನ್ನಾಥ್ ಮಿಶ್ರಾ, ಯು.ಪಿ.ಯಲ್ಲಿ ತ್ರಿಪಾಠಿ, ಆಂಧ್ರಪ್ರದೇಶದಲ್ಲಿ ರಾಜಶೇಖರ್ ರೆಡ್ಡಿ - ಮುಂತಾಗಿ ಅವರು ಏನೇನು ಮಾಡುತ್ತಿದ್ದಾರೆ ಎಂಬುದನ್ನು ನೀವು ನೋಡಿಕೊಳ್ಳಿ.

ಉಪಾಧ್ಯಕ್ಷರು : ಈಗ ತಾವು ವಿಷಯಕ್ಕೆ ಬನ್ನಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ನಾಗೇಗೌಡರು ಹೇಳಿದ ವಿಚಾರ ಮತ್ತು ಅವರ ಮನಸ್ಸಿಗೆ ನೋವು ಉಂಟಾಗಿರತಕ್ಕಂಥ ವಿಚಾರವನ್ನು ನಾನು ಒಪ್ಪುತ್ತೇನೆ. ಆದರೂ ಕೂಡ ಮುಂದಿನ ಭವಿಷ್ಯದ ಬಗ್ಗೆ ಯೋಚನೆ ಮಾಡಿ ಎಂದು ನಾನು ಹೇಳಿದ್ದುದು. ಈಗ ವಿಚಾರಕ್ಕೆ ಬರುವುದಾದರೆ ಸರಕಾರದವರು ವಸತಿ ಬಗ್ಗೆ ಏನೂ ಮಾಡಿಲ್ಲ. ಆಶ್ರಯದ ನಿವೇಶನಗಳಾಗಲೀ, ಆಶ್ರಯದ ಮನೆಗಳಾಗಲೀ, ಇವುಗಳನ್ನು ಪಟ್ಟಣ ಪ್ರದೇಶದಲ್ಲಿ ಕಟ್ಟಲಿಲ್ಲ, ಅಥವಾ ವಿತರಣೆ ಮಾಡಲಿಲ್ಲ ಎನ್ನುವ ಬಗ್ಗೆ ನಾನು ಟೀಕೆ ಮಾಡುತ್ತೇನೆ ಎನ್ನುವುದಾದರೆ ಈ ಸದನದಲ್ಲಿ ಅನೇಕರು ಅವರ ಪಕ್ಷಕ್ಕೆ ಸೇರಿದವರು ಇದ್ದಾರೆ. ಎದೆ ತಟ್ಟಿ ಅವರು ಹೇಳಲಿ. ಅವರು ತಮ್ಮ ಆತ್ಮಾವಲೋಕನ ಮಾಡಿಕೊಂಡು ಹೇಳಲಿ. ಹೌದು, ನಮ್ಮ ಪಟ್ಟಣದಲ್ಲಿ ನಮ್ಮ ಸರಕಾರ ಬಂದನಂತರ ಇಷ್ಟು ನಿವೇಶನಗಳನ್ನು, ಇಷ್ಟು ಮನೆಗಳನ್ನು ನಾವು ವಿತರಣೆ ಮಾಡಿದ್ದೇವೆ. ಹಾಗೆ ಯಾರಾದರೂ ಹೇಳುವುದಾದರೆ ನಾನು ಅವರಿಗೆ ಈಲ್ಡ್ ಆಗುತ್ತೇನೆ. ಇದು ಕೇವಲ ಟೀಕೆ ಮಾಡುವಂಥ ವಿಚಾರವಲ್ಲ. ತಾವು ಏನು ಹೇಳಿದ್ದೀರಿ? 1997-98ನೇ ಸಾಲಿನ ಬಜೆಟ್ ಪುಸ್ತಕದಲ್ಲಿ "ವಸತಿಯು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಆದ್ಯತೆಯ ವಲಯ ಆಗಿತ್ತು. ಈ ಅವಧಿಯಲ್ಲಿ 2,88,955 ಮನೆಗಳು ಪೂರ್ಣವಾಗಿದ್ದು, ಇದರ ಪೈಕಿ 1 ಲಕ್ಷದ 55 ಸಾವಿರ ಮನೆಗಳ ನಿರ್ಮಾಣ ಕಾರ್ಯ ಕಳೆದೆರಡು ವರ್ಷಗಳಲ್ಲಿ ಪೂರ್ಣಗೊಂಡಿದೆ. ನಾನು ಹೇಳುವಂತಾದ್ದಕ್ಕೆ ಯಾರಾದರೂ ಸದಸ್ಯರು ಮಾಹಿತಿ ಇಲ್ಲದೆ ಮಾತನಾಡುತ್ತಿದ್ದಾರೆ ಅಂದರೆ, 1995-96ನೇ ಸಾಲಿನಲ್ಲಿ ತಾವು ಕಾರ್ಯಕ್ರಮವನ್ನು ಹಮ್ಮಿಕೊಂಡು ಘೋಷಣೆ ಮಾಡಿದಂಥ ಅಂಕಿಸಂಖ್ಯೆಗಳು ಎಷ್ಟು ಎಂದು ಮತ್ತು 1997-98ರಲ್ಲಿ ಹಮ್ಮಿಕೊಂಡಿರತಕ್ಕಂಥ ಯೋಜನೆಗಳ ಪ್ರಕಾರ ಎಷ್ಟು ಮನೆ ಅಥವಾ ನಿವೇಶನಗಳನ್ನು ವಿತರಣೆ ಮಾಡಿದ್ದೀರಿ ಎಂದು ತಾವೇ ನೀಡಿರುವಂಥ ಮಾಹಿತಿಗಳು ಇವುಗಳು." ಕಳೆದ ಎರಡು ವರ್ಷಗಳಲ್ಲಿ 1 ಲಕ್ಷದ 55 ಸಾವಿರ ಮನೆಗಳನ್ನು ನಾವು ಕಟ್ಟಿದ್ದೇವೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ 90 ಸಾವಿರ ಮನೆಗಳು ಮಾತ್ರ ವಿವಿಧ ಹಂತದಲ್ಲಿವೆ ಎಂದು ಹೇಳುತ್ತಾರೆ. " ಈ ಉದೇಶಕ್ಕಾಗಿ 515 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು" ಎಂದಿದ್ದಾರೆ. ಎಲ್ಲಿ ವೆಚ್ಚ ಮಾಡಲಾಗಿದೆ? ಅದರ ಜೊತೆಗೆ ಮುಂದೆ ರಾಜ್ಯದಲ್ಲಿ 1995ರಲ್ಲಿ ನಡೆಸಿದ ಸಮೀಕ್ಷೆಯಂತೆ 21 ಲಕ್ಷ ಜನರು ನಿವೇಶನ ರಹಿತ ಮತ್ತು ಮನೆ ರಹಿತ ಕುಟುಂಬಗಳು ಈ ರಾಜ್ಯದಲ್ಲಿವೆ ಎಂದು ಬಜೆಟ್ ಮಂಡನೆ ಮಾಡಿದ ಎಲ್ಲಾ ಪುಸ್ತಕಗಳಲ್ಲಿಯೂ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. "ರಾಜ್ಯದಲ್ಲಿ 1995ರಲ್ಲಿ ನಡೆಸಿದ ಸಮೀಕ್ಷೆಯಂತೆ 7,81,810 ಮಂದಿ ವಸತಿ ರಹಿತರು ಮತ್ತು 11,57,188 ಮಂದಿ ನಿವೇಶನ ರಹಿತರು ಇದ್ದಾರೆ - ಎನ್ನುವ ಮಾಹಿತಿಗಳು ಸದಸ್ಯರಿಗೆ ತಿಳಿದೇ ಇದೆ. ಈ ಜನರಿಗೆ ಸೂರು ಒದಗಿಸುವ ಕಾರ್ಯಕ್ಕೆ ನಾವು ಆದ್ಯತೆಯನ್ನು ನೀಡಬೇಕಾಗಿದೆ. ಇದಕ್ಕಾಗಿ ನಾವು 9ನೇ ಯೋಜನೆ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ 50 ಲಕ್ಷ ನಿವೇಶನಗಳನ್ನು ಮತ್ತು ಪ್ರತಿವರ್ಷದಲ್ಲಿ 1 ಲಕ್ಷ ನಿವೇಶನಗಳನ್ನು ವಿತರಿಸಲು ಮತ್ತು 60 ಸಾವಿರ ಮನೆಗಳ ನಿರ್ಮಾಣ ಮಾಡಲು ಪ್ರತೀ ವರ್ಷ 120 ಲಕ್ಷ ರೂಪಾಯಿಗಳನ್ನು ಇಡಲು ಉದ್ದೇಶಿಸಲಾಗಿದೆ". ಇದೆಲ್ಲಾ ಎಲ್ಲಿದೆ ಅಧ್ಯಕ್ಷರೇ? ಗ್ರಾಮಾಂತರ ಪ್ರದೇಶಗಳ ವಿಚಾರವನ್ನು ನಾವು

ಮಾತನಾಡಬೇಕಾದರೆ ನಮ್ಮ ಪಂಚಾಯತ್ ಇಲಾಖೆ ವಿಚಾರ ಬಂದಾಗ ನಾವು ಇಲ್ಲಿ ಮಾತನಾಡಬಹುದು. ಆದರೆ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ನನಗೆ ತಿಳಿದಿರುವಂತೆ ಸರಕಾರದವರು ನಮಗೆ ಒದಗಿಸಿದ ಪಟ್ಟಿಯಂತೆ 1995-96ನೇ ಸಾಲಿನಿಂದ ಹಿಡಿದು 1996-97, 1997-98ನೇ ಸಾಲಿನವರೆಗೆ ಹಮ್ಮಿಕೊಂಡಂಥ ಯೋಜನೆಗಳ ಪ್ರಕಾರ ಯಾವುದೇ ಪುಟದಲ್ಲಿ ತಾವು ನೋಡುವುದಾದರೆ ಈ ವಿಚಾರವನ್ನು ಉದಾಹರಣೆ ಸಮೇತ ನಮ್ಮ ಕೆಹೆಚ್‌ಬಿ ಅಧ್ಯಕ್ಷರಾದ ಮಾನ್ಯ ಶಿವರಾಮೇಗೌಡರ ಗಮನಕ್ಕೆ ತರುತ್ತಾ ಇದ್ದೇನೆ. ಬೆಂಗಳೂರು ಗ್ರಾಮಾಂತರದಲ್ಲಿ 925 ಮನೆಗಳನ್ನು ನಿರ್ಮಿಸುವಂಥ ಒಂದು ಟಾರ್ಗೆಟ್ ಇದ್ದರೆ ಅದರ ಕೆಳಗಡೆ ಸೊನ್ನೆ ಎಂದು ಬರೆದಿದ್ದಾರೆ. ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಂದು ಮನೆಯೂ ಆಗಲಿಲ್ಲ. ಚಿತ್ರದುರ್ಗದಲ್ಲಿ 24 ಮನೆಗಳು ಆಗಿವೆ. ಅದು ಫಿಜಿಕಲ್ ಪ್ರೋಗ್ರೆಸ್‌ನಲ್ಲಿರುವಂಥಾದ್ದು. ಕೋಲಾರದಲ್ಲಿ ಒಂದೂ ಇಲ್ಲ. ನಮ್ಮ ನಗರಾಭಿವೃದ್ಧಿ ಸಚಿವರಾದಂಥ ಮಾನ್ಯ ಬಚ್ಚೇಗೌಡರು ಕೋಲಾರ ಜಿಲ್ಲೆಯ ಹತ್ತಿರದವರಾಗಿದ್ದು ಅಲ್ಲಿಗೆ ಒಂದು ಮನೆಯೂ ಇಲ್ಲ. ಶಿವಮೊಗ್ಗದಲ್ಲಿ ಒಂದು ಮನೆಯೂ ಆಗಿಲ್ಲ. ತುಮಕೂರಿನಲ್ಲಿ ಎರಡು ಮನೆಗಳು ಮಾತ್ರ ಆಗಿವೆ. ಮೈಸೂರಿನಲ್ಲಿ 54 ಮನೆಗಳು ಆಗಿವೆ. ಚಿಕ್ಕಮಗಳೂರಿನಲ್ಲಿ ಒಂದು ಮನೆ ಆಗಿದೆ ಎಂದು ಹೇಳುತ್ತಾರೆ, ಆದರೆ ಒಂದು ಮನೆಯೂ ಅಲ್ಲಿ ಆಗಿಲ್ಲ. ಇದನ್ನು ನಾನು ಬಹಿರಂಗವಾಗಿ ಹೇಳಲು ಇಷ್ಟುಪಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 26 ಮನೆಗಳು, ಹಾಸನದಲ್ಲಿ 39 ಮನೆಗಳು, ಕೊಡಗಿಗೆ ಏನೂ ಇಲ್ಲ, ಮಂಡ್ಯದಲ್ಲಿ 44 ಮನೆಗಳು, ಬೆಳಗಾವಿಯಲ್ಲಿ 13, ಬಿಜಾಪುರದಲ್ಲಿ ಏನೂ ಇಲ್ಲ, ಧಾರವಾಡದಲ್ಲಿ 4, ಕಾರವಾರ ಜಿಲ್ಲೆಗೆ ಏನೂ ಇಲ್ಲ, ಗುಲ್ಬರ್ಗಕ್ಕೆ 7, ಬೀದರ್‌ದಲ್ಲಿ ಏನೂ ಇಲ್ಲ, ಬಳ್ಳಾರಿಯಲ್ಲಿ ಏನೂ ಇಲ್ಲ, ರಾಯಚೂರಿನಲ್ಲಿ 5 ಮನೆಗಳು. ಈ ಮಾಹಿತಿಗಳು ನಾನು ತಯಾರು ಮಾಡಿದ ಮಾಹಿತಿ ಅಲ್ಲ. ಇದು ಇಲಾಖಾ ವತಿಯಿಂದ ಒದಗಿಸಿಕೊಟ್ಟಿರುವಂಥ ಮಾಹಿತಿಗಳು. ಸರಕಾರದಿಂದ ಒದಗಿಸಿದ ಮಾಹಿತಿ. ಆ ದೃಷ್ಟಿಯಿಂದ ಶಿವರಾಮೇಗೌಡರು ಹೇಳಿದ ಹಾಗೆ ತಮ್ಮ ಸರಕಾರಕ್ಕೆ ಕೀರ್ತಿ ತರುವಂತೆ ಮಾತನಾಡಬೇಕೆಂದು ಹೇಳಿ ಅವರಲ್ಲಿ ಕೇಳಬೇಕಾಗುತ್ತದೆ. ನಾವು ನೀವು ಏನೂ ಮಾಡಲಿಲ್ಲ ಎಂದು ಹೇಳುವಾಗ ನಿಮ್ಮನ್ನು ಟೀಕೆ ಮಾಡುತ್ತಾ ಇಲ್ಲ. ತಾವುಗಳು ಮಾಡಿರತಕ್ಕಂಥ ವಿಚಾರಗಳು ಇಲ್ಲಿಯೇ ಇರುವ ಪುಸ್ತಕಗಳ ಪುಟದಲ್ಲಿರುವುದರಿಂದ ಮಾನ್ಯ ಅಧ್ಯಕ್ಷರ ಮೂಲಕ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಆದರೆ ತಾವುಗಳು ಬಡವರ ಬಗ್ಗೆ ಚಿಂತನೆ ಮಾಡುವಂಥ ಸರಕಾರ ದೀನದಲಿತರ ಬಗ್ಗೆ ಚಿಂತನೆ ಮಾಡುವಂಥ ಸರಕಾರ, ಅಲ್ಪಸಂಖ್ಯಾತರ ಬಗ್ಗೆ ಚಿಂತನೆ ಮಾಡುವಂಥ ಸರಕಾರ, ಹಿಂದುಳಿದವರ ಬಗ್ಗೆ ಚಿಂತನೆ ಮಾಡುವಂಥ ಸರಕಾರ ಎನ್ನುವುದಾದರೆ ತಾವುಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾದರೂ ಏನು? ಇದರಲ್ಲಿ ಏಕೆ ವಿಳಂಬವಾಗುತ್ತಿದೆ ಎಂದು ಹೇಳಿ? ಉದಾಹರಣೆಗೆ ತಾವು ಹೇಳಬಹುದು. ಅನೇಕ ಜನರು ನಿಮ್ಮ ಸರಕಾರ ಇದ್ದಾಗ ಏನು ಮಾಡಿದೆ ಎಂದು ಕೇಳಬಹುದು. ನಮ್ಮ ಸರಕಾರ ಏನೂ ಮಾಡದಿದ್ದುದಕ್ಕಾಗಿ ಇಲ್ಲಿ ಕುಳಿತಿದ್ದೇವೆ. ಹಾಗೆ ಮಾಡಿದ್ದರೆ ಅಲ್ಲಿ ಕುಳಿತುಕೊಳ್ಳುತ್ತಿದ್ದೆವು. ನಮ್ಮ ಕಾಲದಲ್ಲಿ ಏನು ಒಳ್ಳೆಯದು ಮಾಡಬೇಕು, ಏನು ಕೆಟ್ಟದ್ದು ಮಾಡಬೇಕು ಅದನ್ನು ನಾವು ಮಾಡಿದ್ದೇವೆ. ಜನರು ಸಹಕಾರ ಕೊಟ್ಟರೆ ಬರುತ್ತೇವೆ, ಕೊಡದಿದ್ದರೆ ಬರುವುದಿಲ್ಲ. ಆದರೆ ತಾವುಗಳು ಬಡ ಜನಾಂಗಕ್ಕೆ, ಪರಿಶಿಷ್ಟ ವರ್ಗದ ಬಡಜನರಿಗೆ ಅಲ್ಪಸಂಖ್ಯಾತರಿಗೆ ವಾಗ್ದಾನ

ಮಾಡಿದಂತಹ ಸರಕಾರ ಎರಡು ವರ್ಷದ 8 ತಿಂಗಳ ಅವಧಿಯಲ್ಲಿ ಮಾಡಿರುವಂಥ ಕೆಲಸ ಏನು? ನಿಮ್ಮ ಆಶ್ರಯ ಯೋಜನೆ ಸಂಪೂರ್ಣವಾಗಿ ವಿಫಲವಾಗಿದೆ. ಹೀಗೆ ವಿಫಲವಾಗುವುದಕ್ಕೆ ಕಾರಣ ನಾನಲ್ಲ. ವಿಫಲವಾಗಲು ಕಾರಣವಾದ ಸಂಪೂರ್ಣವಾದ ಜವಾಬ್ದಾರಿ ಸರಕಾರದ ಮೇಲೆ ಬೀಳುತ್ತದೆ. ಉದಾಹರಣೆಗೆ ನಾನು ಹೇಳುವುದಾದರೆ ಅನೇಕ ನಗರಗಳ ವ್ಯಾಪ್ತಿಗಳಲ್ಲಿ ನಗರ ಪ್ರಾಧಿಕಾರಗಳನ್ನು ರಚನೆ ಮಾಡಿರುವ ಸಂದರ್ಭದಲ್ಲಿ ಅನೇಕ ನಗರ ಪ್ರಾಧಿಕಾರಗಳ ಅಧ್ಯಕ್ಷರುಗಳು, ಅಲ್ಲಿರುವಂಥ ಆಯುಕ್ತರುಗಳು, ಆ ಭಾಗದ ಶಾಸಕರುಗಳ ಒತ್ತಾಯದ ಮೇಲೆ ಅನೇಕ ಕಡೆ ಸರಕಾರಿ ಆದೇಶದ ಪ್ರಕಾರ 20x30 ಅಳತೆಯ ನಿವೇಶನಗಳನ್ನು ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಮುಫತ್ತಾಗಿ ನೀಡ ಬೇಕೆಂದು ಸರಕಾರ ಆದೇಶ ಮಾಡಿದೆ. ಆದರೆ ನಗರ ಪ್ರದೇಶ ಪ್ರಾಧಿಕಾರಗಳಿಂದ ನೀಡಬೇಕಾದ ನಿವೇಶನಗಳಿಗೆ ಅನುಮತಿ ಕೇಳಿ ಸರಕಾರಕ್ಕೆ 8-9 ತಿಂಗಳುಗಳಾದರೂ ಸಹ ಅದಕ್ಕೆ ಅನುಮತಿ ಸಿಗದಿರಲು ಕಾರಣ ಏನು ಎಂಬುದನ್ನು ಸರಕಾರದವರು ಹೇಳಬೇಕಾಗುತ್ತದೆ.

(ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆದರೆ, ಸರ್ಕಾರ ಏಕೆ ಒಪ್ಪಿಕೊಳ್ಳಲಿಲ್ಲ ಎಂದು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯಮಾಡಿ ನನಗೆ ಉತ್ತರ ಕೊಡಬೇಕಾಗುತ್ತದೆ. ತಾವು ಬಡ ಜನರ ಮೇಲೆ ಇಟ್ಟಿರತಕ್ಕಂಥ ಕಾಳಜಿ ಏನು ಎನ್ನುವುದು ಬೇಕಲ್ಲ. ನೀವು ಆಶ್ರಯ ನಿವೇಶನದಲ್ಲಿ ಒಂದು ಮನೆ ಸಹ ಕೊಟ್ಟಿಲ್ಲ. ಕೊಟ್ಟಿರುವಂತಹ ಜಾಗದಲ್ಲಿ ಏನು ಕಥೆಯಾಗಿದೆ. ಇವತ್ತು ಆಶ್ರಯ ಮನೆಗಳನ್ನು ಕೊಟ್ಟಿರುವಂಥ ಜಾಗದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇದೆ. ನಮ್ಮ ಕ್ಷೇತ್ರ ಹಾಗೂ ಶಿವರಾಮೇಗೌಡರ ಕ್ಷೇತ್ರ ಸೇರಿ 500 ರಂತೆ ಮನೆಗಳನ್ನು ನಾವು ಕಟ್ಟಿಸಿದ್ದೇವೆ. ದಾಖಲಾತಿಗಳು ಇವೆ, ಆದರೆ ಆ ಬಡಾವಣೆಯ ಅಭಿವೃದ್ಧಿ ಬಗ್ಗೆ ಮೂರುಕಾಸಿನ ಚಿಂತೆ ಸರ್ಕಾರಕ್ಕೆ ಇಲ್ಲ. ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಆಗಿಲ್ಲ. ಬೀದಿ ದೀಪದ ವ್ಯವಸ್ಥೆಯಾಗಿಲ್ಲ. ಹಕ್ಕುಪತ್ರಕೊಟ್ಟಿರುವಂತಹದ್ದರ ಬಗ್ಗೆ ಅವರಿಗೆ ಹೆದರಿಕೆ. ಖಾತೆ ಬದಲಾವಣೆ ಮಾಡುವುದರಲ್ಲಿ ನಿಮ್ಮ ಸರ್ಕಾರ ವಿಫಲವಾಗಿದೆ. ತಾವು ದಾಖಲೆ ತರಿಸಿ ನೋಡಿ. ನಾನು ಸುಮ್ಮನೆ ಭಾಷಣದ ಚಟ ಇದೆ ಎಂದು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ದಾಖಲೆ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ನಾನು ಈಗಲೂ ಯೀಲ್ಡ್ ಆಗಿಲ್ಲ ಆಗುವುದಕ್ಕೆ ಹೋಗುವುದಿಲ್ಲ. ಆಡಳಿತ ಪಕ್ಷದಲ್ಲಿರುವ ಸದಸ್ಯರಲ್ಲಿ ಆ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಒಂದೇ ನಿವೇಶನ ನೀಡಿದ್ದೇನೆ ಎನ್ನುವುದಾದರೆ ನಾನು ಈಗಲೂ ಯೀಲ್ಡ ಆಗುವುದಕ್ಕೆ ಸಿದ್ಧವಾಗಿದ್ದೇನೆ. ಇದು ಟೀಕೆ ಮಾಡುವಂಥದ್ದು ಅಲ್ಲ. ಹಣ ಒದಗಿಸಿ ಕೊಟ್ಟಿದ್ದೇವೆ ಎಂದು ತಾವು ದಿನಾಲು ದಿನಪತ್ರಿಕೆಯಲ್ಲಿ ಹೇಳುತ್ತೀರಿ. ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿಟ್ಟಿದ್ದೇವೆ ಎನ್ನುವುದಕ್ಕೆ ಇಲ್ಲಿ ಮಾಹಿತಿ ಇದೆ. ಆ ಹಣ ಎಲ್ಲಿ ಹೋಯಿತು? ಹಣ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಇದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಜಮಾ ಮಾಡಲಿಕ್ಕೆ ಸರ್ಕಾರದಿಂದ ಹಣ ಬಿಡುಗಡೆ ಮಾಡಿದ್ದೀರೋ? ತಾವು ಆಲೋಚನೆ ಮಾಡಬೇಕಾಗುತ್ತದೆ. ನನಗೆ ತಿಳಿದಿರುವ ಹಾಗೆ, ನನ್ನ ವ್ಯಾಪ್ತಿಗೆ ಬರುವಂತಹ ಜಿಲ್ಲಾಧಿಕಾರಿಗಳ ಖಾತೆಯಲ್ಲಿ 23 ಲಕ್ಷ ರೂಪಾಯಿಗಳು ಪಟ್ಟಣದ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಕೊಡುವುದಕ್ಕಾಗಿ ಭೂಸ್ವಾಧೀನ

ಮಾಡಿಕೊಳ್ಳುವುದಕ್ಕಾಗಿ ಸರ್ಕಾರದಿಂದ ಹಣ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳು ನನ್ನ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಬೇರೆ ಬೇರೆ ಜಿಲ್ಲೆಗಳಲ್ಲಿ ಸಹ ಈ ನಿವೇಶನಗಳನ್ನು ಕೊಡುವುದರಲ್ಲಿ ವಿಳಂಬವಾಗಿರುವ ಬಗ್ಗೆ ಇದಕ್ಕೆ ಯಾರು ಜವಾಬ್ದಾರರು? ಹಾಗಾಗಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎಲ್ಲ ವಿಚಾರವನ್ನು ನಾವು ಬರೀ ಟೀಕೆ ಮಾಡುತ್ತಿದ್ದೇವೆ ಎನ್ನುವುದಾದರೆ ಅದಕ್ಕೆ ನಮ್ಮದು ಏನು ಅಭ್ಯಂತರವಿಲ್ಲ. ಈ ರಾಜ್ಯದಲ್ಲಿ ಬಡ ಜನರಿದ್ದಾರೆ, ತೀರ್ಮಾನ ಮಾಡುವಂತಹ ಕೆಲಸಗಾರರಿದ್ದಾರೆ, ನಾವು ನಿವೇಶನ ಕೊಟ್ಟಿರುವಂತಹದ್ದನ್ನು ತೀರ್ಮಾನ ಮಾಡುತ್ತಾರೆ. ಅವರು ನಿವೇಶನ ಕೊಡದೇ ಇದ್ದರೂ ತೀರ್ಮಾನ ಮಾಡುತ್ತಾರೆ. ಆದರೆ ನಾವು ಹಮ್ಮಿಕೊಂಡಿರುವಂತಹ ಕಾರ್ಯ ಕ್ರಮ ಎಲ್ಲಿ ಹೋಯಿತು? ಕಸದ ಬುಟ್ಟಿಗೆ ಹೋಯಿತೇ? ಇಲ್ಲವಾದರೆ ಈ ಕಾರ್ಯಕ್ರಮ ಯಶಸ್ವಿಯಾಗುವುದಕ್ಕಾಗಿ ತಾವು ಏನು ಪ್ರಯತ್ನಗಳನ್ನು ಮಾಡಿದ್ದೀರಿ? ಯಾವ ಪ್ರಯತ್ನಗಳನ್ನೂ ತಾವು ನಡೆಸಲಿಲ್ಲ. ತಾವು ಏನು ಪ್ರಯತ್ನಗಳನ್ನು ಮಾಡಿದ್ದೀರಿ ತೋರಿಸಿ ಎಂದು ನಾನು ಇವತ್ತು ಬಹಿರಂಗವಾಗಿ ಸರ್ಕಾರವನ್ನು ಟೀಕೆ ಮಾಡಬೇಕಾಗುತ್ತದೆ. ಯಾವ ನಗರ ಪ್ರದೇಶಗಳಲ್ಲಿ ಹತ್ತಾರು, ನೂರಾರು ನಿವೇಶನಗಳನ್ನು ತಾವು ಕೊಟ್ಟಿದ್ದೀರಿ. ಯಾವ ಭಾಗದಲ್ಲಿಯೂ ಕೊಡಲಿಲ್ಲ ಅದಕ್ಕೆ ಕಾರಣ ಏನು? ದಯವಿಟ್ಟು ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ತಮ್ಮ ಇಲಾಖೆಯಿಂದ ಅನೇಕ ನಗರ ಪ್ರಾಧಿಕಾರಕ್ಕೆ ಸುತ್ತೋಲೆಗಳು ಹೋದರೂ ಸಹ ಈ ಬಡ ಜನರಿಗೆ ನಿವೇಶನ ಕೊಡುವುದರ ಜೊತೆಗೆ ಮನೆಗಳನ್ನು ಕೊಡಿಸುವುದರ ಬಗ್ಗೆ ಇವತ್ತಿನವರೆಗೆ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಇರುವಂತಹ ಸಂದರ್ಭದಲ್ಲಿ ಸರ್ಕಾರವೇ ಇದಕ್ಕೆ ನೇರವಾದ ಜವಾಬ್ದಾರಿಯ ಹೊಣೆಗಾರಿಕೆ ಹೊರಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ನೇರವಾಗಿ ಬಡ ಜನರಿಗೆ ಈ ಒಂದು ನಿವೇಶನ ಒದಗಿಸುವ ಬಗ್ಗೆ ಯಾವ ರೀತಿಯಲ್ಲಿ ತಾವು ಪತ್ರಿಕೆಯ ಮುಖಾಂತರ ಸಾರ್ವಜನಿಕರ ಸಭೆಯಲ್ಲಿ ಹೇಳುತ್ತಿರೋ ಆ ರೀತಿ ಹೇಳುವುದನ್ನು ಬಿಟ್ಟು ಈ ಸದನದಲ್ಲಿ ಆಶ್ವಾಸನೆ ಕೊಡಬೇಕಾಗುತ್ತದೆ. ಇಷ್ಟು ದಿನಗಳಲ್ಲಿ ಇಷ್ಟು ಮನೆಗಳನ್ನು, ನಾವು ನಿವೇಶನಗಳನ್ನು ಬಡ ಜನರಿಗೆ ವಿತರಣೆ ಮಾಡುವುದರಲ್ಲಿ ತಾವು ಸಿದ್ದರಿದ್ದೇವೆ ಎನ್ನುವುದನ್ನು ತಾವು ಹೇಳಬೇಕಾಗುತ್ತದೆ. ಏಕೆಂದರೆ ತಾವು ಅಧಿಕಾರಕ್ಕೆ ಬಂದು 2 ವರ್ಷ 8 ತಿಂಗಳು ಆಯಿತು. ಇನ್ನು ನವೆಂಬರ್ ಬಂದರೆ ಮೂರು ವರ್ಷ ಆಗುತ್ತದೆ ಎಲ್ಲರ ಅವಧಿ ಮುಗಿದ ಹಾಗೆ ಆಗುತ್ತದೆ. ಅಲ್ಲಿಗೆ ನಮ್ಮ ಕತೆ ಎಲ್ಲ ಮುಗಿದ ಹಾಗೆ ತಮಗೆ ಗೊತ್ತಿದೆ. ವಯಸ್ಸು ಆದಾಗ ಹಲ್ಲು ಉದುರಿ ಹೋಗುತ್ತವೆ, ಕಾಲು ಹೋಗುತ್ತವೆ, ಕೈ ಹೋಗುತ್ತವೆ, ಇವತ್ತು ಮೂರು ವರ್ಷ ಕಳೆದರೆ ಇನ್ನು ಎರಡು ವರ್ಷ ಮಾತ್ರ ಉಳಿಯುತ್ತದೆ. ಈಗಲಾದರೂ ಮಾನ್ಯ ಜಾಲಪ್ಪನವರು ಹೇಳಿದ ಹಾಗೆ ಎಲ್ಲರೂ ಚುರುಕು ಆಗದೆ ಹೋದರೆ ಬಹುಶಃ ಅವರ ಮುಂದಿನ ಭವಿಷ್ಯ ಏನು ಹೇಳಿ.

ಉಪಾಧ್ಯಕ್ಷರು : ನೀವು ಮಾತನಾಡಲು ಪ್ರಾರಂಭ ಮಾಡಿ ಅರ್ಧ ಗಂಟೆಯಾಯಿತು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನನಗೆ ನೀವು ಯಾವಾಗಲೂ ಹಾಗೆ ಹೇಳುತ್ತೀರಲ್ಲ. ಈ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಜಮೀನು ಖರೀದಿ ಮಾಡುವಂತದ್ದರಲ್ಲಿ ಬೇರೆ ಬೇರೆ ದರಗಳನ್ನು ನಿಗದಿಪಡಿಸಿದ್ದಾರೆ. ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಡ

ಜನರಿಗೆ ನಿವೇಶನಗಳನ್ನು ಕೊಡಬೇಕೆಂದು ಭೂಸ್ವಾಧೀನ ಮಾಡಿಕೊಳ್ಳಬೇಕೆಂದು ಹೇಳಿದಿರಿ, ಒಂದು ಎಕರೆ ಜಮೀನು ಬಹುಶಃ 6 ರಿಂದ 8 ಲಕ್ಷ ರೂಪಾಯಿಗಳು ಇರಬಹುದೆಂದು ನಾನು ಭಾವಿಸುತ್ತೇನೆ. ಅದೇ ರೀತಿ ಚಿಕ್ಕಮಗಳೂರಿನಲ್ಲಿ ಭೂಸ್ವಾಧೀನಕ್ಕೆ ಪ್ರೈಸ್ 60 ರಿಂದ 70 ಲಕ್ಷ ರೂಪಾಯಿಗಳಿಗೆ ಸಿಗುತ್ತದೆ. ನೇರವಾಗಿ ಜಿಲ್ಲಾಧಿಕಾರಿಗಳಿಗೆ ಏಕೆ ಅಧಿಕಾರ ಕೊಡುತ್ತಾ ಇಲ್ಲ. ಇದು ಏಕೆ ಎಂದು ನಾನು ಕೇಳಬೇಕಾಗುತ್ತದೆ. ಇವತ್ತು ಸಬ್‌ರಿಜಿಸ್ಟ್ರಾರ್ ಆಫೀಸ್‌ನವರು ನಿಗದಿ ಮಾಡುವ ಬೆಲೆಗೆ ಕೊಂಡುಕೊಳ್ಳಿ ಎಂದು ಹೇಳುತ್ತೀರಿ 10 ಪಟ್ಟು, ಅಥವಾ 20 ಪಟ್ಟು ಜಾಸ್ತಿ ಕೊಟ್ಟು ಆ ಜಮೀನು ಕೊಂಡುಕೊಂಡು ಬಡ ಜನರಿಗೆ ನಿವೇಶನ ವಿತರಣೆ ಮಾಡುವುದರಲ್ಲಿ ತಮಗೆ ಏನು ತೊಂದರೆ ಇದೆ ಎನ್ನುವುದರ ಬಗ್ಗೆ ನಮಗಂತೂ ಅದರ ಅರ್ಥ ಆಗುತ್ತಾ ಇಲ್ಲ. ಆದ್ದರಿಂದ, ಇದರ ಬಗ್ಗೆ ದಯಮಾಡಿ ತಾವು ಜಿಲ್ಲಾಧಿಕಾರಿಗಳಿಗೆ ಮಾರ್ಗದರ್ಶನ ನೀಡಬೇಕಾಗಿತ್ತು. ಇನ್ನು ಒಂದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದುದು. 1976-77ರ ಇಸ್ವಿಯಲ್ಲಿ 300 ನಿವೇಶನಗಳನ್ನು ಬಡ ಜನರಿಗೆ ನಾವು ವಿತರಣೆ ಮಾಡಿದ್ದೇವೆ. ವಿತರಣೆ ಮಾಡಿ ಉಳಿದಂಥ ನಿವೇಶನಗಳನ್ನು ಬಡ ಜನರಿಗೆ ನಾವು ವಿತರಣೆ ಮಾಡಿದ್ದೇವೆ. ವಿತರಣೆ ಮಾಡಿ ಉಳಿದಂಥ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ನಾವು ಕೆಲವು ಕೊಟ್ಟಿದ್ದೇವೆ. ಆ ವಿಚಾರದ ಬಗ್ಗೆ ಕಳೆದ ಎರಡು ವರ್ಷಗಳಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ವಿತರಣೆ ಮಾಡಿರುವಂತಹ ನಿವೇಶನಗಳಲ್ಲಿ ನಿವೇಶನಗದ ಹಗರಣ ನಡೆದಿದೆ. ಇದು ಬೇರೆ ಬೇರೆಯವರ ಹೆಸರಿನಲ್ಲಿ ಖಾತೆ ಮಾಡಿ ಮಾರಾಟವಾಗಿದೆ. ಆದ್ದರಿಂದ ಸಿ.ಓ.ಡಿ. ಎನ್‌ಕ್ವೈಯರಿ ನಡೆಯಬೇಕೆಂದು ಹೇಳಿ ನಾನು ಹಿಂದಿನ ಈ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ. ದೇವೇಗೌಡರನ್ನು ಕೋರಿದ್ದೆ. ತಮಗೂ ನಾನು ಕಾಗದವನ್ನು ಬರೆದಿದ್ದೆ. ಪ್ರಾಯಶಃ ತಮ್ಮ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು, ಇದರ ಬಗ್ಗೆ ಉಪ ವಿಭಾಗಾಧಿಕಾರಿಗಳ ವತಿಯಿಂದ ತನಿಖೆ ಮಾಡುವಂತೆ ಆದೇಶ ಹೊರಡಿಸಿದ್ದು ನನ್ನ ಗಮನಕ್ಕೆ ಬಂದಿದೆ. ಬಡ ಜನರಿಗೆ ಅನ್ಯಾಯವಾಗಿರುವುದರಿಂದ ಅವರವರಿಗೆ ನಿವೇಶನ ಸಿಗಬೇಕು. ಅದಕ್ಕೋಸ್ಕರ ಸಿ.ಓ.ಡಿ. ತನಿಖೆ ಮಾಡಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ಅಲ್ಲಿಯ ನಗರಾಭಿವೃದ್ದಿ ಅಧ್ಯಕ್ಷರು ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದರು. ಬಡವರಿಗೆ ಅನ್ಯಾಯವಾಗಿರುವುದರಿಂದ ಇದರ ಬಗ್ಗೆ ತುರ್ತಾಗಿ ಸಿ.ಓ.ಡಿ. ತನಿಖೆ ನಡೆಸಬೇಕೆಂದು ಹೇಳಿ ಮತ್ತೊಮ್ಮೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ಈ ನಗರಸಭೆ, ಪುರಸಭೆಗಳ ವ್ಯಾಪ್ತಿಯಲ್ಲಿ ಆಗಿರುವಂತಹ, ಮಾಡಬೇಕಾದಂತಹ ಅನೇಕ ವಿಚಾರಗಳನ್ನು ಹಿಂದೆ ನಾನು ಮಾತನಾಡುವಂತಹ ಸಂದರ್ಭದಲ್ಲಿ ಮಾತನಾಡಿದ್ದೇನೆ. ಈಗ ನಗರಾಭಿವೃದ್ದಿ ಸಚಿವರು ಹೇಳುವಂತೆ ನಮ್ಮ ರಾಜ್ಯದಲ್ಲಿ 205 ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳು ಇವೆ. ಇವತ್ತು ಸರ್ಕಾರದಲ್ಲಿ ಈ ಅಭಿವೃದ್ಧಿಗಾಗಿ ಸಾಕಷ್ಟು ಹಣ ಇದ್ದರೂ ಸಹ ಕೆಲವು ಪಂಚಾಯಿತಿಗಳಿಗೆ ಕೆಲವು ಮುನಸಿಪಾಲಿಟಿಗಳಿಗೆ ಈ ಹಣ ಬಿಡುಗಡೆ ಮಾಡದಿರುವುದಕ್ಕೆ ಏನು ಕಾರಣ. ಹಣ ಖರ್ಚು ಮಾಡಿರುವಂತಹ ಪುರಸಭೆಗೆ, ನಗರಸಭೆಗಳಿಗೆ ಸ್ವಲ್ಪ ಅನುಧಾನ ಕೊಡುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತಿಲ್ಲ ಎಂದು ನನ್ನ ಪ್ರಶ್ನೆ ಇದೆ. ಇವತ್ತು 74 ನೇ ಸಂವಿಧಾನ ತಿದ್ದುಪಡಿ ಪ್ರಕಾರ ಕ್ಷೇತ್ರಗಳನ್ನು ವಿಂಗಡಣೆ ಮಾಡಿ ಮುನಿಸಿಪಲ್ ಸರಹದ್ದುಗಳನ್ನು ಪುರಸಭೆಯ ಸರಹದ್ದುಗಳನ್ನು ನಿಗದಿ ಪಡಿಸಿದ್ದೀರಿ.

ಅದರಲ್ಲಿ ಹತ್ತಾರು ಹಳ್ಳಿಗಳನ್ನು ಸೇರಿಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿರುವಂಥ ವಿಚಾರ. ಆ ಹಳ್ಳಿಯ ಜನತೆ ಇವತ್ತು ಎಲ್ಲ ಅಭಿವೃದ್ಧಿ ಕೆಲಸಗಳಲ್ಲಿ, ನಾಗರೀಕ ಸೌಲಭ್ಯಗಳಲ್ಲಿ ವಂಚಿತರಾಗಿದ್ದಾರೆ. ಈ ಪಟ್ಟಣದ ವ್ಯಾಪ್ತಿಯಲ್ಲಿ ಪಟ್ಟಣದ ಸರಹದ್ದುಗಳಲ್ಲಿ ಸೇರಿರುವಂತಹ ಹಳ್ಳಿಗಳಲ್ಲಿ ಅನೇಕ ಜನ ಗ್ರಾಮ ಪಂಚಾಯಿತಿಯ ಸದಸ್ಯರಿದ್ದಾರೆ. ನಗರಸಭಾ ಸದಸ್ಯರಿದ್ದಾರೆ, ತಾಲ್ಲೂಕ್ ಪಂಚಾಯಿತಿ ಸದಸ್ಯರಿದ್ದಾರೆ. ಬಹುಶಃ ಆ ಭಾಗದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಅಧ್ಯಕ್ಷರಿದ್ದಾರೆ. ಈ ಸಮಸ್ಯೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವಂತಹ ಕಾಮಗಾರಿಗಳನ್ನು ನಗರಸಭಾ ಕಾಮಗಾರಿಗಳನ್ನು ಹಮ್ಮಿಕ್ಕೊಂಡಿಲ್ಲ. ಆ ಸದಸ್ಯರ ಅಸ್ಥಿತ್ವ ಏನು? ಇವತ್ತು, ನಗರಸಭೆಯ ಸಭೆಗೂ ಬರುವುದಿಲ್ಲ, ತಾಲ್ಲೂಕು ಪಂಚಾಯಿತಿ ಸಭೆಗೂ ಬರುವಂತಿಲ್ಲ. ತಾಲ್ಲೂಕು ಪಂಚಾಯಿತಿ ನಂತರ ಗ್ರಾಮ ಪಂಚಾಯಿತಿ ಸಭೆಗೂ ಹೋಗುವುದಿಲ್ಲ. ಆ ದೃಷ್ಟಿಯಿಂದ ಅವರ ಅಸ್ಥಿತ್ವದ ಬಗ್ಗೆ ನೇರವಾಗಿ ತಾವು ಏನನ್ನೂ ಹೇಳಲಿಲ್ಲ.

11.10 ಎ.ಎಂ

ನಾನು ಕೆಲವು ಮಾತುಗಳನ್ನು ನಗರಾಭಿವೃದ್ಧಿ ಇಲಾಖೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಗರ ಪ್ರದೇಶಗಳಲ್ಲಿ ಅಕ್ರಮವಾಗಿ ಮನೆ ಕಟ್ಟಿರುವುದನ್ನು ಸಕ್ರಮಗೊಳಿಸುತ್ತೇವೆಂದು ಆದೇಶ ಹೊರಡಿಸಿದ್ದಾರೆ. ಇದು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವೇ ಎಂದು ಕೇಳಬಯಸುತ್ತೇನೆ. ಏಕೆಂದರೆ ಕೆಲವು ಕಡೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಅರ್ಜಿ ಸಲ್ಲಿಸುವಂತೆ ಸರಕಾರ ಆದೇಶ ನೀಡಿದ್ದು ಅದು ಬಡವರಿಗೆ ಸರಿಯಾಗಿ ತಿಳಿಯದೇ ಅನೇಕರು ಅರ್ಜಿ ಹಾಕುವುದಕ್ಕೆ ಸಾಧ್ಯವಾಗದೇ ಹೋಗಿದೆ. ಕಾಲಾವಕಾಶವನ್ನು ನಿಗದಿಪಡಿಸಲಾಗಿದ್ದು ಆ ಕಾಲವನ್ನು ವಿಸ್ತರಣೆ ಮಾಡುವಂತಹ ಅವಕಾಶ ಸರಕಾರದಲ್ಲಿ ಇದೆಯೇ? ಯಾವುದೇ ನಗರಸಭಾ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿರುವಂಥದ್ದಾಗಲೀ ಅಥವಾ ಸರಕಾರದ ಮಟ್ಟದಲ್ಲಿ ನಿರ್ಣಯವಾಗಿರುವಂಥಾದ್ದನ್ನು ನಾನು ನೋಡಿಲ್ಲ. ಹಿಂದಿನ ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾಂದಂತಹ ಮಾನ್ಯ ದೇವೇಗೌಡರವರ ಕಾಲದಲ್ಲಿ ಬೆಂಗಳೂರಿನ ಸುತ್ತಮುತ್ತ ಕೆಲವು ಗ್ರಾಮಗಳ ವ್ಯಾಪ್ತಿಯಲ್ಲಿ, ಅಕ್ರಮವಾಗಿ ಪಟ್ಟಣ ಪ್ರದೇಶಗಳಲ್ಲಿ ಕಟ್ಟಿರುವಂತಹ ಮನೆಗಳನ್ನು ಸಕ್ರಮಗೊಳಿಸುವಂತಹ, ಖಾತೆ ಮಾಡುವಂತಹ ಕೆಲಸವನ್ನು ಜವಾಬ್ದಾರಿ ವಹಿಸಿಕೊಂಡು ಮಾಡಿದ್ದಾರೆಯೇ ವಿನಃ ರಾಜ್ಯದ ಬೇರೆ ಬೇರೆ ಪಟ್ಟಣದ ವ್ಯಾಪ್ತಿಯಲ್ಲಿ ಎಲ್ಲೂ ಸಹ ಈ ಕಾರ್ಯಕ್ರಮ ಯಶಸ್ವಿಯಾಗಿಲ್ಲ. ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ. ಇದಕ್ಕೆ ಸಮಯ ಮತ್ತು ಕಡೆಯ ದಿನಾಂಕವನ್ನು ಸ್ವಲ್ಪ ಮುಂದುವರಿಸಿ ಆ ಭಾಗದ ಬಡ ಜನರು ಸರಕಾರಿ ಜಮೀನುಗಳಲ್ಲಿ ಮನೆಗಳನ್ನು ಏನು ಕಟ್ಟಿಕೊಂಡಿದ್ದಾರೆ ಅದನ್ನು ಸಕ್ರಮಗೊಳಿಸುವುದಕ್ಕೆ ಸ್ವಲ್ಪ ಸಮಯ ವಿಸ್ತರಣೆ ಮಾಡಿ ಕೊನೆ ದಿನಾಂಕವನ್ನು ಸರಕಾರದಿಂದ ಪ್ರಕಟಣೆ ಮಾಡಬೇಕೆಂದು ಸಚಿವರಲ್ಲಿ ವಿನಂತಿಸುತ್ತೇನೆ.

ಉಪಾಧ್ಯಕ್ಷರು : ತಾವು ತಮ್ಮ ಭಾಷಣ ಬೇಗನೆ ಮುಗಿಸಬೇಕು. ಕಾಂಗ್ರೆಸ್ ಪಕ್ಷಕ್ಕೆ ಒಂದೂ ಕಾಲು ಗಂಟೆ ಅವಕಾಶ ನಿಗದಿ ಮಾಡಿದೆ. ನೀವು ಒಬ್ಬರೇ ಕಾಂಗ್ರೆಸ್ ಪಕ್ಷವೇ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಒಂದೂಕಾಲು ಗಂಟೆ ಅವಕಾಶ ಇದೆ. ನನಗೆ ಮಾತನಾಡುವುದಕ್ಕೆ ನಮ್ಮ ಪಾರ್ಟಿಯವರು ಹೇಳಿದ್ದಾರೆ. ಆದ್ದರಿಂದ ನಾನು ಮಾತನಾಡುತ್ತಿದ್ದೇನೆ. ಪೌರ ಕಾರ್ಮಿಕರ ಕೊರತೆ ಇಡೀ ರಾಜ್ಯದಲ್ಲಿ ಇರುವಂಥಾದ್ದು ತಮಗೆ ಗೊತ್ತಿದೆ. ಇದು ಬಹಳ ಪ್ರಮುಖವಾದ ಸಮಸ್ಯೆಯಾಗಿದೆ. ಆರ್ಥಿಕವಾಗಿ ನಗರಸಭೆ, ಪುರಸಭೆಗಳ ಸ್ಥಿತಿಗತಿಗಳ ಬಗ್ಗೆ ಸರಕಾರದ ಗಮನ ಸೆಳೆದಿದ್ದೆ. ಈ ನಗರ ಸಭಾ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವ ಬಗ್ಗೆ ಸರಕಾರದವರು ಒಂದು ನೀತಿಯನ್ನು ಹಾಕಬೇಕಾಗುತ್ತದೆ. ಪೌರ ಕಾರ್ಮಿಕರ ಸಂಬಳ ವಗೈರೆ ಕೊಡುವುದಕ್ಕೆ ಅನೇಕ ನಗರ ಸಭೆ ಪುರಸಭೆಗಳ ಶಕ್ತಿಶಾಲಿಯಾಗಿಲ್ಲ ಅವರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಸ್ವಚ್ಛತೆ ಬಗ್ಗೆ ತಾವೇನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಹಿಂದೆ ನಮ್ಮ ಕಾಲದಲ್ಲಿ ಏನು ಮಾಡಿದ್ದೆವು ಎಂದರೆ ಗುತ್ತಿಗೆಯಾದಾರದ ಮೇಲೆ ಲಾರಿಗಳಾಗಲಿ, ಟ್ರಾಕ್ಟರ್‌ಗಳಾಗಲೀ ಒಂದು ಲೋಡಿಗೆ ಇಷ್ಟು ಎಂದು ಹೇಳಿ ಕಸ ಸಾಗಿಸುವಂತಹ ಪ್ರಯತ್ನ ಮಾಡಿದ್ದೆವು. ಆ ರೀತಿಯಲ್ಲಾದರೂ ಒಂದು ಸುತ್ತೋಲೆ ಹೊರಡಿಸುವುದಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಏನು ತೊಂದರೆ ಇದೆ ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಸಿ ಬೈರೇಗೌಡ : ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಹಳ ಹಿಂದುಳಿದಿವೆ ಎಂದು ತಾವು ಹೇಳುತ್ತಿದ್ದೀರಿ. ನನಗೆ ನೆನಪು ಇರುವ ಹಾಗೆ ತಮಗೂ ಆ ಇಲಾಖೆಯಲ್ಲಿ ಕೆಲಸ ಮಾಡಿದ ಅನುಭವ ಇದೆ. ತಮ್ಮ ಅನುಭವದ ಆಧಾರದ ಮೇಲೆಯೇ ಆರ್ಥಿಕವಾಗಿ ಈ ಸಂಸ್ಥೆಗಳು ಏಕೆ ಹಿಂದುಳಿದಿವೆ ಎಂಬ ಬಗ್ಗೆ ಬೆಳಕು ಚೆಲ್ಲುವುದಕ್ಕೆ ತಾವು ಪ್ರಯತ್ನ ಮಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸಚಿವರು ಹೇಳಿದ ಹಾಗೆ ನಾನು ಕೇವಲ 6 ತಿಂಗಳ ಕಾಲ ಆ ಇಲಾಖೆಯಲ್ಲಿ ಸಚಿವನಾಗಿ ಕೆಲಸ ನಿರ್ವಹಿಸಿದ್ದೇನೆ. ಆರ್ಥಿಕವಾಗಿ ಹಿಂದುಳಿದಿರುವ ವಿಚಾರದಲ್ಲಿ ನಾವು ಹೇಳಬೇಕಾಗುತ್ತದೆ. ಈ ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದೇ ಸರಕಾರಗಳು ಬಂದಿರುವಂತಹ ಸಂದರ್ಭದಲ್ಲಿ ಮನೆ ಕಂದಾಯ ಹೆಚ್ಚು ಮಾಡುತ್ತೇವೆಂದು ಹೇಳಿದರೆ ಅದಕ್ಕೆ ವಿರೋಧ ಬರುತ್ತದೆ. ನೀರಿನ ತೆರಿಗೆ ಹೆಚ್ಚು ಮಾಡುತ್ತೇವೆಂದು ಹೇಳಿದರೆ ವಿರೋಧ ಬರುತ್ತದೆ ಅಥವಾ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚು ಮಾಡುತ್ತೇವೆಂದು ಹೇಳಿದರೆ ವಿರೋಧ ಬರುತ್ತದೆ. ಆರ್ಥಿಕವಾಗಿ ನಗರಸಭೆ ಪುರಸಭೆಯನ್ನು ಮುಂದೆ ಹೇಗೆ ತರುವುದು ಎಂಬ ಬಗ್ಗೆ ಮಾನ್ಯ ಹಿರಿಯ ಸಚಿವರಾದ ಮಾನ್ಯ ಬೈರೇಗೌಡರು ಹೇಳಿದರು. ಆಕ್ಟ್ರಾಯ್ ಗ್ರ್ಯಾಂಟ್ ಎಂದು ತಾವು ಕೊಡುತ್ತಿದ್ದೀರಿ. ಇದು ಅಬಾಲಿಷ್ ಆದಂತಹ ಸಂದರ್ಭದಲ್ಲಿ ತಾವು 2 ಪರ್ಸೆಂಟ್ ಟರ್ನ್ ಓವರ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್ 2 ಪರ್ಸೆಂಟ್ ಎಂದು ತಾವು ಮಾಡಿದಿರಿ. ಸಂದರ್ಭದಲ್ಲಿ ನಗರ ಸಭೆ, ಪುರಸಭೆಗೆ ಆ ಕಾಲದಲ್ಲಿ ಎಷ್ಟು ಆದಾಯ ಇತ್ತೋ ಅಷ್ಟೇ ಆದಾಯ ಇವತ್ತು ಸೀಮಿತಗೊಳಿಸಿಕೊಂಡು ಅಷ್ಟೇ ಹಣವನ್ನು ತಾವು ಬಿಡುಗಡೆ ಮಾಡುತ್ತಿದ್ದೀರಿ. ಅದರ ಬಗ್ಗೆ ಮಾಹಿತಿ ಇದೆ. ಲೋಕೋಪಯೋಗಿ ಇಲಾಖೆಗೆ ರಸ್ತೆ ವಾಹನ ತೆರಿಗೆ ಇವತ್ತು ಬರುತ್ತಿದೆ. ಹತ್ತು ವರ್ಷದ ಹಿಂದೆ ತಾವೇನು ಹಣ ಕೊಡುತ್ತಿದ್ದೀರಿ ಅಷ್ಟೇ ಹಣ ತಾವು ಕೊಡುತ್ತಿದ್ದೀರಿ. ನಮ್ಮ ಹಿಂದಿನ ವಿಷಯ ಸಮಿತಿ ವರದಿ ಏನು ಕೊಟ್ಟಿದ್ದೇವೆ ಅದನ್ನು ತಾವು

ನೋಡಬೇಕು. ಸ್ಟ್ಯಾಂಪ್ ಶುಲ್ಕ ತಾವು ಪಟ್ಟಣದ ವ್ಯಾಪ್ತಿಯಲ್ಲಿ ಪಡೆಯುತ್ತೀರಿ. ಅದರಲ್ಲಿ ಎಷ್ಟು ಪರ್ಸೆಂಟ್ ಹಣವನ್ನು ತಾವು ನಗರ ಸಭೆಗಳಿಗೆ ಕೊಡುತ್ತಿದ್ದೀರಿ? 10-15 ವರ್ಷಗಳ ಹಿಂದೆ ಏನು ಶೇಕಡಾವಾರು ಕೊಡುತ್ತಿದ್ದೀರಿ ಅಷ್ಟೇ ಹಣವನ್ನು ತಾವು ಇವತ್ತೂ ಕೊಡುತ್ತಿದ್ದೀರಿ. ಟರ್ನ್ ಓವರ್ ತೆರಿಗೆ ಹೆಚ್ಚಾಗಿದ್ದರೂ ಸಹ ತಾವು ಅಕ್ವಾಯ್ ಗ್ರ್ಯಾಂಟ್ ಪ್ರತಿವರ್ಷ ಶೇಕಡ 10 ರಷ್ಟು ಹೆಚ್ಚಾಗಿ ಕೊಡುತ್ತಿದ್ದೀರಿ. ನ್ಯಾಯವಾಗಿ ಟರ್ನ್ ಓವರ್ ತೆರಿಗೆ ಏನು ಇದೆ ಅದು ಶೇಕಡ 40 ರಷ್ಟು ಹೆಚ್ಚಾಗಿದ್ದು ತಾವು ಶೇಕಡ 10 ರಷ್ಟು ಮಾತ್ರ ನಗರ ಸಭೆಗಳಿಗೆ ಕೊಡುತ್ತಿದ್ದೀರಿ. ಕನಿಷ್ಠ ಪಕ್ಷ ಅದರಲ್ಲಿ ಅರ್ಧ ಭಾಗವನ್ನಾದರೂ ಕೂಡ ನಗರ ಸಭೆಗಳಿಗೆ ಕೊಟ್ಟರೆ ಅದು ಇನ್ನೂ ಉತ್ತಮವಾಗಿ ಆಗುತ್ತಿತ್ತು. ಚಲನ ಚಿತ್ರಗಳಲ್ಲಿ ಎಂಟರ್‌ಟೇನ್‌ಮೆಂಟ್ ತೆರಿಗೆ 3 ತಿಂಗಳಿಗೊಮ್ಮೆ ನೇರವಾಗಿ ಪುರಸಭೆ ನಗರಸಭೆಗಳಿಗೆ ಬರುತ್ತಿತ್ತು. ಆದರೆ ರಾಜಕೀಯ ಒತ್ತಡಗಳಿಂದ ಚಲನಚಿತ್ರದ ಸಂಘದವರ ಒತ್ತಡದಿಂದ ಇವರೇ ಎಂಟರ್‌ಟೇನ್‌ಮೆಂಟ್ ತೆರಿಗೆಯನ್ನು ಅಬಾಲಿಷ್ ಮಾಡಿ ಕನಿಷ್ಠ 3 ತಿಂಗಳಿಗೊಮ್ಮೆ 10-15 ಲಕ್ಷ ರೂಪಾಯಿ ಆದಾಯ ನಗರಸಭೆ, ಪುರಸಭೆಗಳಿಗೆ ಬರತಕ್ಕಂತಹ ಅವಕಾಶಕ್ಕೆ ಕಡಿವಾಣ ಹಾಕಲಾಗಿದೆ.

ಶ್ರೀ ಸಿ. ಭೈರೇಗೌಡ : ಬೇರೆ ಬೇರೆ ಮೂಲಗಳಿಂದ ಬರಬೇಕಾದಂತಹ ಆದಾಯದ ಬಗ್ಗೆ ಮಾತ್ರ ತಾವು ಹೇಳುತ್ತಿದ್ದೀರಿ. ಸ್ವತಃ ಆ ಸಂಸ್ಥೆಗಳವರು ರೂಢಿಸಿಕೊಳ್ಳಬೇಕಾದ ಆದಾಯವೇನು ಇದೆ ಅದರ ಬಗ್ಗೆ ಹೇಳಿ. ನಾನು ಅರ್ಬನ್ ವಾಟರ್ ಸಪ್ಲೈನ ಅಧ್ಯಕ್ಷನಾಗಿ ಕೆಲಸ ಮಾಡತಕ್ಕಂತಹ ಅವಕಾಶ ಸಿಕ್ಕಿತ್ತು. ನೀರನ್ನು ದೂರದಿಂದ ಲಿಫ್ಟ್ ಮಾಡಿ ಶುದ್ಧೀಕರಣ ಮಾಡಿ ವಿತರಣೆ ಮಾಡುತ್ತಾರೆ. ಅನೇಕ ಮುನಿಸಿಪಾಲಿಟಿಗಳಲ್ಲಿ ವಸೂಲಿ ಕೇಳುವುದಕ್ಕೇ ಹೋಗಿಲ್ಲ. ಕೇಳಿದರೂ ಸಹ ಅದು ಯಾವ ರೀತಿ ವಸೂಲಿಯಾಗುತ್ತದೆಂದು ಆ ಇಲಾಖೆಯನ್ನು ನಡೆಸಿರತಕ್ಕಂತಹ ತಮಗೆ ತಿಳಿದಿದೆ. ಅನೇಕ ಕಡೆ ಮೀಟರ್ ಹಾಕಬೇಕಾದರೆ ಅದಕ್ಕೇ ಪ್ರಬಲವಾದ ವಿರೋಧ ಇದೆ. ಅಲ್ಲಿರತಕ್ಕಂತಹ ಮುನಿಸಿಪಾಲಿಟಿಯವರೂ ಸಹ ಅದಕ್ಕೆ ಮೀಟರ್ ಹಾಕಲು ಒಪ್ಪುವುದಿಲ್ಲ. ಕೆಲವು ಕಡೆ ಕಮರ್ಷಿಯಲ್ ಆಗಿ ಅಂದರೆ ಹೋಟೆಲಿನವರು ಮುಂತಾದವರು ಮೀಟರ್ ಪಡೆಯುತ್ತಾರೆ ಅವರು ಎಷ್ಟರ ಮಟ್ಟಿಗೆ ಪೇ ಮಾಡುತ್ತಾರೆಂದು ತಮಗೇ ಗೊತ್ತಿದೆ. ಕೆಲವು ಕಡೆ ಮುನಿಸಿಪಾಲಿಟಿಯಿಂದ ಬರತಕ್ಕಂತಹ ನೀರನ್ನು ಬಾವಿಯೊಳಗೆ ತೆಗೆದುಕೊಂಡು ಹೋಗಿ ಬಿಟ್ಟುಕೊಂಡಿರತಕ್ಕಂಥಾದ್ದು ಉಂಟು. ಅಲ್ಲಿಂದ ಮೇಲೆ ಪಂಪ್ ಮಾಡುತ್ತಾರೆ. ಆ ಬಾವಿ ಯಾವತ್ತೂ ತುಂಬುವುದೇ ಇಲ್ಲ. 24 ಗಂಟೆ ನೀರು ಬಂದರೂ 24 ಗಂಟೆ ಬಾವಿಯ ಒಳಗೆ ನೀರು ಹೋಗುತ್ತದೆ. ಇಂಥಾದ್ದೆಲ್ಲಾ ಇದೆ. ಅನೇಕ ಕಡೆ ಮುನಿಸಿಪಾಲಿಟಿಯ ಅಂಗಡಿಗಳು ಇವೆ ಮುನಿಸಿಪಾಲಿಟಿ ಕಟ್ಟಡಗಳು ಇವೆ ಅದರ ಬಾಡಿಗೆ ಯಾವ ರೀತಿ ಉಪಯೋಗಿಸಿ ಕೊಳ್ಳುತ್ತಿದ್ದಾರೆಂಬುದನ್ನು ತಾವು ವಿಚಾರ ಮಾಡಬೇಕು. ಅನೇಕ ಕಡೆ ಖಾಲಿ ನಿವೇಶನಗಳು ಇವೆ ಅವನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದನ್ನು ವಿಚಾರ ಮಾಡಿ. ಸ್ಥಳೀಯ ಸಂಸ್ಥೆಗಳು ಅವರು ಹಣ ಕೊಡಲಿಲ್ಲ ಇವರು ಹಣ ಕೊಡಲಿಲ್ಲ ಮತ್ತೊಂದು ಕಡೆಯಿಂದ ಹಣ ಬರಲಿಲ್ಲವೆಂದು ಹೇಳುವುದರ ಬದಲಾಗಿ ಅವರೇ ಇದನ್ನು ರೂಢಿಸಿಕೊಳ್ಳಬೇಕು. ಸರಕಾರ ಇದೊಂದಕ್ಕೆ ಖರ್ಚುಮಾಡಲಿಕ್ಕೆ ಸಾಧ್ಯವಿಲ್ಲ. ನಾನಾ ಭಾಗಗಳಲ್ಲಿ ಸರಕಾರ ಹಣವನ್ನು ಖರ್ಚು ಮಾಡಿಅ ವೆಲ್ಲವನ್ನೂ ನೋಡಿಕೊಳ್ಳಬೇಕಾಗುತ್ತದೆ. ನೀವು ಹೇಳಿರತಕ್ಕಂಥಾದ್ದು ನಿಜ ಇರಬಹುದು. ನೇರವಾಗಿ ನನಗೆ

ಮಾಹಿತಿ ಇಲ್ಲದಿದ್ದರೂ ನೀವು ಹೇಳಿರುವುದಕ್ಕೆ ನಾನು ಡಿಸ್‌ಪ್ಯೂಟ್ ಮಾಡಲು ಹೋಗುವುದಿಲ್ಲ. ಆದರೆ ಇವರು ಸ್ವತಃ ರೂಢಿಸಬೇಕಾಗಿರತಕ್ಕಂತಹ ಆದಾಯವನ್ನು ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ ಎನ್ನುವುದನ್ನು ಆ ಇಲಾಖೆಯನ್ನು ತಾವು ನಿರ್ವಹಿಸಿ ಅನುಭವ ಹೊಂದಿದ್ದೀರಿ. ಅದರ ಬಗ್ಗೆ ಮಾಹಿತಿ ಹೇಳಿ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಬೇಕು. ಒಂದು ಗಂಟೆ ಆಯಿತು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆಗಲಿ. ಮಧ್ಯದಲ್ಲಿ ಕೇಳಿದಾಗ ಅದಕ್ಕೆ ಹೇಳಬೇಕಲ್ಲ.

ಉಪಾಧ್ಯಕ್ಷರು : ನೀವು ಏಕೆ ಯೀಲ್ಡ್ ಆಗಬೇಕು? ಹೇಳುವುದು ಹೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸರಿ. ಹಾಗಾದರೆ ಮುಂದಕ್ಕೆ ಯೀಲ್ಡ್ ಆಗುವುದಿಲ್ಲ. ಹಿರಿಯ ಸಚಿವರಾದ ಭೈರೇಗೌಡರು ಹೇಳಿದ್ದಾರೆ. ನಗರಾಭಿವೃದ್ಧಿ ಇಲಾಖೆಯ ಕಳೆದ ವಾರ್ಷಿಕ ವರದಿಯು ನನ್ನ ಕೈಯಲ್ಲಿದೆ. ಪ್ರಾಯಶಃ ತಮಗೂ ಕಳುಹಿಸಿಕೊಟ್ಟಿದ್ದಾರೆ. ಆದಾಯವನ್ನು ಹೆಚ್ಚಿಸಿ ಕೊಳ್ಳುವುದಕ್ಕೆ ಅನೇಕ ಕಾರ್ಯಕ್ರಮಗಳು ಇವೆ. ಇಲ್ಲ ಎಂದು ನಾನು ಹೇಳಲಿಲ್ಲ. ಆರ್ಥಿಕವಾಗಿ ಬಹಳ ಚೆನ್ನಾಗಿರುವ ಕೆಲವು ಪುರಸಭೆಗಳು, ನಗರಸಭೆಗಳು ನಮ್ಮ ರಾಜ್ಯದಲ್ಲಿ ಇವೆ. ಉಳಿದಂಥ ಕಡೆ ಇದರ ಅಭಿವೃದ್ಧಿ ಬಗ್ಗೆ, ಅಥವಾ ಇದರ ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆ ಏನು ಮಾಡಬೇಕು ಎಂದು ಹೇಳಿ ತಾವು ಬರುವುದಕ್ಕಿಂತ ಮುಂಚೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಿಗೆ ಹೇಳುತ್ತಿದ್ದೆ. ಸಾರ್ವಜನಿಕವಾಗಿ, ಬಹಿರಂಗವಾಗಿ ಹರಾಜು ಮಾಡಬೇಕಾದಂಥ ನಿವೇಶನಗಳನ್ನು ನಗರಸಭಾ, ಪುರಸಭಾ ವ್ಯಾಪ್ತಿಯಲ್ಲಿ ಬೇರೆ ಬೇರೆಯವರ ಹೆಸರಿಗೆ ಖಾತೆ ಮಾಡಿಸಿ ಮಾರಾಟ ಮಾಡಿರುವ ಪ್ರಸಂಗಗಳು ತಮಗೂ ನನಗೂ ತಿಳಿದಿದೆ. ತಾವು ನೀರಿನ ವಿಚಾರ ಈಗ ಹೇಳಿದಿರಿ. ಕುಡಿಯುವ ನೀರನ್ನು ಒದಗಿಸಿಕೊಡುವ ಜವಾಬ್ದಾರಿ ಆ ಸ್ಥಳೀಯ ಸಂಸ್ಥೆಗಳಿಗೆ ಇದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಮೀಟರ್ ಅಳವಡಿಸುವ ಬಗ್ಗೆ ಆತಂಕ ಏಕೆ? ಅವರು ಒಪ್ಪುತ್ತಾ ಇಲ್ಲ ಎಂದು ಹೇಳಿದರೆ ನೀವು ಒಪ್ಪಿಸಬೇಕಾಗುತ್ತದೆ. ಆದಾಯ ಹೆಚ್ಚಿಸುವುದಕ್ಕಾಗಿ ನೀರಿನ ದರ ನಾವು ಏರಿಸಿದ್ದೇವೆ ಎಂದು ಹೇಳಿದಿರಿ. ನಾವು ಇವತ್ತು ಅದಕ್ಕೆ ವಿರೋಧ ಮಾಡಿದೆವು. ಹಿಂದೆಯೂ ವಿರೋಧ ಮಾಡಿದ್ದೆವು. ದರ ಏರಿಸಿದಿರಿ. ಅದರ ಉಪಯೋಗ ಏನಾಯಿತು? ಅನೇಕ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಜನಸಂಖ್ಯೆ ಬೆಳೆಯುತ್ತಿರುವುದರಿಂದ ತಾವು ಅಷ್ಟೇ ಪ್ರಮಾಣದಲ್ಲಿ ನೀರು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು ನಿಮಗೆ ಗೊತ್ತಿದೆ ಬೆಂಗಳೂರು ಪಟ್ಟಣ ಒಂದೇ ವಿಚಾರ ನಾವು ಇವತ್ತು ಆಲೋಚನೆ ಮಾಡಿದಾಗ 4ನೇ ಹಂತದ ಕಾವೇರಿ ಯೋಜನೆಗೆ ನಾವು ಇವತ್ತು ಕೈಹಾಕಿದ್ದೇವೆ. ನಾನು ನೀರು ಒದಗಿಸಿಕೊಡುವುದರಲ್ಲಿ ಎಂದು ಯಶಸ್ವಿಯಾಗುತ್ತೇವೆ ಎಂದು ಕಾದು ನೋಡಬೇಕಾಗಿದೆ. ಇನ್ನು ವೈಜ್ಞಾನಿಕವಾಗಿ ಅನೇಕ ಜನ ಮಾಹಿತಿ ಕೊಡುವ ಬಗ್ಗೆ ನಾನು ಈಗ ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇನ್ನು ಕೇವಲ ಹತ್ತುವರ್ಷಗಳಲ್ಲಿ ಕೆ.ಆರ್.ಎಸ್.ನ ನೀರು ಯಾರು ಬಳಸುತ್ತಾರೆ ಎನ್ನುವುದರ ಬಗ್ಗೆ ಮಾಹಿತಿ ಇವತ್ತು ಸರ್ಕಾರದ ಮುಂದಿದೆ. ರೈತರು ಎದ್ದು ಬೊಬ್ಬೆ ಹಾಕುವಂಥ ದಿನಗಳು ಮುಂದೆ ಬರುತ್ತಿವೆ ಎನ್ನುವುದರ ಬಗ್ಗೆ ತಮಗೂ ಗೊತ್ತಿದೆ, ನನಗೂ ಗೊತ್ತದೆ. ಏಕೆಂದರೆ 4 ನೇ ಹಂತದ ನೀರಿನ ಯೋಜನೆ ಆದಮೇಲೆ ಬೆಂಗಳೂರು ಪಟ್ಟಣಕ್ಕೆ ಎಷ್ಟು ನೀರು ಬೇಕು ಎನ್ನುವುದರ ಬಗ್ಗೆ ಹಾಗೂ ವಸೂಲಾತಿಯ ಬಗ್ಗೆ

ಹೇಳಿದಿರಿ. ಅಧಿಕಾರಿಗಳಿಗೆ ಚುರುಕುಗೊಳಿಸುವ ಜವಾಬ್ದಾರಿ ಆ ಸ್ಥಳೀಯ ಸಂಸ್ಥೆ ಚುನಾಯಿತ ಪ್ರತಿನಿಧಿಗಳಾಗಿದ್ದರೂ ಸಹಾ ತಮಗೂ ಅವಕಾಶ ಇದೆ. ಅನೇಕ ಪುರಸಭೆ, ನಗರಸಭೆಗಳಲ್ಲಿ 30 ರೂಪಾಯಿ ಟ್ಯಾಕ್ಸ್ ಆಗಲೀ, ನೀರಿನ ಕರವಾಗಲಿ ಶೇಕಡ 80 ರಷ್ಟು ಕಲೆಕ್ಟ್ ಮಾಡಿರುವ ವಿಚಾರ ಈ ಪುಸ್ತಕದಲ್ಲಿ ಅವರು ಕೊಟ್ಟಿದ್ದಾರೆ. ಕೆಲವು ಕಡೆ ನೂರಕ್ಕೆ ನೂರು ವಸೂಲು ಆಗದೇ ಇರುವ ಪುರಸಭೆ, ನಗರಸಭೆಗಳು ಇವೆ. ಆದರೆ ತಮ್ಮ ಕೈಯಲ್ಲಿ ಅಧಿಕಾರ ಇದೆ. ತಮ್ಮ ಕೈಯಲ್ಲಿ ಅಧಿಕಾರಿಗಳು ಇದ್ದಾರೆ. ಅಂಥ ಪುರಸಭೆ, ನಗರಸಭೆ ಮೇಲೆ ತಾವು ಏಕೆ ಕ್ರಮ ಜರುಗಿಸಿಲ್ಲ? ಈಗ ಐಡಿಎಸ್ಎಂಟಿ ಎಂಬ ಹೊಸ ಯೋಜನೆ ಕೇಂದ್ರಸರ್ಕಾರದಲ್ಲಿ ಇದೆ. ಒಂದು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟುವಂಥ ಜಾಗದಲ್ಲಿ ಕಟ್ಟಿ ಸಾಕಷ್ಟು ಆದಾಯ ಮಾಡಿಕೊಳ್ಳುವಂಥ ಅವಕಾಶಗಳು ಅನೇಕ ಪುರಸಭೆ, ನಗರಸಭೆಗಳಿಗೆ ಇದೆ. ಅದರಲ್ಲೂ ತಾವು ಸೇರಿಸಿರುವ ಅನೇಕ ಯೋಜನೆಗಳು ಯಶಸ್ವಿಯಾಗಿ ನಡೆದಿವೆ. ಮುಂದಿನ ವರ್ಷಗಳಲ್ಲಿ ಯಶಸ್ವಿಯಾಗಿ ನಡೆಯುವಂಥ ಅವಕಾಶ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ, ಸರ್ಕಾರ ಸ್ವಲ್ಪ ಸಹಾಯ ಕೊಟ್ಟಾಗ ಮಾತ್ರ ಸ್ಥಳೀಯ ಸಂಸ್ಥೆಗಳು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ನಾನು ನಿಮ್ಮನ್ನು ಕೇಳುತ್ತೇನೆ, ಯಾವುದೇ ಒಂದು ನಗರಪ್ರದೇಶದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ರಸ್ತೆ ಹಾದುಹೋಗುವ ಸಂದರ್ಭದಲ್ಲಿ ನಗರಸಭೆಯವರು ಪುರಸಭೆಯವರು ಡಾಂಬರೀಕರಣ ಮಾಡುವುದಕ್ಕೆ ಸಾಧ್ಯ ಇದೆಯೇ? ಇದಕ್ಕೆ ಸರ್ಕಾರದಲ್ಲಿ ಒಂದು ಕಾನೂನನ್ನು ಮಾಡಬೇಕಾಗುತ್ತದೆ. ಪಟ್ಟಣದ ಪ್ರದೇಶದ ವ್ಯಾಪ್ತಿಯಲ್ಲಿ ಹಾದು ಹೋಗುವಂಥ ಲೋಕೋಪಯೋಗಿ ರಸ್ತೆಗಳು ಯಾವುದು ಇದೆ, ಇದರ ಅಭಿವೃದ್ಧಿಗೆ ನೇರವಾಗಿ ಲೋಕೋಪಯೋಗಿ ಇಲಾಖೆಯವರೇ ಜವಾಬ್ದಾರಿ ತೆಗೆದುಕೊಂಡು ಆ ರಸ್ತೆಯನ್ನು ದುರಸ್ತಿ ಮಾಡಬೇಕಾಗುತ್ತದೆ. ನಗರಸಭಾ ವ್ಯಾಪ್ತಿಯವರು ಅಲ್ಲಿ ಕೈ ಹಾಕಿದಾಗ ಪ್ರಾಯಶಃ ಬರುವಂಥ ಆದಾಯವೆಲ್ಲಾ ಹಾದುಹೋಗುವ ರಾಜ್ಯ ಹೆದ್ದಾರಿ ಇರಬಹುದು, ರಾಷ್ಟ್ರೀಯ ಹೆದ್ದಾರಿ ಇರಬಹುದು, ಎಲ್ಲಾ ಹಣವನ್ನು ನಾವು ಅಲ್ಲಿಗೆ ಹಾಕಬೇಕಾಗುತ್ತದೆ. ರಾಜ್ಯ ಹೆದ್ದಾರಿ ಆಗಲಿ, ರಾಷ್ಟ್ರೀಯ ಹೆದ್ದಾರಿ ಆಗಲಿ ಈ ಬಗ್ಗೆ ನಾನು ಮಂತ್ರಿಯಾದಾಗಲೂ ಅದೇ ಕೂಗು ಇತ್ತು. ಇವತ್ತು ನೀವಿದ್ದಾಗಲೂ ಅದೇ ಕೂಗಿದೆ. ಹುಬ್ಬಳ್ಳಿ ಪಟ್ಟಣದ ಮಧ್ಯ ಭಾಗದಲ್ಲಿ ಹಾದುಹೋಗುವ ರಸ್ತೆಗೆ ಇವತ್ತಿನವರೆಗೆ ನಾವು ಡಾಂಬರೀಕರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಆ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೇ, ತಾವು ಅದೇ ರಸ್ತೆಯಲ್ಲಿ ಹೋಗುತ್ತಿದ್ದೀರಿ ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಇರುವ ರಸ್ತೆಯನ್ನು ಸಂಪುರ್ಣವಾಗಿ ಟಾರ ರಸ್ತೆ ಮಾಡಿದ್ದೇವೆ. ಪಕ್ಕಾ ರಸ್ತೆಯಾಗಿದೆ. ತಾವು ಒಂದು ಸಲ ಹೋಗಿ ನೋಡಿಕೊಂಡು ಬಂದು ಆಮೇಲೆಮಾತನಾಡಿದರೆ ಒಳ್ಳೆಯದು.

ಉಪಾಧ್ಯಕ್ಷರು : ಅವರನ್ನು ಈ ಸಾರಿ ತಾವು ಹೋಗುವಾಗ ಕರೆದುಕೊಂಡು ಹೋಗಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಲೋಕೋಪಯೋಗಿ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ನಿನ್ನೆ ಈ ಸದನದಲ್ಲಿ ತಮ್ಮ ಸಮ್ಮುಖದಲ್ಲಿ ನಮ್ಮ ಹುಬ್ಬಳ್ಳಿ ಶಾಸಕರಾದಂಥವರು ಜೋಡಿ ರಸ್ತೆ ಪ್ರಾರಂಭ ಮಾಡಬೇಕು, ಅದರ ವ್ಯವಸ್ಥೆಯಾಗಬೇಕು ಎಂಬ ವಿಚಾರ ಪ್ರಸ್ತಾಪ ಮಾಡಿ ಹೇಳಿದರು.

ಉಪಾಧ್ಯಕ್ಷರು : ನಿನ್ನೆ ಅವರು ಬೈಪಾಸ್ ರಸ್ತೆ ಬಗ್ಗೆ ಹೇಳಿದ್ದುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆ ಕೆಲವು ಮಾಹಿತಿಗಳನ್ನು ಕೊಡುವುದಕ್ಕೆ ನಾನು ಇಚ್ಚೆಪಡುತ್ತೇನೆ. ಮಾನ್ಯ ಹಿರಿಯ ಸಚಿವರಾದ ಭೈರೇಗೌಡರು ಹೇಳಿದಹಾಗೆ ನಗರಸಭಾ ಪುರಸಭೆಯ ಆದಾಯವನ್ನು ಹೆಚ್ಚಿಸಿ ಕೊಳ್ಳುವುದಕ್ಕಾಗಿ ನಗರಸಭೆ ಪುರಸಭೆ ಬಗ್ಗೆ ಸರ್ಕಾರಕ್ಕೆ ಬರುವ ಪ್ರಸ್ತಾವನೆಗೆ ತತ್‌ಕ್ಷಣವೇ ಅನುಮತಿ ಕೊಡುವ ಬಗ್ಗೆ ತಾವು ಪ್ರಯತ್ನಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ನಗರ ಯೋಜನೆ, ನಗರಸಭೆ ಮತ್ತು ಪೌರಾಡಳಿತ ಇಲಾಖೆ ಮಾನ್ಯ ಮಿರಾಜುದ್ದೀನ್ ಪಾಟೀಲರಿಗೆ ಬರುತ್ತದೆ. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಬೇರೆ ಬೇರೆ ಇಲಾಖೆಗಳಿಗೆ ಐದು ಜನ ಸಚಿವರು ಇದ್ದೇವೆ.

ಉಪಾಧ್ಯಕ್ಷರು : ನಗರಸಭೆಯ ಬೇಡಿಕೆ ಇವತ್ತು ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಏತಕ್ಕೆ ಹೇಳುತ್ತೇನೆ ಎಂದರೆ ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಿನ್ನೆ ಚರ್ಚೆಯೇ ಬೇಡ, ಓಟಿಗೆ ಹಾಕಿಬಿಡೋಣ ಎಂದು ಹೇಳಿದರು.

ಉಪಾಧ್ಯಕ್ಷರು : ತಾವು ಒಂದು ಗಂಟೆ ಮಾತನಾಡಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ : ನಗರಾಭಿವೃದ್ಧಿ ಇಲಾಖೆ ಬಗ್ಗೆ ತಾವು ಹೇಳಿದ್ದು ಸರಿ. ಅದರಲ್ಲಿ ನಗರ ಯೋಜನಾ ಇಲಾಖೆ, ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ ಮತ್ತು ನಗರ ಯೋಜನೆ ಈ ಮೂರು ಬರುತ್ತವೆ. ಏಕೆಂದರೆ, ತಾವು ಸಚಿವರಾಗಿದ್ದಾಗ ಪೂರ್ತಿ ಇತ್ತೇನೋ. ಪೌರಾಡಳಿತ, ನಗರಾಭಿವೃದ್ಧಿ ಮತ್ತು ವಸತಿಯನ್ನು ಮಾನ್ಯ ರೇವಣ್ಣನವರು ನೋಡುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಬಚ್ಚೇಗೌಡರು ಸಚಿವಸಂಪುಟದ ಸದಸ್ಯರು. ಅವರು ಬರೆದುಕೊಂಡು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಲಿ.

ಶ್ರೀ ಬಿ.ಎನ್.ಬಚ್ಚೇಗೌಡ : ಅವರ ಬೇಡಿಕೆ ಪ್ರತ್ಯೇಕವಾಗಿ ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈಗ ಇಲ್ಲಿಗೆ ಇದನ್ನು ನಿಲ್ಲಿಸಲೇ?

ಶ್ರೀ ಬಿ.ಎನ್.ಬಚ್ಚೇಗೌಡ : ತಾವು ಸಮಯ ಇದಕ್ಕೇ ವಿನಿಯೋಗಿಸಿ. ಆ ಬೇಡಿಕೆ ಇಲ್ಲ ಎಂದು ತಮಗೆ ಹೇಳಿದೆ. ಆಗಿನಿಂದಲೂ ಸುಮ್ಮನೆ ಕೇಳಿಕೊಂಡು ಇದ್ದೆ ತಾವು ಚೆನ್ನಾಗಿ ಮಾತನಾಡುತ್ತೀರಿ ಅನುಭವ ಇದೆ. ಅದಕ್ಕೆ ತಾವು ಮಾತನಾಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸ್ಲಂ ಬೋರ್ಡ್ ಅವರಿಗೆ ಬರುತ್ತದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ಮಾತನಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಒಂದು ಇಲಾಖೆಗೆ ನಾಲ್ಕು ಜನ ಸಚಿವರು ಇದ್ದಾರೆ. ಟೋಪಿ ಯಾವುದು, ಜುಬ್ಬ ಯಾವುದು, ಪೈಜಾಮ ಯಾವುದು ಎಂದು ನಮಗೆ ಹೇಗೆ ಗೊತ್ತಾಗಬೇಕು? ನಮ್ಮ ಕಾಲದಲ್ಲಿ ಮೂರು ಜನ ಇದ್ದೆವು. ಇವರ ಕಾಲದಲ್ಲಿ ನಾಲ್ಕು ಜನ ಇದ್ದಾರೆ. ಮುಂದೆ ನಿಮ್ಮ ಕಾಲದಲ್ಲಿ ಐದು ಜನ ಆಗುತ್ತಾರೋ ಏನೋ ಗೊತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಳೆದ ಸಾರಿಯೂ ತಾವು ಜುಬ್ಬಾ, ಪೈಜಾಮ, ಟೋಪಿ, ಬಗ್ಗೆ ಹೇಳಿದಿರಿ ಈಗಲೂ ಅದೇ ಹೇಳುತ್ತಿದ್ದೀರಿ. ನನ್ನ ಬೇಡಿಕೆಗಳು ಇರುವುದು ಅಜೆಂಡಾದಲ್ಲಿ ಇದೆ. ದಯಮಾಡಿ 30 ಮತ್ತು 31ರ ಬೇಡಿಕೆಗಳ ಬಗ್ಗೆ ಮಾತನಾಡಿ.

ಉಪಾಧ್ಯಕ್ಷರು : ನಂಬರ್ ನೋಡಿಕೊಂಡು ಅಭ್ಯಾಸ ಮಾಡಿಕೊಂಡು ಬರಬೇಕ್ರಿ. ಸುಮ್ಮನೆ ಹೊರಟು ಬಂದರೆ ಹೇಗೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ನಗರಾಭಿವೃದ್ಧಿ ಇಲಾಖೆ ಮೇಲೆ ನಾಳೆ ಓಟಿಂಗ್‌ಗೆ ಹಾಕಿಬಿಡುತ್ತೇವೆ ಎಂದು ಅಧ್ಯಕ್ಷರು ಹೇಳಿದರು. ಇನ್ನು ಸ್ಲಮ್, ಮತ್ತು ಕೆಯುಡಬ್ಲ್ಯೂಎಸ್ ಬಗ್ಗೆ ಆಗಲೇ ತಾವು ಹೇಳಿಬಿಟ್ಟಿದ್ದರೆ ನಾವು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ.

ಉಪಾಧ್ಯಕ್ಷರು : ಆಯಿತು, ತಾವು ಬೇಗ ಮುಗಿಸಿ. ಅಜೆಂಡಾ ಪ್ರಕಾರ ಹೋಗಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಡಿಮ್ಯಾಂಡ್ ನಂ. 31 ಏನು? ನಗರಾಭಿವೃದ್ಧಿ, ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯಾಭಿವೃದ್ಧಿ ನಿಗಮವನ್ನು ಹೊರತುಪಡಿಸಿ ಎಂದು ಇದೆ. ಈಗ ಅವರು ಹೇಳುತ್ತಿರುವುದು ಏನು? ಯಾವುದನ್ನು ಹೊರತುಪಡಿಸಬೇಕು ಎಂದರೆ ಬೆಂಗಳೂರು ಅಭಿವೃದ್ಧಿ ಯೋಜನೆಗಳು, ಇಲ್ಲ. ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ, ಮಾತನಾಡಬೇಕು.

ಉಪಾಧ್ಯಕ್ಷರು : ಮುನಿಸಿಪಾಲಿಟಿ ವಿಚಾರ ಬೇರೆ ಇದೆ. ಅದಕ್ಕೆ ಬೇರೆ ಮಂತ್ರಿಗಳು ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮುನಿಸಿಪಾಲಿಟಿ ವಿಚಾರ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅವರು ಬರುವವರಿಗೂ ಮಾತನಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : 31 ನೇ ಬೇಡಿಕೆಯಲ್ಲಿ ಬೆಂಗಳೂರಿನ ವಿಚಾರ ಇಲ್ಲ. ಆದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇದೆಯಲ್ಲ, ಇನ್ನು ಮುನಿಸಿಪಾಲಿಟಿ, ನಗರಸಭೆಗಳ ಕಾರ್ಯವೈಖರಿ ಬಗ್ಗೆ ಚರ್ಚೆ ಇದ್ದೇ ಇದೆಯಲ್ಲಿ.

ಶ್ರೀ ಬಿ.ಎಸ್. ಬಚ್ಚೇಗೌಡ : ಈ ನಗರಾಭಿವೃದ್ಧಿ ಇಲಾಖೆಯ ಅಡಿಯಲ್ಲಿ 14 ಸಂಸ್ಥೆಗಳು ಬರುತ್ತವೆ. ಈ 14 ಸಂಸ್ಥೆಗಳಲ್ಲಿ ವಸತಿ ಸಚಿವರು ಶ್ರೀಮಾನ್ ರೇವಣ್ಣನವರು, ಅನಂತ್‌ನಾಗ್‌ರವರು ಬಿಡಬ್ಲ್ಯೂಎಸ್‌ಎಸ್‌ಬಿ ಮತ್ತು ಬಿಸಿಸಿ ಇದ್ದಾರೆ. ನಾನು ನಗರಾಭಿವೃದ್ದಿ ಸಚಿವನಾಗಿದ್ದೇನೆ. ಮತ್ತೆ ಮಿರಾಜುದ್ದೀನ್ ಪಟೇಲರು ಪೌರಾಡಳಿತ ಸಚಿವರು ಇದ್ದಾರೆ.

(ಮುಂದು)

ಶ್ರೀ ಬಿ.ಎನ್. ಬಚ್ಚೇಗೌಡ : ಬೇಡಿಕೆ 31ರಲ್ಲಿ ನಗರಾಭಿವೃದ್ಧಿ ಬೇಡಿಕೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬರುತ್ತದೆ. ಇವೆರಡರಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಬಗ್ಗೆ ತಾವು ಮಾತನಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ವಸತಿ ವಿಚಾರ ಬೇರೆ ಬೇಡಿಕೆಯಲ್ಲಿದೆ. ಬೇಡಿಕೆ ಸಂಖ್ಯೆ: 31ರಲ್ಲಿ ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಂದರೆ ಇನ್‌ಫ್ರಾಸ್ಟ್ರಕ್ಚರ್ ಈ ವಿಷಯಗಳು ಬರುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸರ್ಕಾರದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಇಲಾಖೆ ಕೊಟ್ಟು ನಮ್ಮ ಕಡೆ ಕೌದಿ ಎಂದು ಹೇಳುತ್ತಾರೆ ಆ ರೀತಿ ತೇಪೆ ಆಡಳಿತ ಆಗಿದೆ.

ಶ್ರೀ ಸಿ. ಬೈರೇಗೌಡ : ಸಕ್ಕರೆಗೆ ಒಬ್ಬರು, ಉಪ್ಪಿಗೆ ಒಬ್ಬರು, ಮೆಣಸಿನಕಾಯಿಗೆ ಒಬ್ಬರು ಎಂದು ಮಂತ್ರಿಗಳನ್ನು ನೀವು ಹಿಂದೆ ಮಾಡಿದ್ದೀರಲ್ಲಾ ಈಗಲೂ ಅದೇ ರೀತಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಿಂದೆ ಮೆಣಸಿನಕಾಯಿಗೂ ಮಾಡಿಲ್ಲ, ಗೊಬ್ಬರಕ್ಕೂ ಮಾಡಿಲ್ಲ. ಆದರೆ ನೀವು ಈಗ ಬದನೆಕಾಯಿ, ಉಳ್ಳಾಗಡ್ಡೆ, ಟೊಮೊಟೊಗೆ ಒಬ್ಬೊಬ್ಬರು ಮಂತ್ರಿಗಳನ್ನು ಮಾಡಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲಾಖೆಯ ಬಗ್ಗೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ಯಾರಾದರೂ ಸದಸ್ಯರು ಮಾತನಾಡಿದ್ದನ್ನು ಮಂತ್ರಿಗಳಲ್ಲಿ ಯಾರಾದರೂ ನೋಟ್ ಮಾಡಿಕೊಂಡಿದ್ದರೆ ರಿಪ್ಲೈ ಮಾಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ ಉತ್ತರ ಕೊಡುವುದಕ್ಕೆ ಬರುತ್ತದೆ. ಯಾವ ಯಾವ ಇಲಾಖೆಗೆ ಏನೇನು ಬರುತ್ತದೆ ಎಂಬುದು ನಿಮ್ಮ ಮಂತ್ರಿಗಳಿಗೇ ಗೊತ್ತಿಲ್ಲ. ಆ ಒಂದು ಪರಿಸ್ಥಿತಿ ಇವೊತ್ತು ಬಂದಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಪೌರಾಡಳಿತ ಬೇಡಿಕೆ ಬಗ್ಗೆ ಮಾತನಾಡುತ್ತಿದ್ದರು. ನಗರಾಭಿವೃದ್ಧಿ ಮತ್ತು ಕರ್ನಾಟಕ ನೀರು ಸರಬರಾಜು ಬಗ್ಗೆ ಮಾತನಾಡಿ ಎಂದು ನಾನು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏನೋ ಸ್ಟಡಿ ಮಾಡಿಕೊಂಡು ಬಂದು ಮಾತನಾಡಿದಾಗ ಆಕಸ್ಮಾತ್ ಸಂಬಂಧ ಇಲ್ಲದೆ ಬೇರೆಯದರ ಬಗ್ಗೆ ಮಾತನಾಡಿದ್ದರೆ ಹೇಗಿದ್ದರೂ ಡಿಮಾಂಡ್ ಬಗ್ಗೆ ಚರ್ಚೆಯಾಗುತ್ತದೆ, ಆಗ ಅವರು ನೋಟ್ ಮಾಡಿಕೊಂಡು ರಿಪ್ಲೈ ಕೊಡುವಾಗ ಹೇಳಿದರೆ ಕೊನೆಪಕ್ಷ

ವಿವರವಾಗಿ ಚರ್ಚೆಯಾದಾಗ ನಮ್ಮ ಅಧಿಕಾರಿಗಳ ಗಮನಕ್ಕಾದರೂ ಬರುತ್ತದೆ. ಸಾಧ್ಯವಾದಷ್ಟೂ ಆ ಇಲಾಖೆಗೆ ಸಂಬಂಧಪಟ್ಟಂತೆ ಅವರು ಮಾತನಾಡುತ್ತಾರೆ. ಯಾರೋ ಗೊತ್ತಿಲ್ಲದೆ ಒಂದೆರಡು ಪಾಯಿಂಟ್ ಸಂಬಂಧಿಸಿಲ್ಲದಿರುವಂಥದನ್ನು ಮಾತನಾಡಿದ್ದರೆ ನೋಟ್ ಮಾಡಿಕೊಂಡು ರಿಪ್ಲೈ ಕೊಡುವ ಕಾಲದಲ್ಲಿ ಕೊಡಿಸಬಹುದಲ್ಲವೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ನಿಮ್ಮ ಅಜೆಂಡಾ ಪ್ರಕಾರ ನಗರಾಭಿವೃದ್ಧಿ ಎಂದರೆ ಯಾವುದು?

ಶ್ರೀ ಸಿ. ಬೈರೇಗೌಡ : ಅದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಬರುತ್ತದೆ.

ಉಪಾಧ್ಯಕ್ಷರು : ಬೇಡಿಕೆ 31ರಲ್ಲಿ Urban Development excluding Bangalore Development Projects and Urban Infrastructure Development Corporation ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಲ್ಲಿದೆ?

ಉಪಾಧ್ಯಕ್ಷರು : ಅದು ಬೇರೆ ಡಿಮಾಂಡ್‌ನಲ್ಲಿದೆ. ಆದರೆ ಅದು ಇವೊತ್ತಿನ ಚರ್ಚೆಯಲ್ಲಿ ಇಲ್ಲ. ಕಾರ್ಯಕಲಾಪದ ಸಲಹಾ ಸಮಿತಿ ಸಭೆಯಲ್ಲಿ 8 ಡಿಮಾಂಡ್‌ಗಳನ್ನು ತೆಗೆದುಕೊಂಡು ಚರ್ಚೆಯಾಗಬೇಕು ಎಂದು ನಿರ್ಣಯವಾಗಿದೆ. ಆ ಪ್ರಕಾರ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ವ್ಯಾಖ್ಯಾನ ಇದೆಯಲ್ಲ, ಇದರಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಂದೇ ಬರುತ್ತದೆ.

ಉಪಾಧ್ಯಕ್ಷರು : ಆ ಸಚಿವರು ಈಗ ಉಪಸ್ಥಿತರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಇಲ್ಲದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ. ಅವರು ಬರಬೇಕಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸ್ವಾಮಿ, ಕನ್ನಡದಲ್ಲಿ ನಗರಾಭಿವೃದ್ಧಿ ಇಲಾಖೆ ಎಂದರೆ ಏನು ಅರ್ಥ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಗೀರ್ ಅಹಮದ್‌ರವರೆ ತಾವು ಹಿಂದೆ ನಗರಾಭಿವೃದ್ಧಿ ಇಲಾಖೆ ಸಚಿವರಾಗಿದ್ದುದರಿಂದ ಈ ವಿಚಾರ ನಿಮಗೆ ತಿಳಿದಿರುತ್ತದೆ. ತಾವು ಹೇಳಿದ್ದುದು ಸರಿ. ಆದರೆ, ಇವೊತ್ತು ಚರ್ಚೆ ಇರುವುದು ನಗರಾಭಿವೃದ್ಧಿ ಮತ್ತು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬಗ್ಗೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಹಾಗಾದರೆ ಇದರಲ್ಲಿ ಎಕ್ಸ್‌ಕ್ಲೂಡಿಂಗ್ ಯಾವುದು?

ಶ್ರೀ ಬಿ.ಎನ್. ಬಚ್ಚೇಗೌಡ : ನಗರಾಭಿವೃದ್ಧಿ ಇಲಾಖೆ ಎಂದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು

ಒಳಚರಂಡಿ ಮಂಡಳಿ, ಪೌರಾಡಳಿತ ನಿರ್ದೇಶನಾಲಯ, ಮಹಾನಗರಪಾಲಿಕೆ, ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ, ಬೆಂಗಳೂರು ಸಮೂಹ ಕ್ಷಿಪ್ರ ಸಾರಿಗೆ ನಿಯಮಿತಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ಕಲಾ ಆಯೋಗ, ನಗರ ಯೋಜನಾ ಇಲಾಖೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರಾಭಿವೃದ್ಧಿ ಮಂಡಳಿ, ನಗರ ಯೋಜನಾ ಪ್ರಾಧಿಕಾರಗಳು, ನಗರ ಭೂಪರಿಮಿತಿ ಈ 14 ಸಂಸ್ಥೆಗಳು ನಗರಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಬರುತ್ತವೆ. ಇವತ್ತು ಶ್ರೀ ಹೆಚ್.ಡಿ. ರೇವಣ್ಣನವರ ವಸತಿ ಇಲಾಖೆ ಮತ್ತು ನನ್ನ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚೆ ಇದೆ. ಆದ್ದರಿಂದ ನನಗೆ ಸೀಮಿತವಾಗಿರುವುದರ ಬಗ್ಗೆ ಮಾತನಾಡಿ ಎಂದು ನಾನು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಅಜೆಂಡಾ ಪ್ರಕಾರ ದಯವಿಟ್ಟು ಓದಿ. ಬೆಂಗಳೂರು ಅಭಿವೃದ್ಧಿ ನಿಮಗೆ ಬರುವುದಿಲ್ಲ, ಅದನ್ನು ಮಾತನಾಡುವುದಿಲ್ಲ ಬಿಟ್ಟುಬಿಡಿ. ಯೋಜನೆಗಳು ನಿಮಗೆ ಬರುವುದಿಲ್ಲ, ಅದನ್ನೂ ಬಿಟ್ಟುಬಿಡಿ. ಮೂಲಭೂತ ಸೌಕರ್ಯ ಅಭಿವೃದ್ಧಿ ಯಾವ ಡಿಪಾರ್ಟ್‌ಮೆಂಟಿಗೆ ಬರುತ್ತದೆ? ಅದಕ್ಕೆ ಡಿಪಾರ್ಟ್‌ಮೆಂಟ್ ಎಲ್ಲಿದೆ?

ಶ್ರೀ ಬಿ.ಎನ್. ಬಚ್ಚೇಗೌಡ : ಅದು ಮೂಲಭೂತ ಸೌಕರ್ಯ ಅಂದರೆ ಇನ್‌ಪ್ರಾಸ್ಟ್ರಕ್ಚರ್‌ಗೆ ಸಂಬಂಧಪಟ್ಟದ್ದು.

Hon'ble Member : Then what about Municipal Administration?

ಉಪಾಧ್ಯಕ್ಷರು : ಮಾನ್ಯ ಸಗೀರ್ ಅಹಮದ್‌ರವರೆ, ಅವರು ಏನು ಹೆಚ್ಚಿಗೆ ಅಭ್ಯಾಸ ಮಾಡಿಕೊಂಡು ಬಂದು ಮಾತನಾಡುತ್ತಾರೆ ಅದನ್ನು ಮಾತ್ರ ನೋಟ್ ಮಾಡಿಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ಅವರು ಮಾತನಾಡಿದರು, ನಾನು ನೋಟ್ ಮಾಡಿಕೊಂಡಿದ್ದೇನೆ. ಮಾನ್ಯ ಸಗೀರ್ ಅಹಮದ್ ಅವರು ಇದರ ಬಗ್ಗೆ ಸಂಪುರ್ಣವಾಗಿ ಏನು ಮಾತನಾಡಿದ್ದಾರೆ ಅದನ್ನೂ ನಾನು ನೋಟ್ ಮಾಡಿಕೊಂಡಿದ್ದೇನೆ.

ಉಪಾಧ್ಯಕ್ಷರು : ನೋಟ್ ಮಾಡಿಕೊಳ್ಳಿ, ಅನಂತರ ಸಂಬಂಧಪಟ್ಟ ಸಚಿವರಿಗೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ 31ನೇ ಬೇಡಿಕೆಯಲ್ಲಿ ಬರುತ್ತದೆಯೇ ಇಲ್ಲವೋ ಎನ್ನುವುದು ನನಗೆ ಕ್ಲಾರಿಫೈ ಆಗಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಇಲ್ಲಿ ಸ್ವಲ್ಪ ಕನ್‌ಫ್ಯೂಜನ್ ಇದೆ.

ಉಪಾಧ್ಯಕ್ಷರು : ತಾವು ಏನು ಮಾತನಾಡುತ್ತೀರಿ ಅದನ್ನು ತಾವು ಮಾತನಾಡಿ. ಅವರು ಅದನ್ನು ನೋಟ್ ಮಾಡಿಕೊಂಡು ತಮಗೆ ಸಂಬಂಧಪಟ್ಟದ್ದನ್ನು ಅವರು ಹೇಳುತ್ತಾರೆ. ಉಳಿದುದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಡಿಮಾಂಡ್ ಲಿಸ್ಟ್ ಅವರಿಗೆಲ್ಲಾ ಕೊಟ್ಟಿದ್ದಾರೆ. 31ನೇ ಬೇಡಿಕೆಯನ್ನು ಬಿಟ್ಟರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬೇರೆ ಬೇಡಿಕೆಯಲ್ಲಿ ಇಲ್ಲ. ಬೇರೆ ಕಡೆ ಆ ಬೇಡಿಕೆ ಇದ್ದರೆ ಒಪ್ಪುತ್ತೇನೆ. ಬೇಡಿಕೆಯೇ ಇಲ್ಲದಿದ್ದರೆ ಯಾವ ಆಧಾರದ ಮೇಲೆ ಚರ್ಚೆ ಮಾಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪ ಅವರು ಹೇಳಿದಂತೆ ಸ್ವಲ್ಪ ಕನ್‌ಫ್ಯೂಜನ್ ಇದೆ. ನಾನು ನನ್ನ ಇಲಾಖೆಗೆ ಸಂಬಂಧಪಟ್ಟಂತೆ ನಗರಾಭಿವೃದ್ಧಿ ಇಲಾಖೆ, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸಂಬಂಧಿಸಿದಂತೆ ಈ ಡಿಮಾಂಡ್‌ನಲ್ಲಿ ಮಾತನಾಡಿ ಎಂದು ತಿಳಿಸಿದೆ.

ಉಪಾಧ್ಯಕ್ಷರು : ಈ ಡಿಮಾಂಡ್‌ನಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮತ್ತೆ ಅದು ಎಲ್ಲಿ ಬರುತ್ತದೆ? ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಯಾವ ಡಿಮಾಂಡ್‌ನಲ್ಲಿ ಬರುತ್ತದೆ? ಸರ್ಕಾರದವರು ಈಗ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದ್ದಾರೆ. ನೀವು ಹೇಳಿದ ಪ್ರಕಾರ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬೇಡಿಕೆ ನಂಬರ್ 31ರಲ್ಲಿ ಬರುವುದಿಲ್ಲ ಎಂದರೆ ಅದು ನಮ್ಮ ಯಾವುದಾದರೂ ಬೇಡಿಕೆಯಲ್ಲಿ ಇರಬೇಕಲ್ಲವೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೆ, ಅದಕ್ಕಿಂತ ಮುಖ್ಯವಾಗಿ ವಿಷಯ ಸಮಿತಿಗಳನ್ನು ಮಾಡಿದ್ದಾರಲ್ಲಾ ಅದರ ಮೇಲೂ ಪುಟದಲ್ಲಿ ಏನು ಬರೆದಿದ್ದಾರೆ ಎಂದರೆ "ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ವಿಷಯ ಸಮಿತಿ" ಎಂದು ಬರೆದಿದ್ದಾರೆ. ಹಾಗಾದರೆ ಇದರಲ್ಲಿ ಮುನಿಸಿಪಾಲಿಟಿ ಇಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವೊತ್ತು ಅದು ಪುರಸಭೆಯಲ್ಲಿ ಬರುವುದಿಲ್ಲ. ಆದರೆ ಶ್ರೀ ಕಾಗೋಡು ತಿಮ್ಮಪ್ಪನವರ ಪ್ರಶ್ನೆ ಏನೆಂದರೆ 8 ವಿಷಯಗಳ ವಿಚಾರದಲ್ಲಿ ನಾವು ಚರ್ಚೆ ಮಾಡಿದರೂ ಸಹ ಎಲ್ಲವನ್ನೂ ಪಾಸ್ ಮಾಡುವಂತಹ ಕಾಲದಲ್ಲಿ ಅದು ಯಾವ ಡಿಮಾಂಡ್‌ನಲ್ಲಿ ಬರುತ್ತದೆ, ಅದು ಎಲ್ಲಿದೆ ತೋರಿಸಿ ಎಂದು ಅವರು ಕೇಳುತ್ತಿದ್ದಾರೆ. ಚರ್ಚೆ ಮಾಡುವುದು ಬಿಡುವುದು ಬೇರೆ ವಿಷಯ. ಆದರೆ ಅದು ಯಾವ ಡಿಮಾಂಡ್‌ನಲ್ಲಿ ಎಲ್ಲಿ ಬರುತ್ತದೆ ಎಂದು ತಿಳಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಅನಂತರ ಅದನ್ನು ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೆ, ಈಗ ಅಜೆಂಡಾದಲ್ಲಿ ಇರುವ ಪ್ರಕಾರ ಎಂಟು ವಿಷಯಗಳ ಬಗ್ಗೆ ಮಾತ್ರ ಚರ್ಚೆ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಆದರೆ, ಕರ್ನಾಟಕ ಅಸೆಂಬ್ಲಿಯಿಂದ Motions for Demands for Grants for expenditure during 1997-98 ಇದರಲ್ಲಿ ಎಲ್ಲಾ ಡಿಮಾಂಡ್‌ಗಳೂ ಸಹ ಇರುತ್ತವೆ. ಈ ಡಿಮಾಂಡ್‌ನಲ್ಲಿ ಇದು ಎಲ್ಲಿ ಅಡಿಗಿದೆ? ಉದಾಹರಣೆಗೆ ಹೇಳುವುದಾದರೆ, Demand No.22- State Excise, Demand No.24 Police Service, Demand No.32 Bangalore Development, Demand No. 37 Governor and Ministers, Demand No. 38 Secretariat, Demand No.40 General

Administration, Demand No.47 power, Demand No. 51 Wakf, Demand No.15 Taxes and Income. Demand No.16 pension, Demand No. 17 Assistance-Government Servants. Demand No.18 Small Savings. Demand No.19 other Miscellaneous. Demand No.41 Planning...

ಉಪಾಧ್ಯಕ್ಷರು : 31ನೇ ಡಿಮಾಂಡ್‌ನಲ್ಲಿ ಬರುತ್ತದೆ ಎಂದು ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿರುವುದು ಸರಿಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಡಿಕೆ ಸಂಖ್ಯೆ 31ರ ಬಗ್ಗೆ ಚರ್ಚೆಯಾಗುವಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಹಾಜರಿರಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಇಲ್ಲಿ ಸ್ವಲ್ಪ ಕನ್‌ಫ್ಯೂಜನ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಕನ್‌ಫ್ಯೂಜನ್ ಆದಮೇಲೆ ಬೇರೆಯವರಿಗೆ ಆಗುವುದಿಲ್ಲವೆ? ನಿಮ್ಮ ಡಿಮಾಂಡ್‌ಗೆ ನೀವು ಹೇಳುವುದು ಸರಿ ಇರಬಹುದು. ಆದರೆ ಈ ವಿವರಣೆಯಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮಾಂಡ್ ನಂಬರ್ 31ರಲ್ಲಿದೆ.

ಉಪಾಧ್ಯಕ್ಷರು : ನೀವು ಹೇಳಿದ್ದು ಸರಿ ಇದೆ. ನೀವು ಮಾತನಾಡಿ, ಬೇಗ ಮುಗಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ : ಬಿಡಬ್ಲ್ಯೂಎಸ್‌ಎಸ್‌ಬಿ, ಬಿಸಿಪಿ ಎಲ್ಲಾ ಸೇರಿ ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿ ಎಂದು ಬರುತ್ತದೆ. ಇವತ್ತು ಬೇಡಿಕೆ 31ರಲ್ಲಿ ನನ್ನ ನಗರಾಭಿವೃದ್ಧಿ ಇಲಾಖೆ ಬರುತ್ತದೆ. ಒಟ್ಟಿನಲ್ಲಿ ಸ್ವಲ್ಪ ಕನ್‌ಫ್ಯೂಜನ್ ಆಗಿದೆ.

11.40 ಎ.ಎಂ

ಮಾನ್ಯ ಉಪಾಧ್ಯಕ್ಷರೆ, ನಾನು ನಗರಸಭೆ ಬಗ್ಗೆ ಎರಡು ಮೂರು ವಿಚಾರ ಮಾತನಾಡಿ ಮುಗಿಸಿಬಿಡುತ್ತೇನೆ. ದಯಮಾಡಿ ಯಾರೂ ಡಿಸ್ಟರ್ಬ್ ಮಾಡದೇ ಇದ್ದರೆ ನನಗೆ ಏನೂ ತೊಂದರೆ ಇಲ್ಲ. ಈಗ ಮುಖ್ಯವಾಗಿ ಈ ಡೈರೆಕ್ಟರೇಟ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂಬ ಒಂದು ಇಲಾಖೆ ಇದೆ. ಇದಕ್ಕೆ ವಾರ್ಷಿಕ ವೆಚ್ಚ 50 ಲಕ್ಷ ರೂಪಾಯಿಗಳಿಂದ 60 ಲಕ್ಷ ರೂಪಾಯಿಗಳು. ಇದೇ ವಿಚಾರದ ಬಗ್ಗೆ ಹಿಂದಿನ ವಿಷಯ ಸಮಿತಿ ವರದಿಯಲ್ಲಿ ಒಂದು ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಇದು ಪೋಸ್ಟ್‌ಮನ್ ಮಾಡುವಂತಹ ಕೆಲಸ. ಅಲ್ಲಿಂದ ಕವರ್ ತಂದು ಕೊಟ್ಟರೆ ಇವರು ಸರ್ಕಾರಕ್ಕೆ ಕೊಡುವಂತಹದು ಅಷ್ಟೇ. ಮಧ್ಯಸ್ಥಿಕೆ ವಹಿಸುವಂತಹದ್ದು. ಮಧ್ಯವರ್ತಿಗಳು ಎಂದು ಹೇಳುತ್ತೇವಲ್ಲ ಅಂತಹ ಒಂದು ಇಲಾಖೆ. ಇದನ್ನು ವೈಂಡಪ್ ಮಾಡಬೇಕು. ಈ ಇಲಾಖೆ ಬೇಡ, ಇದರಿಂದ ನಗರಸಭೆ, ಪುರಸಬೆ ಮತ್ತು ನಿಮ್ಮ ಪಟ್ಟಣ ಪಂಚಾಯತಿಗಳಿಗೆ ಬಹಳ ತೊಂದರೆ ಆಗುತ್ತದೆ. ಡೈರೆಕ್ಟರೇಟ್ ಆಫೀಸ್ ಕ್ಲೋಸ್ ಮಾಡಿ ಎಂಬ ಬೇಡಿಕೆಯನ್ನು ಹಿಂದಿನಿಂದ ಇಟ್ಟುಕೊಂಡು ಬಂದಿದ್ದೇವೆ. ಹೋದ ವರ್ಷದ ವಿಷಯ ಸಮಿತಿ ವರದಿಯಲ್ಲಿ ಸಹ ಈ ವಿಚಾರವನ್ನು ಹೇಳಿದ್ದೇವೆ.

ಈ ವರ್ಷವೂ ಸಹ ವಿಷಯ ಸಮಿತಿ ಸಭೆಯ ಚರ್ಚೆಯಲ್ಲಿ ಈ ವಿಚಾರ ಬಂದಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ತುರ್ತಾಗಿ ಗಮನ ಹರಿಸಬೇಕಾಗುತ್ತದೆ. ಅನಾವಶ್ಯಕವಾಗಿ 50 ಲಕ್ಷ ರೂಪಾಯಿಗಳಿಂದ 60 ಲಕ್ಷ ರೂಪಾಯಿ ಹಣ ಖರ್ಚಾಗುತ್ತಿದೆ. ಈ ಡಿ.ಎಂ.ಎ ನಲ್ಲಿ ಏನು ಕೆಲಸ ಆಗುತ್ತಿದೆ ಎನ್ನುವ ಬಗ್ಗೆ ನಮಗಂತೂ ಅರ್ಥ ಆಗುವುದಿಲ್ಲ. ಒಂದು ಕಡತ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಯಿಂದ ಬಂದಾಗ ಎರಡು ತಿಂಗಳು, ಮೂರು ತಿಂಗಳು ಆ ಕಛೇರಿಯಲ್ಲಿಯೇ ಉಳಿಯುತ್ತದೆ. ಕಾರಣ, ಏನು ಅಂದರೆ ಆ ಕಡತದ ವ್ಯಕ್ತಿ ಯಾರು ಅವರು ಬರುವವರೆಗೆ ಆ ಕಡತ ಅಲ್ಲಾಡುವುದೇ ಇಲ್ಲ. ಅಲ್ಲಿಂದ ಸರ್ಕಾರಕ್ಕೆ ಮುಟ್ಟಿಸುವುದಕ್ಕೆ ಒಬ್ಬ ವ್ಯಕ್ತಿ ಅಲ್ಲಿಹೋಗಿ ಬೆನ್ನು ತಟ್ಟಿದ ನಂತರವೇ ಕಡತ ಸರ್ಕಾರಕ್ಕೆ ಬರುತ್ತದೆ. ಅಲ್ಲಿಯವರೆಗೆ ಬರುವುದಿಲ್ಲ. ನಗರಸಭೆ ಆಗಲಿ ಪುರಸಭೆ ಆಗಲಿ ಪಟ್ಟಣ ಪಂಚಾಯತಿ ಆಗಲಿ ಸರ್ಕಾರಕ್ಕೆ ನೇರವಾಗಿ ಸಂಪರ್ಕ ಇಟ್ಟುಕೊಳ್ಳುವ ಸಲುವಾಗಿ ಈ ನಿಮ್ಮ ನಗರಸಭೆ, ಪುರಸಭೆಯ ನಿರ್ದೇಶನಾಲಯ ಇದೆ. ಇದನ್ನು ಮುಚ್ಚುವಂತಹ ಪ್ರಯತ್ನ ಸರ್ಕಾರ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ. ಕಾರಣ ಏನು ಅಂದರೆ ಇದರಿಂದ ಸಾರ್ವಜನಿಕರಿಗೆ ಏನೂ ಉಪಯೋಗ ಆಗುತ್ತಿಲ್ಲ. ಇದರಿಂದ ಸರ್ಕಾರಕ್ಕೊ ಏನೂ ಲಾಭ ಉಂಟಾಗಿಲ್ಲ. ಆದರೆ ಸರ್ಕಾರಕ್ಕೆ ನಷ್ಟ ಉಂಟಾಗುತ್ತಿರುವುದರಿಂದ ಇದನ್ನು ತುರ್ತಾಗಿ ಕ್ಲೋಸ್ ಮಾಡುವುದರ ಬಗ್ಗೆ ಸರ್ಕಾರ ನಿರ್ಣಯ ಮಾಡಬೇಕು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಕೊನೆಯದಾಗಿ ಈ ನಗರಸಭಾ, ಪುರಸಭಾ ವ್ಯಾಪ್ತಿಯಲ್ಲಿ ಅವರ ವ್ಯಾಪ್ತಿಗೆ ಬರುವಂತಹ ನಿವೇಶನಗಳು. ಇದು ತಮ್ಮ ಗಮನಕ್ಕೂ ಬಂದಿದೆ. ನನ್ನ ಗಮನಕ್ಕೆ ಬಂದಿರುವಂತೆ ಸರ್ಕಾರದಲ್ಲಿ 800 ಕ್ಕಿಂತ ಹೆಚ್ಚು ಕಡತಗಳು ಉಳಿದಿವೆ.

(ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ತಾವು 10.15ಕ್ಕೆ ಪ್ರಾರಂಭ ಮಾಡಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದರ ಮಧ್ಯೆ ಏನೇನೋ ವಿಚಾರಗಳು ಬಂತು ಸಾರ್. ನನ್ನಿಂದ ಆಗಿ ಬರಲಿಲ್ಲ. ಮಾನ್ಯ ಉಪಾಧ್ಯಕ್ಷರು ಕುಳಿತಿರುವಂತಹ ಸಂದರ್ಭದಲ್ಲಿ ಮುನಿಸಿಪಾಲಿಟಿ ವಿಚಾರ ಮಾತನಾಡುವ ಹಾಗೆ ಇಲ್ಲ ಎಂದು ಅರ್ಧ ಗಂಟೆ ಚರ್ಚೆ ನಡೆಯಿತು.

ಅಧ್ಯಕ್ಷರು : ಅದೆಲ್ಲಾ ಒಂದು ಹತ್ತು ನಿಮಿಷ ಆಗಿರಬಹುದು ಈಗ ಟೈಮ್ ಎಷ್ಟು ಆಯಿತು?

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರ ಅನುಮತಿ ಮೇರೆಗೆ ಮಾತನಾಡಬಹುದು ಎಂದು ತೀರ್ಮಾನ ಆಯಿತು.

ಅಧ್ಯಕ್ಷರು : ನಾನು ಅನುಮತಿ ಕೊಡಲೇ ಇಲ್ಲ; ಉಪಾಧ್ಯಕ್ಷರ ಅನುಮತಿ ಮೇರೆಗೆ ಎಂದು you have taken it for granted.

ಶ್ರೀ ಸಿ.ಆರ್. ಸಗೀರ ಅಹಮದ್ : ಇನ್ನು ಹತ್ತು ಹದಿನೈದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ಇನ್ನು ಹತ್ತು ಹದಿನೈದು ನಿಮಿಷ ಬೇಕೇ? ಬೇರೆ ಮೆಂಬರ್ಸ್ ಮಾತನಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದರ ಜೊತೆಗೆ ಇನ್ನು ಕೆಲವು ವಿಚಾರ ಹೇಳಬೇಕಾಗಿದೆ.

ಅಧ್ಯಕ್ಷರು : ನಿಮ್ಮ ಚಿಕ್ಕಮಗಳೂರು ಕಾರ್ಯಕ್ರಮಕ್ಕೆ ಹೋಗಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಇವತ್ತು ನಿರ್ಣಯ ಮಾಡಿದರೆ ನಾನು ಗುರುವಾರ ಸಾಯಂಕಾಲವೇ ಹೋಗುತ್ತೇನೆ. ಈಗ ಸರ್ಕಾರದ ಎದುರು ನಗರಸಭಾ, ಪುರಸಭಾ ಹಾಗೂ ಪಟ್ಟಣ ವ್ಯಾಪ್ತಿಯಲ್ಲಿ ಬರುವಂತಹ ಕೆಲವು ಖಾಲಿ ನಿವೇಶನಗಳನ್ನು ಕೊಡುವ ಬಗ್ಗೆ ಕೆಲವು ಸಂಘ ಸಂಸ್ಥೆಗೆ ಕೊಡುವಂತಹ ಅಧಿಕಾರಿ ಈ ನಗರಸಭೆ, ಪುರಸಭೆ ಮತ್ತು ಪಟ್ಟಣದ ಪಂಚಾಯತಿಗೆ ಇಲ್ಲವಾ ಎನ್ನುವಂತಹ ಪ್ರಶ್ನೆ ಉದ್ಭವ ಆಗುತ್ತದೆ. ಕಾರಣ ಏನು ಎಂದರೆ ಸನ್ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಸಂಬಂಧ ಪಟ್ಟಂತೆ ಎರಡು ವಿಚಾರ ಇದೆ, ತಾವು ದಯಮಾಡಿ ಕೇಳಬೇಕು. ಈ ನಿವೇಶನಗಳನ್ನು ಮಾರಾಟ ಮಾಡಬೇಕಾದರೆ ಸರ್ಕಾರದಿಂದ ಇವತ್ತು ಅನುಮತಿ ಪಡೆಯಬೇಕಾಗಿದೆ. ಈಗ ಲೋಕಲ್ ಸೆಲ್ಫ್ ಗವರ್ನಮೆಂಟ್ ಎನ್ನುವಂತಹ ಪದ ನಾವು ಬಳಸಿದಾಗ ಅವರು ಒಂದು ಸಂಘ ಸಂಸ್ಥೆಗೆ ನಿವೇಶನ ಕೊಡುವಂತಹ ಅಧಿಕಾರ ಇಲ್ಲವೇ ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಬೇಕಾಗುತ್ತದೆ. ಆದ್ದರಿಂದ, ನೇರವಾಗಿ ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯ ಮಾಡಿ ಒಂದು ನಿವೇಶನವನ್ನು ಸಂಘಸಂಸ್ಥೆಗೆ ಕೊಟ್ಟಂಥ ಸಂದರ್ಭದಲ್ಲಿ ಅವರಿಗೆ ಕೊಡುವಂತಹ ಅವಕಾಶ ಮಾಡಿಕೊಡಿ. ವೈಯಕ್ತಿಕವಾಗಿ ಒಬ್ಬ ವ್ಯಕ್ತಿಗೆ ಕೊಡುವ ವಿಚಾರದಲ್ಲಿ ಸರ್ಕಾರಕ್ಕೆ ಬರಲಿ. ಇವತ್ತು ನಾವೇ ಕಾನೂನು ಮಾಡಿದ್ದೇವೆ. ಸಬ್ ರಿಜಿಸ್ಟ್ರಾರ್‌ರವರ ದರದಂತೆ ಯಾವುದೇ ಜಮೀನು ಇದ್ದರೂ ಮಾರಾಟ ಮಾಡಬಹುದು ಎಂದು ಕಾನೂನು ಮಾಡಿದ್ದೇವೆ. ಸಬ್‌ರಿಜಿಸ್ಟ್ರಾರ್‌ರವರ ದರದಂತೆ ಪುರಸಭೆ, ನಗರಸಭೆ ಪಟ್ಟಣದ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವಂತಹ ನಿವೇಶನ ಮಾರಾಟ ಮಾಡಬಹುದೆಂದು ಹೇಳಿ ನಾವು ಇವತ್ತು ಕಾನೂನು ಮಾಡಿದ್ದೇವೆ. ಯಾವುದೇ ಒಂದು ವಿಚಾರಕ್ಕೆ ಕೊಳ್ಳುವುದಾಗಲೀ ತೆಗೆದುಕೊಳ್ಳುವುದಾಗಲೀ ಸಬ್‌ರಿಜಿಸ್ಟ್ರಾರ್ ಅವರ ವ್ಯಾಲ್ಯೂ ಮುಖಾಂತರ ಕೊಳ್ಳಬೇಕು ತೆಗೆದುಕೊಳ್ಳಬೇಕು ಎಂದಿದೆ. ಆ ದೃಷ್ಟಿಯಿಂದ ಸಂಘ ಸಂಸ್ಥೆಗೆ ನೀಡುವಂತಹ ನಿವೇಶನಗಳು. ಈ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್, ಇಂತಹದೇ ಆಗಲಿ, ನಗರಸಭೆ ವ್ಯಾಪ್ತಿಗೇ ಬರಲಿ; ಇವರ ವ್ಯಾಪ್ತಿಗೆ ಬರುವಂತಹದ್ದು ನೀಡುವಂತಹ ಅಧಿಕಾರವನ್ನು ತಾವು ನಗರಸಭೆ, ಪುರಸಭೆಗೆ ಕೊಡಬೇಕು ಎಂದು ಹೇಳಿ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯವನ್ನು ಮಾಡಿತ್ತಿದ್ದೇನೆ. ಇದರ ಜೊತೆಗೆ ಈಗ ಅನೇಕ ಪಟ್ಟಣದ ವ್ಯಾಪ್ತಿಯಲ್ಲಿ ಕೊಳಚೆ ನಿರ್ಮೂಲನಾ ಮಂಡಲಿ ವತಿಯಿಂದ ಇದೇ ಸದನದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನ ಕಾರ್ಯಕ್ರಮಗಳು ಈ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದಿಲ್ಲ. ನಾನು ಇಡೀ ರಾಜ್ಯದ ಸಮಸ್ಯೆಯನ್ನು ಎಲ್ಲಾ ಸಂದರ್ಭದಲ್ಲಿ ಮಾತನಾಡುವಾಗ, ಈ ಕೊಳಚೆ ಪ್ರದೇಶಗಳು ಇವೆ ಎಂದು ಹೇಳಿದ್ದೆ. ಯಾವ ಪ್ರದೇಶದಲ್ಲಿದೆ ಎಂದರೆ ಪ್ರತ್ಯೇಕವಾಗಿ ಬೆಂಗಳೂರು ಪಟ್ಟಣ ಬಿಟ್ಟರೆ ಬೇರೆ ಎಲ್ಲೂ ಇಲ್ಲ ಎನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿತೆಯೋ ಏನೋ ನನಗೆ ಅರ್ಥ ಆಗುವುದಿಲ್ಲ. ಏಕೆಂದರೆ,

ಎಲ್ಲಾ ಪಟ್ಟಣದ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳು ಬಂದಿರುವಂತಹದು ಎಲ್ಲರಿಗೂ ತಿಳಿದಿರುವಂತಹದ್ದು. ಸರ್ಕಾರದ ಸಮೀಕ್ಷೆ ಪ್ರಕಾರ ನನಗೆ ತಿಳಿದಿರುವ ಹಾಗೆ 1300 ಕೊಳಚೆ ಪ್ರದೇಶಗಳು ಈ ರಾಜ್ಯದಲ್ಲಿವೆ ಎನ್ನುವ ಬಗ್ಗೆ ಮಾಹಿತಿ ಕೊಟ್ಟಿದ್ದೆ. ಆದರೆ ಇದರ ಬಗ್ಗೆ ಹತ್ತಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ತಾವು ಹಮ್ಮಿಕ್ಕೊಂಡಿದ್ದೀರಿ. ಅದರಲ್ಲಿ ತಾವು ಏನು ಹೇಳಿದ್ದೀರಿ? ಪ್ರತಿ ಸ್ಲಮ್ ಎಲ್ಲೆಲ್ಲಿ ಉದ್ಭವ ಆಗಿದೆ, ಅಲ್ಲಿ ಸಾರ್ವಜನಿಕ ಸವಲತ್ತುಗಳನ್ನು ಒದಗಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ, ಚರಂಡಿ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ. ಬೀದಿ ದೀಪಗಳನ್ನು ನಾವು ಅಳವಡಿಸಿಕೊಡುತ್ತೇವೆ. ಜೊತೆಗೆ ರಸ್ತೆ ಅಭಿವೃದ್ಧಿ ಮಾಡುವಂತಹ ಕೆಲಸ ಮಾಡುತ್ತೇವೆಂದು ಹೇಳಿದ್ದೀರಿ. ತಾವು ಪದೇ ಪದೇ ಬಜೆಟ್ ಪುಸ್ತಕದಲ್ಲಿ ನೋಡಿ ಹೇಳಿದಿರಿ. ಸಾರ್ವಜನಿಕ ವೇದಿಕೆಯಲ್ಲಿ ಹೇಳಿದಿರಿ. ಬಹಿರಂಗವಾಗಿ ದಿನಪತ್ರಿಕೆಯಲ್ಲಿ ತಮ್ಮ ಹೇಳಿಕೆಯನ್ನು ಮಾಡಿದಿರಿ. ಆದರೆ ಕೊಳಚೆ ನಿರ್ಮೂಲನಾ ಮಂಡಲಿ ಇಲ್ಲಿಯವರೆಗೆ ಯಾವುದೇ ಕೊಳಚೆ ಪ್ರದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡದಿರುವ ವಿಚಾರ ಪ್ರಾಯಶಃ ಎಲ್ಲಾ ಸದಸ್ಯರ ಗಮನಕ್ಕೆ ಬಂದಿರುವಂತಹ ವಿಚಾರ. ಇದು ಕೇವಲ ಟೀಕೆ ಮಾಡುತ್ತಿದ್ದೇವೆಂದಲ್ಲ. ಆದರೆ ತಾವು ಹಮ್ಮಿಕ್ಕೊಂಡಿರುವಂತಹ ಕಾರ್ಯಕ್ರಮ ಏನು? ಯಾವ್ಯಾವ ಕೊಳಚೆ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿದ್ದೀರಿ? ಎಷ್ಟು ಹಣವನ್ನು ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ತಾವು ಖರ್ಚು ಮಾಡಿದ್ದೀರಿ ಎನ್ನುವುದರ ಬಗ್ಗೆ ಇವತ್ತು ತಾವು ಉತ್ತರ ನೀಡುವಂತಹ ಸಂದರ್ಭದಲ್ಲಿ ಖರ್ಚಾಗಿರುವ ಬಗ್ಗೆ ಯಾವ್ಯಾವ ಭಾಗದಲ್ಲಿ ತಾವು ಹಣ ಖರ್ಚು ಮಾಡಿದ್ದೀರಿ? ಯಾವ್ಯಾವ ಭಾಗದಲ್ಲಿ ಈ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೀರಿ? ಎಷ್ಟು ಕಿಲೋ ಮೀಟರ್ ರಸ್ತೆಗಳ ಡಾಂಬರೀಕರಣ ಮಾಡಿದ್ದೀರಿ? ಎಷ್ಟು ಕಡೆ ತಾವು ನೀರಿನ ಸೌಕರ್ಯವನ್ನು ಒದಗಿಸಿಕೊಟ್ಟಿದ್ದೀರಿ? ಇವೆಲ್ಲವುದರ ಬಗ್ಗೆ ತಾವು ಮಾಹಿತಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೊನೆಯದಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ವಿಚಾರ ಇವತ್ತು ಪುರಸಭೆ, ನಗರಸಭೆಗಳಿಗೆ ನೀರನ್ನು ಒದಗಿಸಿಕೊಡುವಂತಹ ಜವಾಬ್ದಾರಿಯನ್ನು ಈ ಇಲಾಖೆಯವರು ಹೊತ್ತುಕೊಂಡಿರುವಂತಹ ಈ ಸಂದರ್ಭದಲ್ಲಿ ಒಂದೆರಡು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇವೆ. ಇವತ್ತು ತಮಗೂ ಗೊತ್ತಿದೆ. ಸರ್ಕಾರ ಅನೇಕ ಕುಡಿಯುವ ನೀರಿನ ಯೋಜನೆಗಳಿಗೆ ಇವತ್ತು ಹುಡ್ಕೋದಿಂದ ಸಾಲ ಪಡೆಯುತ್ತಿದ್ದಾರೆ. ಹಾಗೆ ಹುಡ್ಕೋದಿಂದ ಸಾಲಪಡೆಯುತ್ತಿರುವಂತಹ ಸಂದರ್ಭದಲ್ಲಿ ಒಂದೊಂದು ಪುರಸಭೆಗೆ, 20 ಕೋಟಿ, 25 ಕೋಟಿ 30 ಕೋಟಿ ರೂಪಾಯಿಗಳ ಸಾಲವನ್ನು ಪಡೆಯುವಂತಹ ಯೋಜನೆಗಳನ್ನು ಇವತ್ತು ತಯಾರು ಪಡಿಸಿ ಕಾಮಗಾರಿ ಪ್ರಾರಂಭ ಮಾಡುವ ಹಂತದಲ್ಲಿ ಸರ್ಕಾರ ಆಲೋಚನೆ ಮಾಡುತ್ತಿದೆ. ಆದರೆ ಹುಡ್ಕೋದವರು ಶೇಕಡಾ 18 ರಷ್ಟು ಬಡ್ಡಿ ವಿಧಿಸುತ್ತಿದ್ದಾರೆ ಇದು ಬಹಳ ಮಹತ್ವವಾದಂತಹ ವಿಚಾರ. ಆರ್ಥಿಕವಾಗಿ ಬಹಳ ಹಿಂದುಳಿದಿರುವಂತಹ ನಗರಸಭೆ, ಪುರಸಭೆಗಳಲ್ಲಿ ಇಷ್ಟು ಹೊರೆ ಆದಂತಹ ಸಾಲವನ್ನು ಹೊರಲು ಸಾಧ್ಯ ಇದೆಯಾ ಎನ್ನುವುದರ ಬಗ್ಗೆ ಸರ್ಕಾರ ಇವತ್ತು ಚಿಂತನೆ ಮಾಡಬೇಕಾಗುತ್ತದೆ. ಇವತ್ತು ತಾವು ಸರ್ಕಾರದಲ್ಲಿ ಹಾಕಿರುವಂತಹ ಯೋಜನೆ ಪ್ರಕಾರ ಶೇಕಡಾ 50 ರಷ್ಟು ಸಾಲ ಪಡೆದು ಶೇಕಡಾ 25 ರಷ್ಟು ಸರ್ಕಾರ ಹಾಗೂ 25 ರಷ್ಟು

ಆ ನಗರಸಭೆ ಹಾಗೂ ಪುರಸಭೆಯವರು ಕೊಡಬೇಕು ಎಂಬ ಬಗ್ಗೆ ಈಗಾಗಲೇ ಸರ್ಕಾರಿ ಆದೇಶ ಹೊರಟಿದೆ. ಆದರೆ ಬಡ್ಡಿ ರಿಯಾಯಿತಿ ಮಾಡುವಂತಹ ವಿಚಾರದ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಇಲಾಖೆಯಿಂದ ಕಾಮಗಾರಿ ಮಾಡುವಂತಹ ಸಂದರ್ಭದಲ್ಲಿ ನಿಗದಿ ಪಡಿಸಿರುವಂತಹ ವೇಳಿಯಲ್ಲಿ ಕಾಮಗಾರಿಗಳನ್ನು ಪೂರ್ಣ ಮಾಡುವಂತಹ ಜವಾಬ್ಧಾರಿ ಇಲಾಖೆಯವರು ವಹಿಸಿ ಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಪ್ರಾಯಶಃ ನಗರಸಭೆ, ಪುರಸಭೆಗಳಿಗೆ ಬಹಳಷ್ಟು ಹೊರೆ ಬೀಳುತ್ತದೆ. ಉದಾಹರಣೆಗೆ ಈ ವರ್ಷದಲ್ಲಿ ಪ್ರಾರಂಭ ಆಗಬೇಕಾದಂತಹ ಕೆಲಸದ ಅಂದಾಜು ವೆಚ್ಚ ಹತ್ತು ಲಕ್ಷ ರೂಪಾಯಿಗಳು ಇದ್ದರೆ, ಮೂರು ವರ್ಷಗಳ ನಂತರ ಆ ಕೆಲಸ ಪೂರ್ಣಗೊಳಿಸುತ್ತೇವೆಂದರೆ ಅದರ ಅಂದಾಜು ವೆಚ್ಚ 20 ಲಕ್ಷ ರೂಪಾಯಿಗಳಿಗೆ ಹೋಗಿರುವಂತಹ ಸಾಕಷ್ಟು ನಿದರ್ಶನಗಳು ತಮಗೆ ಮತ್ತು ನಮಗೆ ತಿಳಿದಿರುವಂತಹದ್ದೇ ಆದ್ದರಿಂದ, ನಗರಸಭೆ, ಮತ್ತು ಪುರಸಭೆಗಳ ಮೇಲೆ ಹೊರೆ ಬೀಳದಂತೆ ಈ ಬಡ್ಡಿಯನ್ನು ಸರ್ಕಾರ ಪಾವತಿ ಮಾಡುವಂತಹದ್ದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ನೀರು ಒದಗಿಸಿಕೊಡುವಂತಹ ಜವಾಬ್ದಾರಿ ಇದು ಮೂಲಭೂತವಾಗಿ ಸರ್ಕಾರಗಳ ಜವಾಬ್ದಾರಿ ಆಗಿರುವುದರಿಂದ ಪುರಸಭೆನಗರಸಭೆಗಳ ಮೇಲೆ ಹೊರೆ ಆಗುತ್ತದೆ. ಆದ್ದರಿಂದ, ಈ ರೀತಿ ಪಡೆಯುವಂತಹ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಕಟ್ಟುವುದರ ಬಗ್ಗೆ ಆಲೋಚನೆ ಮಾಡಬೇಕೆಂದು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರುತ್ತಾ, ಸನ್ಮಾನ್ಯ ಅಧ್ಯಾಕ್ಷರೆ, ನನಗೆ ಬಹಳ ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಅಧ್ಯಕ್ಷರೇ, ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ವಸತಿ ಇಲಾಖೆಯ ಮೇಲಿನ ಚರ್ಚೆಯಲ್ಲಿ ನಾನು ಭಾಗವಹಿಸಿ ತಮ್ಮ ಮೂಲಕ ಕೆಲವು ಸಮಸ್ಯೆಗಳ ಬಗ್ಗೆ ಗಮನ ಸಳೆಯುವ ಪ್ರಯತ್ನ ಮಾಡುತ್ತೇನೆ. ತಮಗೂ ಗೊತ್ತಿರುವಂತೆ ವಸತಿ ಸೌಕರ್ಯ ಸಾಮಾನ್ಯ ಜನರಿಗೆ ಮೂಲಭೂತ ಸೌಕರ್ಯಗಳಲ್ಲಿ ಒಂದು. ಅದನ್ನು ಪೂರೈಸಬೇಕಾದದ್ದು ಸರ್ಕಾರದ ಒಂದು ಹೊಣೆ. ಈ ಹೊಣೆ ಪೂರ್ತಿ ಮಾಡಲು ರಾಜ್ಯಸರ್ಕಾರ ಅನೇಕ ಯೋಜನೆಗಳ ಮೂಲಕ ಜನರಿಗೆ ಮುಟ್ಟಿಸುವಂತಹ ಪ್ರಯತ್ನ ಮಾಡಬೇಕಾಗುತ್ತದೆ. ಸುಮಾರು ಎರಡೂವರೆ ವರ್ಷಗಳ ಹಿಂದೆ 10ನೆಯ ವಿಧಾನಸಭೆಯನ್ನು ನಾವು ಪ್ರವೇಶ ಮಾಡಿದಾಗ ಗ್ರಾಮೀಣ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಮಗೊಂದು ಅವಕಾಶ ಸಿಕ್ಕಿದೆ ಅದನ್ನು ನಾವು ಮಾಡುತ್ತೇವೆಂಬ ಆಸೆ ಇತ್ತು. ಆ ಆಸೆಗೆ ಹೂವಿನ ಮಳೆಗರೆಯುವ ಹಾಗೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಚ್.ಡಿ. ದೇವೇಗೌಡರು 2-10-95ರಂದು ದೊಡ್ಡ ಘೋಷಣೆಯನ್ನು ಮಾಡಿದರು. ಅದನ್ನು ಕೇಳಿದ ನಾವು ರಾಜ್ಯದಲ್ಲಿ ಹಿಂದಿನ ಯಾವ ಸರ್ಕಾರವೂ ಯಾವ ಮುಖ್ಯಮಂತ್ರಿಯೂ ಮಾಡದ ಸಾಧನೆಯನ್ನು ಈ ಸರ್ಕಾರ ಮಾಡುತ್ತಿದೆ ಎಂದು ನೋಡುತ್ತಿದ್ದೆವು. 1994-95 ಮತ್ತು 1995-96ರ ಸಾಲಿನಲ್ಲಿ ಸರ್ಕಾರ ಬಡ ಹಾಗೂ ನಿರ್ಗತಿಕರಿಗೆ ನೆರವಾಗುವಲ್ಲಿ ಈ ಯೋಜನೆಯಡಿ ವಿಫಲವಾಗಿದೆ ಎಂಬುದನ್ನು ಸರ್ಕಾರ ಕೊಟ್ಟ ಅಂಕಿಅಂಶಗಳಿಂದ ನಾವು ನೋಡಬಹುದಾಗಿದೆ. 2-10-95 ರಂದು ದೇವೇಗೌಡರು ಹೇಳಿದ ಮುಖ್ಯ

ಹೇಳಿಕೆಯೆಂದರೆ 1995-96ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಮನೆಗೂ ನಿವೇಶನಗಳ ಹಂಚಿಕೆಗಾಗಿ ಗ್ರಾಮೀಣ ಪ್ರದೇಶದಲ್ಲಿ 1.26 ಲಕ್ಷ ಮನೆಗಳ ನಿರ್ಮಾಣದ ಗುರಿ, ಹಾಗೂ ಗ್ರಾಮಾಂತರದಲ್ಲಿ 30 x 40 ಅಳತೆಯ 1.75 ಲಕ್ಷ ನಿವೇಶನಗಳ ಹಾಗೂ ನಗರಪ್ರದೇಶದಲ್ಲಿ 20x30 ಅಳತೆಯ 78,500 ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ಘೋಷಣೆ ಮಾಡಿದ್ದರು. ಆ ಘೋಷಣೆಯ ನಂತರ ಸರ್ಕಾರ ಆ ವರ್ಷ ಸಾಧಿಸಿದ ಪ್ರಗತಿ ಈಗ ನೋಡಿದರೆ 1995-96ರಲ್ಲಿ 2,53,500 ನಿವೇಶನಗಳನ್ನು ಹಂಚಬೇಕಾದ ಕಡೆ ಕೇವಲ 50,824 ನಿವೇಶನಗಳನ್ನು ಅಂದರೆ ಪ್ರತಿಶತ 20 ರಷ್ಟು ಸಾಧನೆ ಮಾಡವಲ್ಲಿ ಮಾತ್ರ ತನ್ನ ಕರ್ತವ್ಯ ಪೂರೈಸಿದೆ. ಹಾಗೂ ಆ ವರ್ಷ ಧಾರವಾಡ ಬಳ್ಳಾರಿ, ಬೆಂಗಳೂರು ಗ್ರಾಮಾಂತರ ನಗರ, ಕೋಲಾರ, ತುಮಕೂರು, ಚಿಕ್ಕಮಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಒಂದೂ ನಿವೇಶನವನ್ನು ಹಂಚಲಿಲ್ಲ. ಧಾರವಾಡ ಜಿಲ್ಲೆಯನ್ನೇ ಇವತ್ತು ತೆಗೆದುಕೊಂಡರೆ 24 ಲಕ್ಷ ರೂಪಾಯಿಗಳನ್ನು ನಿವೇಶನಕ್ಕೆ ಹಾಗೂ 10 ಲಕ್ಷ ರೂಪಾಯಿಗಳನ್ನು ಅದರ ಅಭಿವೃದ್ಧಿಗೆಂದು ಒಟ್ಟು 34.50 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಒಂದು ಪೈಸೆಯನ್ನೂ ಖರ್ಚುಮಾಡುವಂತಹ ಕೆಲಸ ಮಾಡಲಿಲ್ಲ. ಹಾಗೂ ನಿವೇಶನರಹಿತರಿಗೆ ನಿವೇಶನ ಕೊಡಲು ಅನೇಕ ತಾಲ್ಲೂಕುಗಳಲ್ಲಿ ಹಿಂದಿನ ಬಿಡಿಓ ಹೆಸರಿನಲ್ಲಿ ಅನೇಕ ಭೂಮಿಗಳು ಇವತ್ತಿಗೂ ಇವೆ. ಆದರೆ ಆ ಹಕ್ಕಿಗೆ ಬಂದೋಬಸ್ತು ಮಾಡಿ ನಿರ್ಗತಿಕರಿಗೆ ಕೊಡುವ ಪ್ರಯತ್ನ ಸರ್ಕಾರ ಮಾಡಲಿಲ್ಲ. ಅನೇಕರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ತಂದು ವರ್ಷಗಳೇ ಗತಿಸಿದ್ದರೂ ಸಹ ಅದನ್ನು ತೆರವು ಮಾಡಿಸಲು ಸರ್ಕಾರ ಯಾವುದೇ ಪ್ರಗತಿ ಸಾಧಿಸಿಲ್ಲ. ಇನ್ನು ಮನೆ ಕಟ್ಟುವ ಯೋಜನೆಗೆ ಬಂದರೆ, ಸರ್ಕಾರ ವಸತಿಹೀನರಿಗೆ ಆಶ್ರಯ ಯೋಜನೆಯಡಿ ಮನೆ ಕಟ್ಟಿಸಿಕೊಡುವ ಗುರಿ ಹಾಕಿಕೊಂಡಿದೆ. ಗ್ರಾಮಾಂತರದಲ್ಲಿ 1.26 ಲಕ್ಷ ಮನೆಗಳ ಗುರಿಯನ್ನು 1995-96ರಲ್ಲಿ ಹಾಕಿಕೊಂಡಾಗ 60 ಸಾವಿರ ಮನೆಗಳಲ್ಲಿ ಕೇವಲ 13,187 ಮನೆಗಳನ್ನು ಮಾತ್ರ ಕಟ್ಟಿತು. 1995-96ರಲ್ಲಿ ಯೋಜನೆಯಡಿ ಸರ್ಕಾರ ಒಟ್ಟು ಎಲ್ಲ ಯೋಜನೆಗಳಿಂದ 177 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ ಬಿಡುಗಡೆಯಾದದ್ದು ಕೇವಲ 34 ಕೋಟಿ ರೂಪಾಯಿಗಳು. ಸರ್ಕಾರ ತನ್ನಲ್ಲಿ ಹಣ ಇಲ್ಲದಿದ್ದಾಗ ಇಂತಹ ಗುರಿ ಹಾಕಿ ಜನರಿಗೆ ಆಸೆ ತೋರಿಸಿ ಹಣ ಬಿಡುಗಡೆ ಮಾಡದೆ ಫಲಾನುಭವಿಗಳನ್ನು ದಿನನಿತ್ಯ ಕಛೇರಿಗೆ ಅಲೆಯುವಂತೆ ಮಾಡಲು ಹಚ್ಚಿರುವುದನ್ನು ನಾವು ಕಾಣುತ್ತೇವೆ. ತಾಲ್ಲೂಕುಗಳಲ್ಲಿ ಇವತ್ತು ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಅಂದರೆ ಸುಮಾರು ಎರಡೂವರೆ ವರ್ಷಗಳಲ್ಲಿ ಯಾವೊಂದು ಮನೆಯೂ ಮುಗಿಯದೆ ಫಲಾನುಭವಿಗಳು ದಿನನಿತ್ಯ ತಾಲ್ಲೂಕು ಪಂಚಾಯಿತಿ ಮತ್ತು ಶಾಸಕರ ಮನೆಗಳಿಗೆ ಅಡ್ಡಾಡಿ ಹಣ ಬಿಡುಗಡೆ ಮಾಡಲು ಒತ್ತಾಯಪಡಿಸುವಂತಹ ಸಂದರ್ಭವನ್ನು ಕಾಣುತ್ತಿದ್ದೇವೆ. ಇನ್ನು 1996-97ರ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದರೆ ಆ ವರ್ಷದಲ್ಲಿ 40 ಸಾವಿರ ಆಶ್ರಯ ಮನೆಗಳನ್ನು ಕಟ್ಟಿಸುವ ಗುರಿ ಹಾಕಿಕೊಂಡಿತ್ತು. ಅದರಲ್ಲಿ ಮಾರ್ಚ್ ಕೊನೆಗೆ ಪ್ರಗತಿ ಸಾಧಿಸಿದ್ದು ಕೇವಲ 5,750 ಮನೆಗಳು ಮಾತ್ರ.40 ಸಾವಿರ ಮನೆಗಳಿಗೆ ಸರ್ಕಾರ ಆ ವರ್ಷ 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ, ಬಿಡುಗಡೆ ಮಾಡಿದ್ದು ಕೇವಲ 4 ಕೋಟಿ ರೂಪಾಯಿಗಳು ಅಧ್ಯಕ್ಷರೇ, ತನ್ನಲ್ಲಿ ಹಣವಿಲ್ಲದಿದ್ದರೆ ಸರ್ಕಾರ ಹೆಚ್ಚಿನ ಗುರಿ ಹಾಕಿಕೊಂಡು ಜನತೆಗೆ ತೊಂದರೆ ಕೊಡುವ

ಕಾರ್ಯಕ್ರಮ ಏಕೆ ಹಾಕಿಕೊಂಡಿತು ಎಂದು ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ತಮಗೇ ಗೊತ್ತಿರುವಂತೆ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ವಸತಿ ಇಲಾಖೆಯಿಂದ ಆಶ್ರಯ ಯೋಜನೆಯಡಿ ಎರಡನೇ ಹಂತದ ಮನೆಗಳನ್ನು ತಾಲ್ಲೂಕುವಾರು ಹಂಚುವಾಗ ತಾರತಮ್ಯ ಮಾಡಲಾಗಿದೆ ಎಂಬ ಅಪವಾದ ಬಂತು. ಆ ವೇಳೆಯಲ್ಲಿ ಮಾನ್ಯ ವಸತಿ ಸಚಿವರು ಯಾವ ತಾಲ್ಲೂಕುಗಳು ಬಿಟ್ಟುಹೋಗಿವೆಯೋ ಅಂತಹ ತಾಲ್ಲೂಕುಗಳಿಗೆ 100 ಮನೆಗಳನ್ನು ಕೊಡುವುದಾಗಿ ಭರವಸೆ ಕೊಟ್ಟರು. ಆ ಪ್ರಕಾರ 100 ಮನೆಗಳನ್ನು ಕೊಟ್ಟರು. ಈಗಾಗಲೇ ಕೊಟ್ಟಿರುವಂತಹ ಮನೆಗಳಿಗೆ ಹಣವನ್ನು ಪೂರೈಸುವಂತಹ ಕೆಲಸವೇ ಈ ಸರ್ಕಾರಕ್ಕೆ ಆಗಿಲ್ಲ. ಮತ್ತೆ ಈಗ 100 ಮನೆಗಳನ್ನು ಕೊಡುತ್ತಿದ್ದಾರೆ ಅಂದರೆ ಹಣ ಕೊಡಲು ಸಾಧ್ಯವೇ ಇಲ್ಲ ಎಂಬ ನಮ್ಮ ಮಾತು ಇಂದು ರುಜುವಾತಾಗಿದೆ. ಆ ಮನೆಗಳಿಗೆ ಒಂದು ಪೈಸೆ ಕೊಡಲಿಲ್ಲ. ಪುನಃ ಈ ವರ್ಷ ತಾಲ್ಲೂಕುವಾರು 175 ಮನೆಗಳನ್ನು ಕೊಟ್ಟಿದ್ದಾರೆ ಅವುಗಳಿಗೆ ಈ 100 ಮನೆಗಳನ್ನು ಸೇರಿಸಿ ಒಟ್ಟು 275ರ ಗುರಿ ಕೊಟ್ಟಿದೆ. ಆದರೆ, ಹಣ ಬಿಡುಗಡೆ ಮಾಡುವ ಪ್ರಯತ್ನವಂತೂ ಇನ್ನೂವರೆಗೂ ಆಗಿಲ್ಲ. ಹಾಗೂ 1996-97ರ ಸಾಲಿನಲ್ಲಿ ನಿವೇಶನಕ್ಕೆ ಬಂದರೆ 2,07,326 ನಿವೇಶನಗಳನ್ನು ಹಂಚಬೇಕಾಗಿತ್ತು. ಆದರೆ, ಕೇವಲ 1,15,627 ನಿವೇಶನಗಳನ್ನು ಹಂಚಿ ಕೇವಲ 50 ರಷ್ಟು ಸಾಧನೆ ಮಾಡಿದೆ. ಈ ಸರ್ಕಾರ ಬಂದ ಮೇಲೆ ಆಶ್ರಯ ಸಮಿತಿ ರಚನೆಗಾಗಿ ಅನೇಕ ಸದಸ್ಯರು ಸದನದಲ್ಲಿ ಒತ್ತಾಯ ಮಾಡಿದರು. ಶಾಸಕರ ಸಮಿತಿಯನ್ನೇನೋ ಮಾಡಿದರು. ಆ ಸಮಿತಿಗೆ ಸರ್ಕಾರ ಮೂರು ಜನರನ್ನು ನಾಮಕರಣ ಮಾಡಬೇಕಾಗಿದೆ. ನಾವು ನಾಮಕರಣ ಮಾಡುವವರೆಗೆ ನೀವು ಸಭೆಗಳನ್ನು ನಡೆಸಬೇಡಿ ಎಂದು ಇವರು ಅಧಿಕಾರಿಗಳಿಗೆ ಸೂಚನೆ ಕೊಟ್ಟರು. ಶಾಸಕರು ಸಭೆ ನಡೆಸವುದು ಈ ಯೋಜನೆಗಳ ಪ್ರಗತಿ ಪರಿಶೀಲನೆ ಮಾಡಲಿಕ್ಕೆ ಹೊರತು ಬೇರೆ ಯಾವುದಕ್ಕೂ ಅಲ್ಲ ಎಂಬುದನ್ನು ಸರ್ಕಾರ ತಿಳಿಯದೆ ಈ ರೀತಿ ನಿರ್ದೇಶನ ಕೊಟ್ಟಿದೆ. ಹಾಗೂ ಈಗಾಗಲೇ ನಗರಪ್ರದೇಶಗಳಲ್ಲಿ ರಚಿಸಿರುವ ಪಟ್ಟಣ ವಸತಿ ಸಮಿತಿಗಳಿಗೆ ಸದಸ್ಯರ ನಾಮಕರಣ ಮಾಡಿಲ್ಲ. ಆದರೆ ನಾಮಕರಣ ಸದಸ್ಯರು ಬರುವವರೆಗೆ ಸಮಿತಿ ಸಭೆ ಮಾಡಬಾರದೆಂದು ಸೂಚನೆ ಕೊಟ್ಟಿದೆ. ಕೂಡಲೆ ಆ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡು ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಗಳು ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಗ್ರಾಮಾಂತರದಲ್ಲಿ ನಿವೇಶನರಹಿತರಿಗೆ ನಿವೇಶನ ಹಂಚಲು ಜಮೀನು ಪಡೆಯುವಲ್ಲಿ ಅನೇಕ ತೊಂದರೆಗಳನ್ನು ಕಾಣುತ್ತಿದ್ದೇವೆ. ಸರ್ಕಾರ ಕೆಲವೊಂದು ಮಿತಿಗಳನ್ನು ಹೇರಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಏನಾಗುತ್ತಿದೆ ಎಂದರೆ ಖರೀದಿಗೆ ಕೊಡುವವರು, ಕೊಂಡುಕೊಳ್ಳುವವರು ತಮ್ಮ ಸ್ಟಾಂಪ್‌ಡ್ಯೂಟಿ ಉಳಿಸುವುದಕ್ಕೋಸ್ಕರ ತಮ್ಮ ಒಪ್ಪಂದಕ್ಕಿಂತ ಕಡಿಮೆ ದರದಲ್ಲಿ ರಿಜಿಸ್ಟರ್ ಮಾಡಿಸುವುದನ್ನು ನೋಡಿದ್ದೇವೆ. ಆಶ್ರಯ ಸಮಿತಿಗಾಗಿ ಇವತ್ತು ಜಮೀನು ಖರೀದಿ ಮಾಡಬೇಕಾದರೆ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಆದ ನೊಂದಣಿಯ ಬೆಲೆಯನ್ನು ಗಮನಕ್ಕೆ ತೆಗೆದುಕೊಂಡರೆ ಇವತ್ತಿನ ದಿನಗಳಲ್ಲಿ ಅದು ಯಾವ ಉಪಯೋಗಕ್ಕೂ ಬಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಮನಗಂಡು ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಜಮೀನುಗಳು ಏನು ಬೆಲೆ ಬಾಳುತ್ತವೆ ಆ ಬೆಲೆಗಳಿಗೆ ಅನುಗುಣವಾಗಿ ಜಮೀನು ಖರೀದಿ ಮಾಡುವ ಹೊಸ ಅಧಿಕಾರ ಕೊಟ್ಟಾಗ ಆದಷ್ಟು ಬೇಗ ಜಮೀನುಗಳನ್ನು ಕೊಂಡು

ನಿವೇಶನರಹಿತರಿಗೆ ನಿವೇಶನ ಹಂಚಲು ಸಾಧ್ಯವಿದೆ ಎಂದು ಹೇಳಬಯಸುತ್ತೇನೆ. ಇವತ್ತು ಸರ್ಕಾರಿ ಜಮೀನು ಅಥವಾ ಹುಲ್ಲುಗಾವಲು ಇದ್ದರೆ ಅವುಗಳನನ್ನು ಪಡೆದುಕೊಳ್ಳಬಹುದು ಎಂಬ ಸುತ್ತೋಲೆ ಇದೆ. ಇವತ್ತು ಯಾವ ಗ್ರಾಮದಲ್ಲೂ ಸರ್ಕಾರಿ ಜಮೀನು ಉಳಿದಿಲ್ಲ, ಹುಲ್ಲುಗಾವಲು ಕ್ಷೇತ್ರ ಸಹ ಕಡಿಮೆಯಾಗಿರುವುದನ್ನು ನಾವು ಕಾಣುತ್ತಾ ಇದ್ದೇವೆ. ಇವತ್ತು ಅನೇಕ ಕಡೆಗಳಲ್ಲಿ ಹುಲ್ಲುಗಾವಲು ಕ್ಷೇತ್ರ ಅಕ್ರಮ ಸಾಗುವಳಿಯಿಂದ ಕಡಿಮೆ ಆಗಿರುವಾಗ ನಿವೇಶನ ರಹಿತರಿಗೆ ಲಭ್ಯ ಇರುವ ಜಮೀನನ್ನು ಖರೀದಿ ಮಾಡಿಸಲು ಹೆಚ್ಚಿನ ಆದ್ಯತೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇನ್ನು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಸಂಬಂಧಪಟ್ಟಂತೆ ಸುಮಾರು 45 ದಿವಸಗಳಿಂದ ನಮ್ಮ ನಾಯಕರಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರು ನ್ಯಾಯ ಪಥದಲ್ಲಿ ರಾಜ್ಯದ ಎಲ್ಲಾ ಪಟ್ಟಣಗಳಿಗೂ ನಮ್ಮ ಭಾರತೀಯ ಜನತಾ ಪಕ್ಷದ ವತಿಯಿಂದ ನಾವು ಜನರನ್ನು ಭೇಟಿಯಾಗುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು, ಆ ಸಂದರ್ಭದಲ್ಲಿ ಎಲ್ಲರೂ ಪ್ರತಿ ದಿವಸ ಒಂದು ಕೊಳಗೇರಿಗೆ ಭೇಟಿ ಕೊಡುವಂತಹ ಕಾರ್ಯಕ್ರಮವನ್ನು ಸಹ ನಾವು ಹಾಕಿಕೊಂಡಿದ್ದೆವು. ಬಹುಶಃ ಈ ರಾಜ್ಯದಲ್ಲಿರುವ ಎಲ್ಲಾ ಪಟ್ಟಣಗಳಲ್ಲಿ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಕೊಳಗೇರಿಗಳ ಪರಿಸ್ಥಿತಿಯನ್ನು ನೋಡಿದರೆ ನಿಜಕ್ಕೂ ನಾವು ಇಂದು ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಅನುಭವಿಸುವ ಸಂದರ್ಭದಲ್ಲಿ ನಾಚಿಕೆಯಿಂದ ತಲೆ ತಗ್ಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಭಾಧ್ಯಕ್ಷರೆ, ಯಾವುದೇ ಒಂದು ಕೊಳಗೇರಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ದಾರಿ ಇಲ್ಲ, ದೀಪ ಇಲ್ಲ ಹಾಸನದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯವರು ಮನೆಗಳನ್ನು ಕಟ್ಟಿದ್ದಾರೆ. ಅದರ ಒಳಗೆ ಹೋದವರು ಯಾರೂ ಹೊರಗೆ ಬಾರದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಇವತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಂಡಳಿಯಿಂದ, ರಾಜ್ಯದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕಾಗಿದೆ. ಸುಮಾರು 8 ತಿಂಗಳ ಹಿಂದೆ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಂಡಳಿಯಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 4-5 ಲಕ್ಷ ರೂಪಾಯಿಗಳನ್ನು ಅನುದಾನ ಕೊಡುತ್ತೇವೆ, ಅವುಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂಬ ಮಾತನ್ನು ಹೇಳಿದರು. ಆದರೆ 8 ತಿಂಗಳು ಗತಿಸಿದರೂ ಸಹ ಇವತ್ತಿನವರೆಗೂ ಈ 5 ಲಕ್ಷ ರೂಪಾಯಿಗಳ ಯೋಜನೆ ಏನಾಗಿದೆ ಎಂಬುದನ್ನು ಯಾವುದೇ ಅಧಿಕಾರಿಗಳು ತಿಳಿಸುವ ಒಂದು ಪ್ರಯತ್ನ ಕೂಡ ಮಾಡಿಲ್ಲ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂತಹ ಕ್ರಮವನ್ನು ಸರ್ಕಾರ ಇವತ್ತಿನವರೆಗೂ ತೆಗೆದುಕೊಂಡಿಲ್ಲ. ಇನ್ನು ಕರ್ನಾಟಕ ಗೃಹ ಮಂಡಳಿಯ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಕಾರ್ನಾಟಕ ಗೃಹ ಮಂಡಳಿಯವರು ಸುಮಾರು ನೂರು ಮನೆಗಳನ್ನು ಕಟ್ಟಿಸಿದ್ದಾರೆ. ಈ ಮನೆಗಳನ್ನು ಕಟ್ಟಿ 4-5 ವರ್ಷಗಳಾದರೂ ಸಹ ಜನರು ಇವತ್ತು ಅಲ್ಲಿಗೆ ಹೋಗಿ ವಾಸಿಸುವ ಪರಿಸ್ಥಿತಿ ನಿರ್ಮಾಣ ಆಗಿಲ್ಲ. ಈ ವಿಚಾರದ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಸರ್ಕಾರದ ಗಮನ ಸೆಳೆದರೂ ಸಹ ಮನೆಗಳನ್ನು ಹಂಚುವ ಬಗ್ಗೆಯಾಗಲಿ, ಅಥವಾ ಕಳಪೆ ರೀತಿಯಲ್ಲಿ ಕಟ್ಟಿರುವಂತಹ ಮನೆಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಗೃಹ ಮಂಡಳಿ ತನ್ನ

ವಸತಿ ಯೋಜನೆಗೆ ಬೇಕಾದಂತಹ ಜಮೀನು ತೆಗೆದುಕೊಳ್ಳುವುದನ್ನು ನಾವು ಕಂಡಿದ್ದೇವೆ. ಅದೇ ರೀತಿ ಇವತ್ತು ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಉತ್ತರ ತಾಲ್ಲೂಕಿನ ಕಸಬ ಹೋಬಳಿಯ ಗ್ರಾಮದ ಸರ್ವೆನಲ್ಲಿ ಒಟ್ಟು 156 ಎಕರೆಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಭೂ ಸ್ವಾಧೀನ ನಡವಳಿಕೆಯನ್ನು ಪ್ರಾರಂಭ ಮಾಡಿದೆ. ಆ ರೀತಿ ಪ್ರಾರಂಭ ಮಾಡಿದ 6(1) ನೋಟಿಫಿಕೇಷನ್ ಸಹ ಸರ್ಕಾರ ಇಷ್ಯೂ ಮಾಡಿದೆ. ಆದರೆ ಮಾನ್ಯ ಕಂದಾಯ ಮಂತ್ರಿಗಳಿಗೆ ಶ್ರೀ ಹೆಚ್.ವಿ. ರಾಜು ರವರು ಮನವಿ ಪತ್ರವನ್ನು ಸಲ್ಲಿಸಿ ಭೂ ಸ್ವಾಧೀನ ಪ್ರಕರಣ ಪ್ರಾರಂಭ ಮಾಡಿರುವುದನ್ನು ಕೈ ಬಿಡಬೇಕೆಂದು ವಿನಂತಿ ಮಾಡಿಕೊಂಡರು. ಅದರ ಪ್ರಕಾರ ಸರ್ಕಾರದ ಅಧೀನ ಕಾರ್ಯದರ್ಶಿ ಕಂದಾಯ ಇಲಾಖೆಯವರು, ಗೃಹ ಮಂಡಳಿ ಆಯುಕ್ತರಿಗೆ ಪತ್ರ ಬರೆದು, ನಾವು ಈ ಒಂದು ಅಕ್ವಿಸಿಷನ್ ಪ್ರಕರಣ ಕೈ ಬಿಡಬೇಕೆಂದು ತೀರ್ಮಾನ ಮಾಡಿದ್ದೇವೆ, ಆ ಪ್ರಕಾರ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಅವರೂ ಸಹ ಒಂದು ಪತ್ರವನ್ನು ಬರೆದರು. ವಸತಿ ಯೋಜನೆಗೆ ಇದು ಅವಶ್ಯಕವಾಗಿ ಬೇಕಾಗಿರುವುದರಿಂದ ಈ ರೀತಿ ಕೈ ಬಿಡುವುದು ಉಚಿತವಲ್ಲ ಎನ್ನುವ ಸಲಹೆ ಕೊಟ್ಟರು. ಕರ್ನಾಟಕ ಶ್ರೇಷ್ಠ ನ್ಯಾಯಾಲಯದಲ್ಲಿ ಈ ಒಂದು ಜಮೀನಿಗೆ ಸಂಬಂಧಪಟ್ಟಂತೆ 7 ರಿಟ್ ಪಿಟೀಷನ್‌ಗಳು ಇದ್ದವು. ಆ 7 ರಿಟ್ ಪಿಟೀಷನ್‌ನಲ್ಲಿ 3 ರಿಟ್ ಪಿಟೀಷನ್ ಮಂಡ್ಯ ಪರ ಇತ್ಯರ್ಥವಾಗಿದ್ದರೂ ಸಹ ಸರ್ಕಾರ ಇದರಲ್ಲಿ ಕೈ ಹಾಕಿ ಮನೆಗಳನ್ನು ಪಡೆಯುವಲ್ಲಿ ಗೃಹ ಮಂಡಳಿ ಜಮೀನನ್ನು ಭೂ ಸ್ವಾಧೀನ ಮಾಡಿಸಿಕೊಳ್ಳಲು ಹೊರಟಿದ್ದರಿಂದ ರಾಜ್ಯ ಸರ್ಕಾರದ ಹಸ್ತಕ್ಷೇಪದಿಂದ ಪುನಃ ಅದನ್ನು ಕೈ ಬಿಡುವಂತೆ ಮಾಡಿದೆ. ಆದುದರಿಂದ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ತಾವು ಈ ಕೂಡಲೇ ಏನು ಈ ರೀತಿ ಅಧಿಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆದೇಶ ಮಾಡಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಂಡು ಈ ಒಂದು ನೋಟಿಫಿಕೇಷನ್ನನ ಪ್ರಕಾರ ಪುನಃ ಅಕ್ವಿಸಿಷನ್ ಪ್ರಕರಣ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೃಹ ಮಂಡಳಿಯವರು ಬೆಂಗಳೂರಿನ ಸುತ್ತಾ-ಮುತ್ತಾ ಸೈಟ್ ಕೊಡುವುದಕ್ಕೆ ಜಮೀನು ಅಕ್ವಯರ್ ಮಾಡಿಕೊಂಡಿದ್ದರು. ಯಾರೋ ಪ್ರಭಾವಿ ವ್ಯಕ್ತಿ 13 ಚಿಲ್ಲರೆ ಎಕರೆಯನ್ನು ಅದರಲ್ಲಿ ಡೀ ನೋಟೀಫೈ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಈ 13 ಚಿಲ್ಲರೆ ಎಕರೆ ಬಿಡುವುದರಿಂದ ಉಳಿದವರು ಅದೇ ರೀತಿ ಕ್ಲೈಂ ಮಾಡುತ್ತಾರೆ. ಬೇರೆ ಪ್ರಭಾವಿ ವ್ಯಕ್ತಿಗಳು ಕೋರ್ಟಿನಲ್ಲಿ ನಿಮ್ಮಂತೆ ಅವರೂ ಕೇಳುತ್ತಾರೆ.

ಶ್ರೀ ಯು.ಬಿ. ಬಣಕಾರ್ : ಕರ್ನಾಟಕ ಗೃಹಮಂಡಳಿ ಇರಲಿ ಅಥವಾ ಯಾವುದೇ ಒಂದು ಭೂ ಸ್ವಾಧೀನ ಪ್ರಕರಣಗಳಲ್ಲಿ ಸರ್ಕಾರ ಈ ರೀತಿಯಾಗಿ ಅನುಚಿತವಾಗಿ ಕೈ ಹಾಕದಂತೆ ಆದಷ್ಟು ಭೂ ಸುಧಾರಣಾ ಪ್ರಕರಣಗಳನ್ನು ಕೂಡಲೇ ಇತ್ಯರ್ಥಗೊಳಿಸಿ ನಿವೇಶನ ರಹಿತರಿಗೆ ಆಶ್ರಯ ಯೋಜನೆಯಲ್ಲಿ ಆಗಲಿ, ಅಥವಾ ಕರ್ನಾಟಕ ಗೃಹ ಮಂಡಳಿಗೆ ತನ್ನ ಗೃಹ ವಸತಿ ಯೋಜನೆ ಮಾಡಲು ಅದನ್ನು ಉಪಯೋಗ ಮಾಡಿ ಕೊಡಲು ಸರ್ಕಾರ ಇನ್ನು ಮುಂದೆ ಕೆಲಸ ನಿರ್ವಹಿಸಬೇಕೆಂಬ ಮಾತನ್ನು ಹೇಳುತ್ತೇನೆ. ಕೊನೆಯದಾಗಿ, ಇವತ್ತಿನ ದಿವಸ ಅಂಬೇಡ್ಕರ್ ಮತ್ತು ಆಶ್ರಯ ಮನೆಗಳನ್ನು ಕಟ್ಟಲು

ಸರ್ಕಾರ ಗುರಿ ಹಾಕಿಕೊಂಡಿದೆ. ಆ ಮನೆಗಳನ್ನು ಕಟ್ಟಲು ಸುಮಾರು 20 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದೆ. ಪ್ರತೀ ವರ್ಷ ಎಲ್ಲಾ ವಸ್ತುಗಳ ಬೆಲೆ ಏರುತ್ತಿರುವುದರಿಂದ ಈ ಒಂದು 20 ಸಾವಿರ ರೂಪಾಯಿಗಳು ಇರುವಂತಹ ಅಂದಾಜು ವೆಚ್ಚವನ್ನು 25 ಸಾವಿರ ರೂಪಾಯಿಗೆ ಏರಿಸಬೇಕು. ಹಾಗೂ ಸರ್ಕಾರ ಯಾವ ಒಂದು ಗುರಿಯನ್ನು ಹಾಕಿಕೊಳ್ಳುತ್ತಾ ಇದೆ, ಆ ಗುರಿಗೆ ತಕ್ಕಂತೆ ಹಣವನ್ನು ಸರಿಯಾದ ವೇಳೆಗೆ ಬಿಡುಗಡೆ ಮಾಡಿ ಆ ಗುರಿಯನ್ನು ತಲುಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಈ ಇಲಾಖೆ ಮೇಲೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಒಂದೆರೆಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಶ್ರಯ ಕಮಿಟಿ ನಾಮಿನೇಷನ್ ಆಗದೆ ಇರುವ ಕಡೆ ಕೆಲಸ ಮಾಡಬಾರದು ಎಂದು ಸೂಚನೆ ಕೊಟ್ಟಿದ್ದಾರೆಂದು ಅವರು ಹೇಳಿದರು. ಅದು ನಿಜವೇ?

ಶ್ರೀ ಹೆಚ್.ಡಿ. ರೇವಣ್ಣ : ಇವತ್ತಿನವರೆವಿಗೂ ನಾವು ಯಾವುದೇ ರೀತಿಯ ಆದೇಶ ಕೊಟ್ಟಿಲ್ಲ.

ಅಧ್ಯಕ್ಷರು : ಅವರು ಯಾವುದೇ ಆದೇಶವನ್ನು ಇದುವರೆವಿಗೂ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಕಸ್ಮಾತ್ ಆ ರೀತಿ ಏನಾದರೂ ನಾಮಕರಣ ಆದ ನಂತರವೇ ಕೆಲಸ ಮಾಡಬೇಕು ಎಂಬ ಆದೇಶ ಇದ್ದರೆ ರದ್ದು ಮಾಡುತ್ತೀರೋ?

ಶ್ರೀ ಹೆಚ್.ಡಿ. ರೇವಣ್ಣ : ಆ ರೀತಿ ಆದೇಶ ಇದ್ದರೆ ರದ್ದು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಅರ್ಥ ಆಗಲಿಲ್ಲ. ದಿನಾಂಕ 1.4.1997 ರಿಂದ ಕಮಿಟಿ ಅಸ್ತಿತ್ವಕ್ಕೆ ಬಂದಿದೆ. ನಾಮಕರಣ ನಿಧಾನವಾಗುತ್ತದೆಂದು ನಾವು ಕೆಲಸ ಶುರು ಮಾಡಿದ್ದೇವೆ. ಆದುದರಿಂದ ನಾವು ಕೆಲಸ ಮಾಡಬೇಕೋ ಅಥವಾ ಬೇಡವೋ ತಾವೇ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಈಗ ಆ ಸಮಿತಿ ಪ್ರಕಾರ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಏನು ಇದ್ದಾರೆ ಅದರದು ಏನು ಚಾಲನೆ ಇಲ್ಲ, ಮತ್ತು ಫಲಾನುಭವಿಗಳಿಗೆ ಹಂಚತಕ್ಕ ವ್ಯವಸ್ಥೆ ಅವರಿಗೆ ಇಲ್ಲವೇ ಇಲ್ಲ. ನೇರವಾಗಿ ಗ್ರಾಮಸಭೆಯಲ್ಲಿ ಹಂಚಬೇಕು. ಗ್ರಾಮ ಸಭೆಯಲ್ಲಿ ಏನಾದರೂ ವ್ಯತ್ಯಾಸ ಆದರೆ ಕಾರ್ಯ ನಿರ್ವಾಹಕ ಅಧಿಕಾರಿ ಮಾಡತಕ್ಕಂತದ್ದು. ಅಂದರೆ ಆಶ್ರಯ ಯೋಜನೆಅಡಿಯಲ್ಲಿ ಯಾವುದೇ ಒಂದು ಸಣ್ಣ ನಿವೇಶನವನ್ನು ಹಂಚತಕ್ಕಂತಹ ವ್ಯವಸ್ಥೆ ಅಧ್ಯಕ್ಷರಿಗೆ ಇಲ್ಲ. ಅಂದರೆ ಈ ಸಮಿತಿಯನ್ನು ಸುಮ್ಮನೆ ಒಂದು ನೋಟಕ್ಕೆ ಮಾಡಿದ್ದೀರಿ. ನೋಟಕ್ಕೆ ಮಾಡತಕ್ಕಂತಹ ಸಮಿತಿಯಲ್ಲಿ ಇದರಿಂದ ಯಾವುದೇ ಪ್ರಯೋಜನವಿಲ್ಲ ಸಮಿತಿಗೆ ನೀವು ಕೊಡಬೇಕು. ಆದರೆ ಇದೂವರೆವಿಗೂ ಸಮಿತಿಗೆ ಅಂತಹ ಅಧಿಕಾರವನ್ನು ಕೊಟ್ಟಿಲ್ಲ. ಕೊಡದೇ ಹೋದರೆ ಈ ಸಮಿತಿ ಕಟ್ಟಿಕೊಂಡು ನಾವು ಏನು ಮಾಡಬೇಕು? ಆ ಸಮಿತಿಯಲ್ಲಿ ಯಾವ ಪ್ರಯೋಜನೆ ಇಲ್ಲ, ಅದನ್ನು ನೀವು ಸ್ಪಷ್ಟಪಡಿಸಿ. ಈ ವಿಷಯದಲ್ಲಿ 100 ಬಾರಿ ಚಳುವಳಿ ಮಾಡಿದ್ದು ಆಯಿತು, ಹೋರಾಟ ಮಾಡಿದ್ದು ಆಯಿತು, ಧರಣಿ ಮಾಡಿದ್ದು ಆಯಿತು. ಅದು ಎಲ್ಲೋ ಒಂದು ಕಡೆ ನಿಲ್ಲುತ್ತಿದೆ, ಎಲ್ಲೋ ಒಂದು ಕಡೆ ಅದನ್ನು ತಡೆ

ಹಿಡಿಯುತ್ತಾ ಇದ್ದಾರೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ತಮ್ಮ ಮೂಲಕ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಆ ಒಂದು ಸಮಿತಿಗೆ ಕವಡೆ ಅಷ್ಟು ಬೆಲೆ ಇಲ್ಲ. ಆದುದರಿಂದ, ಅದರ ಬಗ್ಗೆ ತಾವು ತಿದ್ದುಪಡಿ ಮಾಡುತ್ತೀರಾ? ಅಥವಾ ತಿದ್ದುಪಡಿ ಮಾಡಿದ್ದೀರಾ? ಫಲಾನುಭವಿಗಳಿಗೆ ಹಂಚಿಕೆ ಮಾಡತಕ್ಕ ವ್ಯವಸ್ಥೆಯನ್ನು ತಾವು ಮಾಡಿದ್ದೀರಾ? ಈಗ ನಾವು ದಯಮಾಡಿ ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ : ಕ್ಯಾಬಿನೆಟ್ ಒಂದು ಡಿಸಿಷನ್ ತೆಗೆದುಕೊಂಡಿದೆ. ಅದರ ನಕಲು ಬಂದಿದೆ. ಆದರೆ ಇದು ಎಲ್ಲಾ ಸದಸ್ಯರಿಗೂ ಸರ್‌ಕ್ಯೂಲೇಷನ್ ಆಗಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತಹ ಪಾಯಿಂಟ್ ಮೇಲೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಅದರ ಕಾಪಿಯನ್ನು ಎಲ್ಲರಿಗೂ ಕೊಟ್ಟಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್ ಪ್ರಶ್ನೆ ಅದಲ್ಲ. ಈಗ 1.4.1997 ರಿಂದ ಆಶ್ರಯ ಕಮಿಟಿ ಎಗ್ಸಿಸ್ಟಿಂಗ್‌ಗೆ ಬಂದಿದೆ. ಅದರಲ್ಲಿ ಮೂರು ಜನ ರೂರಲ್ ಕಮಿಟಿಗೆ, ಒಬ್ಬರನ್ನು ಅರ್ಬನ್ ಕಮಿಟಿಗೆ ನಾಮಿನೇಟ್ ಮಾಡಬಹುದು ಎಂದು ಶಾಸನ ಮಾಡಿದ್ದೀರಿ. ನಮಗೆ ಒಂದು, ಮುನಿಸಿಪಾಲಿಟಿಗೆ ಒಂದು ಎಂದು ಹೇಳಿದ್ದೀರಿ.

12.10 ಪಿ.ಎಂ

ಈಗ ಆ ಸಮಿತಿಗೆ ಕೆಲಸ ಮಾಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಎಂಬುದನ್ನು ತಾವು ಮೊದಲು ಹೇಳಬೇಕು. ಏಕೆಂದರೆ, ಸದಸ್ಯರಾದ ಬಣಕಾರ್‌ರವರು ಮಾತನಾಡುತ್ತಾ ನಾಮಿನೇಶನ್ ಮಾಡುವ ಕಾರ್ಯ ಪೂರ್ತಿ ಮುಗಿಯದೆ ಸಮಿತಿ ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ತಾವು ಸೂಚನೆ ಕೊಟ್ಟಿದ್ದೀರಿ ಎಂದು ಹೇಳಿದರು. ನಾವು ಆಗಲೇ ಕೆಲಸ ಶುರು ಮಾಡಿದ್ದೇವೆ. ಏಕೆಂದರೆ ತಾವು ನಾಮಿನೇಶನ್ ಮಾಡುತ್ತೀರೋ ಬಿಡುತ್ತೀರೋ ಅದಕ್ಕೆ ನಾವು ಕಾಯುತ್ತಿಲ್ಲ. ಸಮಿತಿಯಲ್ಲಿ ಕೆಲಸ ಮಾಡಲು ನಮಗೆ ಅವಕಾಶವಿದೆಯೋ? ಇಲ್ಲವೋ? ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಸಂಬಂಧವಾಗಿ ಇದ್ದ ನಿಯಮಗಳಿಗೆ ತಿದ್ದುಪಡಿ ಮಾಡಿ ಈಗಾಗಲೇ ದಿನಾಂಕ 12.6.97ರಲ್ಲಿ ತಾವು ಒಂದು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಅದನ್ನು ತಮ್ಮ ಮುಂದಿಡುತ್ತೇನೆ. ಗ್ರಾಮಸಭೆ ಅಥವಾ ಪುರಸಭೆಗಳಲ್ಲಿ ಫಲಾನುಭವಿಗಳನ್ನು ಗುರ್ತಿಸಿದ ನಂತರ ಮನೆ, ನಿವೇಶನಗಳನ್ನು ವಿತರಿಸಲು ಆಶ್ರಯ ಸಮಿತಿಗೆ ಸಂಬಂಧಿಸಿದ ಸಭೆಗಳ ಶಿಫಾರಸ್ಸು ಮಾಡಿದ ಫಲಾನುಭವಿಗಳಿಗೆ ಹಂಚಿಕೆ ಮಾಡುವುದು ಎಂಬುದರ ಬದಲಾಗಿ ಗ್ರಾಮಸಭೆ, ಪಟ್ಟಣ ಸಭೆಗಳು ಮನೆ, ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲು ಫಲಾನುಭವಿಗಳ ಆಯ್ಕೆ ಮಾಡಿದ ಪಟ್ಟಿಯನ್ನು ತಾಲ್ಲೂಕು ವಸತಿ ಸಮಿತಿಯು ಪಟ್ಟಣ ವಸತಿ ಸಮಿತಿಗೆ ಕಳುಹಿಸಬೇಕು. ಈ ಪಟ್ಟಿಗಳಲ್ಲಿರುವ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಮನೆ, ನಿವೇಶನಗಳನ್ನು ಹಂಚಿಕೆ ಮಾಡುವುದು.

ಶ್ರೀ ಕೆ.ಎಸ್. ಈಶ್ವರಪ್ಪ : ಆಶ್ರಯ ಸಮಿತಿ ರಚನೆಯಾದ ನಂತರ ಇಲ್ಲಿಯ ತನಕ ಐದು ಸುತ್ತೋಲೆಗಳು ಬಂದಿವೆ. ಒಂದು ಸಲ ಆಶ್ರಯ ಸಮಿತಿ ಅಧ್ಯಕ್ಷರೇ ಆಗಬೇಕೆಂದಾಯಿತು, ಅನಂತರ

ಇದನ್ನು ವಾಪಸ್ಸು ತೆಗೆದುಕೊಂಡರು. ಅನಂತರ ನಗರಸಭೆಯಲ್ಲೇ ಫಲಾನುಭವಿಗಳನ್ನು ಗುರ್ತಿಸಿ ಅದನ್ನು ಆಶ್ರಯ ಸಮಿತಿ ಅಪ್ರೂವ್ ಮಾಡಬೇಕೆಂದಾಯಿತು. ಈಗ ಮೊನ್ನೆ ಹೊರಡಿಸಿರುವಂತಹ ಸುತ್ತೋಲೆ ಪ್ರಕಾರ ನಾವು ಮೂರು ಜನರನ್ನು ನಾಮಕರಣ ಸದಸ್ಯರನ್ನಾಗಿ ಮಾಡುತ್ತೇವೆಂದು, ನಾಮಕರಣ ಆಗುವ ತನಕ ಆಶ್ರಯ ಸಮಿತಿಗೆ ಯಾವುದೇ ಫಲಾನುಭವಿಗಳನ್ನು ಗುರ್ತಿಸುವ ಹಕ್ಕಿಲ್ಲ. ವೆಂದು ತಿಳಿಸಿದ್ದಾರೆ. ಈಗ ಇನ್ನೊಂದು ಹೊಸ ಸುತ್ತೋಲೆ ಬಗ್ಗೆ ಹೇಳುತ್ತಿರುವುದರಿಂದ, ಯಾವ ಸುತ್ತೋಲೆ ಸ್ಪಷ್ಟವಾಗಿದೆಯೆಂಬುದರ ಬಗ್ಗೆ ಕೊನೆಗೆ ಮತ್ತೊಂದು ಸುತ್ತೋಲೆ ಹೊರಡಿಸಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ : ದಿನಾಂಕ 12.6.97ರಂದು ಹೊರಡಿಸಿರುವ ಸುತ್ತೋಲೆಯೇ ಕೊನೆಯದಾಗಿದೆ. ಆಶ್ರಯ ಸಮಿತಿಗೆ ಪೂರ್ಣ ಅಧಿಕಾರವಿದ್ದು, ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ ಪಟ್ಟಿಯನ್ನು ಆಶ್ರಯ ಸಮಿತಿ ಮುಂದಿಡಬೇಕು. ಉದಾಹರಣೆಗೆ, ಈಗ 4,000 ಮನೆಗಳನ್ನು ವಿತರಿಸಬೇಕೆಂದಿದ್ದರೆ ಅಷ್ಟೂ ಮನೆಗಳನ್ನು ಕೊಡುವುದಕ್ಕೆ ಅನುದಾನದಲ್ಲಿ ಹಣವಿರುವುದಿಲ್ಲ, ಕೇವಲ 500 ಮನೆಗಳಿಗೆ ಮಾತ್ರ ಅವಕಾಶವಿರುತ್ತದೆಂದಾದರೆ ಯಾರು ಅರ್ಹ ಫಲಾನುಭವಿಗಳಿರುತ್ತಾರೋ ಅವರುಗಳನ್ನು ಆಯ್ಕೆ ಮಾಡುವ ಹಕ್ಕು ಆ ಸಮಿತಿಯವರಿಗೆ ಇರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉತ್ತರಿಸಬೇಕು. ಮೂಲಭೂತವಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಕಾನೂನಿನಡಿ ಅವರಿಗೆ ಫಲಾನುಭವಿಗಳನ್ನು ಕೋಟ್ ಮಾಡುವ ಅಧಿಕಾರವನ್ನು ತಾವು ಕೊಟ್ಟಿದ್ದೀರಿ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಕಾಯಿದೆಯಡಿ ಆ ಸದಸ್ಯರಿಗಿರುವ ಅಧಿಕಾರವನ್ನು ನಾವು ಎನ್‌ಕ್ರೋಚ್ ಮಾಡುತ್ತಿರುವುದರಿಂದ ಆ ಕಾಯಿದೆಗೆ ಏನಾದರೂ ತಿದ್ದುಪಡಿ ತಂದಿದ್ದೀರೋ? ಅವರ ಅಧಿಕಾರ ವ್ಯಾಪ್ತಿಯನ್ನು ಏನಾದರೂ ಮೊಟಕುಗೊಳಿಸಿದ್ದೀರಾ? ಈ ಕೆಲಸವನ್ನು ಅವರು ಮಾಡದೇ ಆಶ್ರಯ ಸಮಿತಿಯಲ್ಲಿರುವವರು ಮಾಡಬೇಕೆಂದು ಸುತ್ತೋಲೆ ಹೊರಡಿಸಿದರೆ ನಾವು ಮಾಡುವುದು ಎಷ್ಟು ಕ್ರಮಬದ್ಧವಾಗಿರುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಆಶ್ರಯ ಸಮಿತಿ ವಿಚಾರದಲ್ಲಿ ಹೊರಡಿಸಿರುವ ಸುತ್ತೋಲೆ ಬಹಳ ಸ್ಪಷ್ಟವಾಗಿದೆ. ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಗ್ರಾಮಸಭೆಗಳನ್ನು ಮಾಡಿ ಫಲಾನುಭವಿಗಳನ್ನು ಅವರು ಗುರ್ತಿಸಬೇಕು, ಬಂದಿರತಕ್ಕಂಥ ಎಲ್ಲಾ ವಿಚಾರಗಳನ್ನು ಕೂಡ ಶಾಸನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿರುವ ಸಮಿತಿ ಇದರ ಬಗ್ಗೆ ನಿರ್ಣಯ ಕೈಗೊಳ್ಳಬೇಕು. ಈಗ ಯಾವ ನಗರಸಭೆ ಶಾಸನಸಭಾ ಸದಸ್ಯರ ವ್ಯಾಪ್ತಿಯಲ್ಲಿ ಬರುತ್ತದೆಯೋ ಅದಕ್ಕೆ ಅವರೇ ಅಧ್ಯಕ್ಷರಾಗಿರುತ್ತಾರೆ. ನಗರಸಭೆಯ ಅಧ್ಯಕ್ಷರು ಅದಕ್ಕೆ ಉಪಾಧ್ಯಕ್ಷರಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿರುವ ಸಮಿತಿಗೆ ಶಾಸನಸಭಾ ಸದಸ್ಯರು ಅಧ್ಯಕ್ಷರಾಗಿರುತ್ತಾರೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರಾಗಿರುತ್ತಾರೆ ಮೂರು ಜನರನ್ನು ನಾಮಕರಣ ಸದಸ್ಯರನ್ನಾಗಿ ನೇಮಕಾತಿ ಮಾಡಿದ್ದಾರೆ. ಇವರುಗಳ ನೇಮಕಾತಿ ಬಗ್ಗೆ ಮಾನ್ಯ ವಸತಿ ಸಚಿವರು ಏನು ಹೇಳಿದರು, ಈ ಸಾಲಿನಲ್ಲಿ ನೂರು ಜನ ಫಲಾನುಭವಿಗಳನ್ನು ಗ್ರಾಮಸಭೆ ಆಯ್ಕೆ ಮಾಡಿ ಕಳುಹಿಸಿದ್ದರೂ ಕೂಡ ತಮಗಿರುವ

ಅನುಕೂಲತೆಗಳನ್ನು ನೋಡಿಕೊಂಡು 20-30 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಸಮಿತಿಗೆ ಇರುತ್ತದೆ. ಬೇರೆಯವರ ಹಕ್ಕನ್ನು ಕಸಿದು ಕೊಳ್ಳುವುದಿಲ್ಲ. ಗ್ರಾಮ ಪಂಚಾಯಿತಿ ಕಾನೂನಿನ ಷೆಡ್ಯೂಲ್ 3 ರಲ್ಲಿ ತಿಳಿಸಿರುವಂತೆ ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಶಾಸನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಸಭೆ ಇರುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ತಾಲ್ಲೂಕಿನಲ್ಲಿ ಐದು ಜನ ಶಾಸನ ಸಭಾ ಸದಸ್ಯರುಗಳಿದ್ದರೆ ಆಗ ಏನು ಮಾಡುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಗ್ರಾಮ ಸಮಿತಿಗಳ ಸಮಸ್ಯೆಯಿಲ್ಲ. ಹೊರಡಿಸಿರುವ ಸುತ್ತೋಲೆಯನ್ನು ಸ್ಪಷ್ಟವಾಗಿ ನೋಡಿದ್ದೇನೆ. ಸದನಕ್ಕೆ ಬರುವಾಗ ಅದರ ಪ್ರತಿಯನ್ನು ನಾನು ತರಲಿಲ್ಲ. ನಗರಪ್ರದೇಶದ ಬಗ್ಗೆ ನೀವು ಒಂದು ಸುತ್ತೋಲೆ ಹೊರಡಿಸಿದ್ದೀರಿ. ಸುತ್ತೋಲೆಯಲ್ಲಿ ಮೂರು ಜನ ನಾಮಕರಣ ಸದಸ್ಯರನ್ನು ಮಾಡುತ್ತೇವೆಂದು ಹೇಳಿದ್ದೀರಿ, ತುಂಬಾ ಸಂತೋಷ. ಸುತ್ತೋಲೆಯಲ್ಲಿ ಹೀಗೆ ಹೇಳುತ್ತಾ ಕೊನೆಯಲ್ಲಿ ನಾಮಕರಣ ಸದಸ್ಯರನ್ನು ನೇಮಕ ಮಾಡುವ ತನಕ ಆಶ್ರಯ ಸಮಿತಿ ಯಾವುದೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲವೆಂದು ಒಂದು ಸಾಲು ಸೇರಿಸಿದ್ದೀರಿ ಹೀಗೆ ಹೇಳಿರುವುದನ್ನು ತಾವು ವಾಪಸ್ಸು ತೆಗೆದುಕೊಳ್ಳುತ್ತೀರಾ? ಎಂದು ಕೇಳಲು ಇಷ್ಟು ಪಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾವು ಯಾವುದೇ ಹೊಸ ಅಧಿಸೂಚನೆಯನ್ನು ಹೊರಡಿಸಿಲ್ಲ. ಎರಡು ಅಧಿಸೂಚನೆಗಳನ್ನು ನಾವು ಹೊರಡಿಸಿದ್ದು, ಮೊದಲನೆಯದು 3.3.1990 ರಲ್ಲಿ ಹೊರಡಿಸಿದ್ದರೆ ಎರಡನೆಯದು 12.6.1997ರಲ್ಲಿ ಹೊರಡಿಸಿದ್ದು, ಇದರಲ್ಲಿ ತಿಳಿಸಿರುವಂತೆ ತಾಲ್ಲೂಕಿನಲ್ಲಿ ಯಾರು ಶಾಸಕರಾಗಿರುತ್ತಾರೆ. ಅತಿ ಹೆಚ್ಚು ಜನಸಂಖ್ಯೆಯನ್ನು ಪ್ರತಿನಿಧಿಸಿ ಬರುವಂತಹ ಶಾಸಕರು ಅಧ್ಯಕ್ಷರಾಗಿದ್ದು, ತಾಲ್ಲೂಕು ಪಂಚಾಯಿತಿ ಸಮಿತಿ ಅಧ್ಯಕ್ಷರು ಉಪಾಧ್ಯಕ್ಷರಾಗಿರುತ್ತಾರೆ. ಇದಲ್ಲದೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಮೂವರನ್ನು ನಾಮಕರಣ ಸದಸ್ಯರುಗಳನ್ನಾಗಿ ನೇಮಕ ಮಾಡಿದ್ದೇವೆ. ತಾಲ್ಲೂಕು ಪಂಚಾಯಿತಿ ಸಮಿತಿಯ ಕಾರ್ಯ ನಿರ್ವಾಹಕರು ಸಹ ಸದಸ್ಯರಾಗಿರುವುದರಿಂದ, ನಗರ ಪ್ರದೇಶಕ್ಕೂ ಸಹ ಇದೇ ರೀತಿ ಮಾಡಿದ್ದು ಶಾಸಕರುಗಳ ಸಮಿತಿಗೆ ಏನೂ ಅಧಿಕಾರವಿಲ್ಲವೆಂದು ಕೆಲವು ಶಾಸಕರು ನನಗೆ ತಿಳಿಸಿದ ನಂತರ ದಿನಾಂಕ 12.6.1997ರಂದ ಅಧಿಸೂಚನೆ ಹೊರಡಿಸುವ ಮುಖಾಂತರ ಪೂರ್ಣ ಅಧಿಕಾರವನ್ನು ತಾಲ್ಲೂಕು ಶಾಸಕರುಗಳ ಸಮಿತಿಗೆ ಕೊಟ್ಟಿದ್ದೇವೆ. ಆದುದರಿಂದ, ಫಲಾನುಭವಿಗಳನ್ನು ಆಯ್ಕೆ ಮಾಡುವ ಪೂರ್ತಿ ಅಧಿಕಾರ ತಾಲ್ಲೂಕು ಶಾಸಕರ ಸಮಿತಿಗಿರುತ್ತದೆ. ಆದರೆ, ಗ್ರಾಮಸಭೆ ಮುಖಾಂತರ ತಾಲ್ಲೂಕು ಸಮಿತಿಗೆ ಯಾರು ಬಡವರಿರುತ್ತಾರೆ, ಅವರನ್ನು ಫಲಾನುಭವಿಗಳನ್ನಾಗಿ ಗುರ್ತಿಸಿದ ಪಟ್ಟಿಯನ್ನು ಕಳುಹಿಸುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ನನ್ನ ಹತ್ತಿರ ಬೇರೊಂದು ಸುತ್ತೋಲೆ ಇದ್ದು, ಅದರ ಬಗ್ಗೆ ನಾಳೆ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಕಲ್ಪಿಸಿಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ನಾವು ದಿನಾಂಕ 12.6.97ರಲ್ಲಿ ಹೊರಡಿಸಿರುವ ಅಧಿಸೂಚನೆ ನಂತರ ಬೇರಾವುದೇ ಸುತ್ತೋಲೆಯನ್ನು ಹೊರಡಿಸಿಲ್ಲ.

ಶ್ರೀ ಶಿವರಾಜ್ : ಸಮಿತಿ ಆಗದಿರುವಂಥ ಸ್ಥಳಗಳಲ್ಲಿ ಏನು ಮಾಡಬೇಕೆನ್ನುವುದನ್ನೂ ಹೇಳಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಈಶ್ವರಪ್ಪನವರು ಈ ವಿಚಾರವನ್ನು ಇಂದು ಸದನದಲ್ಲಿ ಪ್ರಸ್ತಾಪಿಸಿ ಚರ್ಚಿಸಿದ್ದಾರೆ. ಪ್ರಶ್ನೆಯೇನೆಂದರೆ, ಮೂರು ಜನರನ್ನು ನಾಮಕರಣ ಸದಸ್ಯರನ್ನಾಗಿ ನೇಮಕ ಮಾಡುವವರೆಗೆ ಈ ಸಮಿತಿ ಕೆಲಸ ಮಾಡಬೇಕೇ? ಬೇಡವೇ ಎನ್ನುವುದು. ಇದಕ್ಕೆ ಉತ್ತರವಾಗಿ ನಾಮಕರಣ ಸದಸ್ಯರುಗಳನ್ನು ಅತಿ ಶೀಘ್ರವಾಗಿ ಮಾಡುತ್ತೇವೆಂದು ವಸತಿ ಸಚಿವರು ಹೇಳಿದ್ದಾರೆ. ಈಗಾಗಲೇ ರಾಜ್ಯದ ಎಂಭತ್ತು ಕಡೆಗಳಲ್ಲಿ ಸಮಿತಿಗಳಿಗೆ ನಾಮಕರಣ ಸದಸ್ಯರುಗಳನ್ನು ನೇಮಕ ಮಾಡಿದ್ದು ಉಳಿದ ಕಡೆಗಳಿಗೂ ಶೀಘ್ರವಾಗಿ ಮಾಡುತ್ತೇವೆಂತಲೂ ಹೇಳಿರುವುದರಿಂದ ಪ್ರಾಯಶಃ ಸದಸ್ಯರ ಪ್ರಶ್ನೆಗೆ ಅದೇ ಉತ್ತರ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಕೆಲಸ ಮಾಡಬೇಕೇ? ಬೇಡವೇ? ಎಂಬುದಕ್ಕೆ ಉತ್ತರ ಹೇಳಲಿಲ್ಲವಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಒಂದು ಸಮಿತಿ ಎಂದರೆ ಸಮಿತಿಯ ಸದಸ್ಯರುಗಳೆಲ್ಲರೂ ಇದ್ದಾಗ ಸಮಿತಿ ಎನಿಸಿಕೊಳ್ಳುತ್ತದೆ, ಆಗ ಸಮಿತಿ ತನ್ನ ಕರ್ತವ್ಯ ಪೂರೈಸುವುದಕ್ಕೆ ಸಾಧ್ಯವಾಗತ್ತದೆ. ಈಗ ಸಮಿತಿಗೆ ನಾಮಕರಣ ಸದಸ್ಯರುಗಳನ್ನು ನೇಮಕ ಮಾಡಲು ಸ್ವಲ್ಪಮಟ್ಟಿಗೆ ಅವರುಗಳ ಹೆಸರುಗಳನ್ನು ಕೊಡುವುದರಲ್ಲಿ ವಿಳಂಬವಾಗಿರಬಹುದು. ಎಂಭತ್ತು ಕಡೆಗಳಲ್ಲಿ ನಾಮಕರಣ ಸದಸ್ಯರುಗಳನ್ನು ನೇಮಿಸಿದ್ದು ಉಳಿದ ಕಡೆಗಳಲ್ಲಿ ಶೀಘ್ರವಾಗಿ ಮಾಡ ಆಗುವುದೆಂದು ಈಗಾಗಲೇ ವಸತಿ ಸಚಿವರು ಹೇಳಿರುವುದರಿಂದ ಈ ಕಾರ್ಯವನ್ನು ಇನ್ನು 10-15 ದಿನಗಳಲ್ಲಿ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಲ್ಲಿಯವರೆಗೆ ನಾವೇನು ಮಾಡಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ : ಮೂರು ಜನ ನಾಮಕರಣ ಸದಸ್ಯರನ್ನು ಮಾಡಲಿ, ತುಂಬಾ ಸಂತೋಷ. ಆದರೆ, ನಿವೇಶನಗಳ ಸೌಲಭ್ಯ ಪಡೆಯಬೇಕಾಗಿರುವ ಬಡವರು ಏನು ಮಾಡಿದ್ದರು? ನಾಮಕರಣ ಸದಸ್ಯರನ್ನು ನಿಮಗಿಷ್ಟ ಬಂದಂತೆ ಮಾಡಿಕೊಳ್ಳಿ. ನಾಮಕರಣ ಮಾಡುವವರೆಗೆ ಆಶ್ರಯ ಸಮಿತಿ ತನ್ನ ಕೆಲಸ ನಿರ್ವಹಿಸಲಿ ಎಂಬುದು ನನ್ನ ಅಭಿಪ್ರಾಯ. ನಾಮಕರಣ ಸದಸ್ಯರನ್ನಾಗಿ ನಾವು ಹೇಳಿದವರನ್ನು ಮಾಡುತ್ತೀರೋ, ಬಿಡುತ್ತೀರೋ ಇದು ತಮಗೆ ಬಿಟ್ಟದ್ದು. ನಾನು ಹೇಳುತ್ತಿರುವುದೇನೆಂದರೆ, ನಾಮಕರಣ ಸದಸ್ಯರ ನೇಮಕವಾಗುವವರೆಗೆ ನಾವು ಕೆಲಸವಿಲ್ಲದೆ ಕುಳಿತಿರಬೇಕೇ?

ಅಧ್ಯಕ್ಷರು : ನಾನು ಏನನ್ನು ಹೇಳಲು ಪ್ರಯತ್ನ ಪಟ್ಟೆನೆಂದರೆ, ಈಗ ನಾಮಕರಣ ಸದಸ್ಯರನ್ನಾಗಿ ಯಾವ್ಯಾವ ವರ್ಗಗಳಿಂದ ಮಾಡುತ್ತಾರೆ? ಯಾವ ವರ್ಗಗಳ ಹಿತಿ ಕಾಪಾಡಬೇಕೋ, ಯಾವ ವರ್ಗಗಳಿಗೆ ಈ ಸೌಲಭ್ಯ ದಕ್ಕಬೇಕೋ, ಅಂತಹವರನ್ನು ಆಯ್ಕೆ ಮಾಡಿ ಅವರ ಪ್ರತಿನಿಧಿಗಳನ್ನು ನಾಮಕರಣ ಸದಸ್ಯರುಗಳನ್ನಾಗಿ ಮಾಡಬೇಕು. ಈ ರೀತಿ ಮಾಡದೆ ಹೋದರೆ ಯೋಜನೆಯ ಮೂಲ ಉದ್ದೇಶವೇನಿದೆ, ಅದು ಸಫಲವಾಗುವುದಿಲ್ಲ. ಆದುದರಿಂದ, ಕ್ರಮವೇನಿದೆಯೆಂದರೆ, ಸಮಿತಿಗಳಿಗೆ

ಸದಸ್ಯರುಗಳಿನ್ನು ನೇಮಕ ಮಾಡುವ ಕಾರ್ಯ ಇನ್ನೂ ಪೂರ್ಣವಾಗಿಲ್ಲ, ಇದರಲ್ಲಿ ವಿಳಂಬವಾಗಿದೆ, ನೇಮಕ ಮಾಡುವವರೆಗೆ ಸಮಿತಿ ಸ್ಥಗಿತಗೊಂಡಿರುತ್ತದೆ. ಪೂರ್ಣವಾಗಿ ಸದಸ್ಯರುಗಳೆಲ್ಲರೂ ನೇಮಕಗೊಂಡ ನಂತರ ಆ ಸಮಿತಿಗಳು ಅಸ್ತಿತ್ವಕ್ಕೆ ಬರುತ್ತವೆ. ಈಗ ಆಶ್ರಯ ಸಮಿತಿ ಬಗ್ಗೆ ತಾವು ಏನು ಕೇಳುತ್ತಿದ್ದೀರಿ, ನಿಮ್ಮ ಪ್ರಶ್ನೆಗೆ ಸರ್ಕಾರದ ಅಭಿಪ್ರಾಯ ರೀತ್ಯ ಈಗ ಆ ಸಮಿತಿಗಳು ಕೆಲಸ ಮಾಡುವುದಕ್ಕಾಗುವುದಿಲ್ಲ. ಆ ಸಮಿತಿಗಳಿಗೆ ಪೂರ್ಣ ಸದಸ್ಯರುಗಳನ್ನು ಅತಿ ಶೀಘ್ರದಲ್ಲಿಯೇ ಮಾಡುತ್ತಾರೆ, ಮಾಡಿದ ನಂತರ ಆ ಸಮಿತಿಗಳು ಕೆಲಸ ಪ್ರಾರಂಭಿಸುತ್ತವೆ. ಅಲ್ಲಿಯವರೆಗೆ ಸಮಿತಿಗಳು ಕೆಲಸ ಮಾಡುವುದಿಲ್ಲವೆಂಬುದು ಸಚಿವರ ಅಭಿಪ್ರಾಯವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ಅಂತಹ ಸೂಚನೆಯನ್ನೇ ಕೊಡಲಿಲ್ಲ. ಇದುವರೆಗೆ ದಿನಾಂಕ 1.4.1997ರಿಂದ ನಾವು 2-3 ಮೀಟಿಂಗುಗಳನ್ನು ಮಾಡಿದ್ದೇವೆ. ಇವೊತ್ತು ಈ ಮಾತು ಹೇಳಿದರೆ ಆ ಮೀಟಿಂಗುಗಳ ಸ್ಥಿತಿ ಏನು? ದಿನಾಂಕ 1.4. 97ರಿಂದ ಕಮಿಟಿ ಅಸ್ತಿತ್ವಕ್ಕೆ ಬಂತೆಂದು ಹೇಳಿದರು. ಇವರು ಮೂರು ಜನ ಅಲ್ಲದೇ ಹೋದರೂ ಕಮಿಟಿಗೆ ಕೋರಂ ಇರುತ್ತದೆ. ಇರುವ ಇಂಜಿನಿಯರುಗಳೆಲ್ಲರನ್ನೂ ಸಮಿತಿಗೆ ಹಾಕಿದ್ದಾರೆ, ಅರ್ಬನ್ ವಾಟರ್ ಸಪ್ಲೈ ಮತ್ತು ಪಿಡಬ್ಲ್ಯೂಡಿಯಲ್ಲಿ ಇರುವ ಎಲ್ಲಾ ಇಂಜಿನಿಯರುಗಳನ್ನು ಸಮತಿಗೆ ಹಾಕಿದ್ದಾರೆ.

ಅಧ್ಯಕ್ಷರು : ಇದು ಕೋರಂ ಪ್ರಶ್ನೆಯಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಮತ್ತೆ ಏಕೆ ಇವರು ದಿನಾಂಕ 1.4.97ರಂದು ಸಮಿತಿ ರಚನೆ ಮಾಡಿದರು?

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಸರ್ಕಾರ ಹಿಂದುಳಿದ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಬೇಕೆಂಬ ಉದ್ದೇಶದಿಂದ ಬಹಳ ಪ್ರಾಮುಖ್ಯವಾದ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿರುತ್ತದೆಯೋ, ಆ ವರ್ಗದ ಪ್ರತಿನಿಧಿಗಳು ಆ ಸಮಿತಿಗಳಲ್ಲಿ ಇಲ್ಲದಿದ್ದರೆ ಅವರ ಹಿತ ಕಾಯುವುದಕ್ಕೆ ಸಾಧ್ಯವಿರುವುದಿಲ್ಲ. ಈ ಕೆಲಸವನ್ನು ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಿಂದ ಬರುವ ಇಂಜಿನಿಯರ್‌ಗಳು ಮಾಡುವುದಿಲ್ಲ. ಸಮಿತಿಗೆ ಅಲ್ಪಸಂಖ್ಯಾತರನ್ನು, ಹಿಂದುಳಿದ ವರ್ಗದವರನ್ನು, ಪರಿಶಿಷ್ಟ ಜಾತಿಯವರನ್ನು ಹಾಗೂ ಮಹಿಳೆಯರನ್ನು ಪ್ರತಿನಿಧಿಸುವವರು ಬರಬೇಕು.

ಶ್ರೀ ಜೆ.ಸಿ. ಮಾದುಸ್ವಾಮಿ : ನಮ್ಮ ರೂರಲ್ ಮುನಿಸಿಪಾಲಿಟಿಗೆ ಬರುವ ಸಮಿತಿಗೆ ಒಬ್ಬ ಸದಸ್ಯರ ಅವಕಾಶವಷ್ಟೆ ಅವರು ಮಾಡಿರುವುದು. ಒಬ್ಬ ಸದಸ್ಯರಿಗೋಸ್ಕರ ಕಾರ್ಯಾಲಯವನ್ನು ಸ್ಥಗಿತಗೊಳಿಸಬೇಕೇ?

ಅಧ್ಯಕ್ಷರು : ಆ ಕೆಲಸವನ್ನು ಸರ್ಕಾರದವರು ಬೇಗ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರ ಅದರ ಬಗ್ಗೆ ಹೇಳಲಿಲ್ಲವಲ್ಲ. ಆ ಬಗ್ಗೆ ಸಚಿವರು ಏಕೆ ಸೂಚನೆ ಕೊಡಲಿಲ್ಲ? ಅವರು ಸೂಚನೆ ಕೊಡಲಿ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಎರಡು ನೋಟೀಸ್‌ಗಳನ್ನು ಹೊರಡಿಸಿದ್ದಾರೆ. ಮೊದಲನೆಯ ನೋಟೀಸ್‌ನಲ್ಲಿ ಯಾವ ಊರಿನ ಫಲಾನುಭವಿಗಳಿಗೆ ಎಷ್ಟು ಸಂಖ್ಯೆಯಲ್ಲಿ ಕೊಡಬೇಕು ಎಂಬುದನ್ನು ತೀರ್ಮಾನ ಮಾಡುವ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದಾರೆ. ಗ್ರಾಮಸಭೆಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲು ಅವಕಾಶ ಮಾಡಿದ್ದಾರೆ.

ಅಧ್ಯಕ್ಷರು : ತಾವುಗಳು ತಿಳಿದು ಕೇಳುತ್ತೀರೋ ತಿಳಿಯದೆಯೇ ಕೇಳುತ್ತೀರೋ ಗೊತ್ತಾಗುವುದಿಲ್ಲ. ನಾವೆಲ್ಲರೂ ಸಹ ಗ್ರಾಮಾಂತರ ಮಟ್ಟದಿಂದ ಇಲ್ಲಿಗೆ ಬಂದಿರುವವರು. ಗ್ರಾಮ ಸಭೆಯಲ್ಲಿ ಯಾರು ಆ ಫಲವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೋ ಅದರ ಪಟ್ಟಿಯನ್ನು ಮಾಡುತ್ತಾರೆ. ಉದಾಹರಣೆಗೆ ಒಂದು ಗ್ರಾಮದಲ್ಲಿ 40 ಜನರು ಅರ್ಹರಿದ್ದರೆ ಆ ಪಟ್ಟಿಯನ್ನು ಮಾಡಿ ಗ್ರಾಮ ಸಭೆಯವರು ಕಳಿಸುತ್ತಾರೆ. ಅವರು ಫಲಾನುಭವಿಗಳನ್ನು ಗುರುತಿಸುತ್ತಾರೆ. ಯಾರಿಗೆ ಅದರ ಬೆನಿಫಿಟ್ ಕೊಡಬೇಕೋ ಅದನ್ನು ಆಶ್ರಯ ಸಮಿತಿಯಲ್ಲಿ ತೀರ್ಮಾನ ಮಾಡುತ್ತಾರೆ. ಈಗ ಕಾಂಗ್ರೆಸ್‌ಗೆ ತಾವು ಟಿಕೆಟ್ ಕೇಳಿರುತ್ತೀರಿ, ಮೂರು ಜನರು ಅಭ್ಯರ್ಥಿಗಳಿರುತ್ತಾರೆ, ಸೀಟ್ ಇರುವುದು ಒಂದೇ, ಮೂರು ಜನರ ಪಟ್ಟಿ ಕಳಿಸುತ್ತಾರೆ. ಹೈ ಕಮಾಂಡ್‌ನವರು ಒಬ್ಬರನ್ನು ಆಯ್ಕೆ ಮಾಡುತ್ತಾರೆ. ಆ ರೀತಿ ಇದೇ ಈಗ ತಮಗೆ ಅರ್ಥವಾಯಿತೆ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ಒಂದು ಗ್ರಾಮ ಪಂಚಾಯಿತಿಗೆ ಎಷ್ಟೆಷ್ಟು ಮನೆಗಳನ್ನು ಕೊಡಬೇಕು ಎಂಬ ಬಗ್ಗೆ ತಾಲ್ಲೂಕು ಪಂಚಾಯಿತಿಯವರು ನಿರ್ಧಾರ ಮಾಡುತ್ತಿದ್ದಾರೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ, ತಾವು ಹೇಳಿರುವುದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಒಂದು ತಾಲ್ಲೂಕಿಗೆ 200 ಮನೆಗಳನ್ನು ಕೊಟ್ಟರೆ, ಯಾವ ಊರಿಗೆ ಎಷ್ಟೆಷ್ಟು ಮನೆಗಳನ್ನು ಕೊಡಬೇಕು ಎಂಬ ಬಗ್ಗೆ ತೀರ್ಮಾನ ಮಾಡತಕ್ಕ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದಾರೆ. ಆ ರೀತಿ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿರುವುದರಿಂದ ಯಾವ ಊರಿಗೆ ಅವಶ್ಯಕವಾಗಿರುತ್ತದೋ, ಅಥವಾ ಪದೇ ಪದೇ ಅವರು ಊರಿಗೆ ಗುರುತು ಮಾಡುವುದರಿಂದ ಆ ಅಧಿಕಾರವನ್ನು ಸಹ ನಮ್ಮ ಟಾಸ್ಕ್‌ಫೋರ್ಸ್ ಸಮಿತಿಯಿಂದ ಮೊಟಕು ಮಾಡಿದಂತಾಗುತ್ತದೆ. ಮತ್ತು ಟಾಸ್ಕ್‌ಫೋರ್ಸ್ ಸಮಿತಿಯವರೇನು ಕೆಲಸ ಮಾಡಲು ಆಗುವುದಿಲ್ಲ.

ಅಧ್ಯಕ್ಷರು : ತಾವು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ತಾವು ವಿಕೇಂದ್ರೀಕರಣ ವ್ಯವಸ್ಥೆಯನ್ನು ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ತಾವು ಒಪ್ಪುವುದಾದರೆ, ತಾಲ್ಲೂಕು ಪಂಚಾಯಿತಿ ಸಮಿತಿಗೆ ಆ ತಾಲ್ಲೂಕಿನ ಎಲ್ಲಾ ಹಳ್ಳಿಗಳನ್ನು ಪ್ರತಿನಿಧಿಸುವಂಥ, ಎಲ್ಲಾ ಕ್ಷೇತ್ರಗಳಿಂದ, ಎಲ್ಲಾ ವರ್ಗಗಳಿಂದ ಬಂದಿರುವಂಥ ಸದಸ್ಯರುಗಳು ಇರುತ್ತಾರೆ. ಆ್ಯಕ್ಷನ್ ಪ್ಲಾನ್ ಪ್ರಕಾರ ಯಾವ ಹಳ್ಳಿಯಲ್ಲಿ ಮನೆಗಳನ್ನು ಕೊಡಬೇಕು, ರಸ್ತೆಯನ್ನು ಮಾಡಬೇಕು ಎಂಬ ಬಗ್ಗೆ ತಾಲ್ಲೂಕು ಪಂಚಾಯಿತಿ ನಿರ್ಣಯ ಮಾಡುತ್ತದೆ. ಆ ರೀತಿ ತೀರ್ಮಾನ ಮಾಡಿದಮೇಲೆ ಆ ಹಳ್ಳಿಯಲ್ಲಿ ಯಾರಿಗೆ ಅದನ್ನು ಕೊಡಬೇಕು ಎಂಬ ಅಧಿಕಾರ ತಾಲ್ಲೂಕು ಪಂಚಾಯಿತಿಗೆ ಇಲ್ಲ. ಅದನ್ನು ಮತ್ತೆ ಡೀಸೆಂಟ್ರಲೈಜ್ ಮಾಡಿ ಗ್ರಾಮ ಸಭೆಯಲ್ಲಿ ಗ್ರಾಮ

ಸಭೆ ಮಾಡಿ ಆ ಊರಿನವರೆಲ್ಲರೂ ಸೇರುತ್ತಾರೆ, ಇಷ್ಟು ಜನ ಅರ್ಹ ಫಲಾನುಭವಿಗಳಿರುತ್ತಾರೆಂದು ಅವರು ಗುರುತಿಸುತ್ತಾರೆ. ಅವರ ಪೈಕಿ ಯಾರಿಗೆ ಕೊಡಬೇಕು ಎಂಬ ಅಧಿಕಾರವನ್ನು ಟಾಸ್ಕ್‌ಫೋರ್ಸ್ ಸಮಿತಿಗೆ ಕೊಟ್ಟಿರುತ್ತಾರೆ. ಗ್ರಾಮಪಂಚಾಯಿತಿ ಅಧಿಕಾರ, ತಾಲ್ಲೂಕು ಪಂಚಾಯಿತಿ ಅಧಿಕಾರ ಎಲ್ಲವನ್ನು ಟಾಸ್ಕ್ ಫೋರ್ಸ್‌ಗೆ ಕೇಳುವುದಾದರೆ ಆ ಸಮಿತಿಗಳನ್ನು ನಾವು ಡಿಸಾಲ್ವ್ ಮಾಡಿಬಿಡಬಹುದಲ್ಲ. ಕಾನೂನಿನಲ್ಲಿರುವುದನ್ನು ತಮಗೆ ಹೇಳಿತ್ತಿದ್ದೇನೆ. ಇದು ನನ್ನ ಅಭಿಪ್ರಾಯವಲ್ಲ. ವಿಕೇಂದ್ರಿಕರಣದ ಬಗ್ಗೆ ಇನ್ನೂ ಉಗ್ರವಾಗಿ ಮಾತನಾಡುವವನು ನಾನು.

ಶ್ರೀ ಮಂಜುನಾಥ್ ಸಿ ಕುನ್ನೂರ್ : ಕಾನೂನಿನ ಪ್ರಕಾರ ಗ್ರಾಮ ಸಭೆಗಳಿಗೆ ಫರ್ದರ್ ಡೀಸೆಂಟ್ರಲೈಜೇಷನ್ ಮಾಡುವ ಅಧಿಕಾರವನ್ನು ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ನಾವೆಲ್ಲಾ ವಿರೋಧ ಪಕ್ಷದವರು ಸೇರಿದಾಗ ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚೆ ಬಂತು. ನಾಮಕರಣ ಮಾಡತಕ್ಕ ವ್ಯವಸ್ಥೆಯಲ್ಲಿ, ನಾಮಕರಣ ಮಾಡುವಾಗ ವಿರೋಧ ಪಕ್ಷದವರು ಆ ಶಾಸಕರು ಹೇಳಿದಂತ ಶಾಸಕರಲ್ಲದ ಒಬ್ಬರು ಸದಸ್ಯರನ್ನು ನಾಮಕರಣ ಮಾಡಬೇಕೆಂದು ಮನವಿ ಸಲ್ಲಿಸಿದ್ದೇವೆ. ಶಾಸಕರು ಸದಸ್ಯರಾಗಿಯೇ ಇದ್ದಾರೆ ಅದರ ಜೊತೆಗೆ ಶಾಸಕರು ಹೇಳಿದ ಮತ್ತೊಬ್ಬರನ್ನು ನಾಮಕರಣ ಮಾಡಬೇಕು. ನಾಮಕರಣವೆಂದರೆ ಒಂದೇ ಕಡೆಯ ಮೂರು ಜನರನ್ನು ಅವರಿಗೆ ಇಚ್ಛೆ ಬಂದಂತೆ ಮಾಡುವ ವ್ಯವಸ್ಥೆಯಾಗಿಬಿಟ್ಟಿದೆ. ಆದ್ದರಿಂದ ಶಾಸಕರು ಹೇಳಿದಂಥ ಒಬ್ಬರನ್ನು ನಾಮಕರಣ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಆದ್ದರಿಂದ, ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬ ಬಗ್ಗೆ ಮಾನ್ಯ ವಸತಿ ಇಲಾಖೆಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಬಹಳ ಹಿರಿಯ ಸದಸ್ಯರು, ಕೆಲವೇ ನಿಮಿಷಗಳ ಕೆಳಗೆ ಮುಖ್ಯಮಂತ್ರಿಗಳ ಜೊತೆ ಈ ವಿಚಾರ ಪ್ರಸ್ತಾಪ ಮಾಡಿದ್ದೀರಿ. ಅದು ಒಂದು ನೀತಿಗೆ ಸಂಬಂಧಪಟ್ಟ ವಿಚಾರ. ಅವರೂ ತಾವು ಕುಳಿತುಕೊಂಡು ಚರ್ಚೆ ಮಾಡಬೇಕು. ತಾವು ನೇರವಾಗಿ ವಸತಿ ಸಚಿವರಿಗೆ ಕೇಳಿದರೆ ಅವರು ಹೇಗೆ ಉತ್ತರವನ್ನು ಕೊಡಲು ಸಾಧ್ಯವಾಗುತ್ತದೆ? ಅದು ನೀತಿಗೆ ಸಂಬಂಧಪಟ್ಟ ವಿಚಾರ, ತಾವೂ ಮುಖ್ಯ ಮಂತ್ರಿಯವರು ಮಾತನಾಡಿ ಅನಂತರ ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಶಾಸಕರೊಬ್ಬರನ್ನು ಸದಸ್ಯರನ್ನಾಗಿ ಮಾಡಿ ಬಾಕಿ ಮೂರು ಜನ ಯಾರನ್ನಾದರೂ ಮಾಡಿ ಎಂದು ಅವರೇನು ಹೇಳಿದ್ದಾರೆ ಅದರಂತೆ ನಾವು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದಂತೆ ಮೂರು ಜನರನ್ನು ಮಾಡಿದರೆ ಒಬ್ಬರೂ ಕಾಂಗ್ರೆಸ್‌ನವರು ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿಯೆಂದು ಹೇಳಿದ್ದಾರೆ, ಆ ಕೆಲಸವನ್ನು ನಾವು ಮಾಡಿದ್ದೇವೆಂದು ಅವರು ಹೇಳಿದ್ದಾರೆ. ನಾಮಕರಣ ಮಾಡುವ ಕೆಲಸವನ್ನು ಸರ್ಕಾರ

ಮಾಡುತ್ತದೆ, ಅದನ್ನು ಸರ್ಕಾರ ಮಾಡಿದೆ, ಅದನ್ನು ಬೇರೆ ರೀತಿಯಲ್ಲಿ ಹೇಳುತ್ತಿದ್ದಾರೆಂದು ಅವರ ವಾದವಾಗಿದೆ.

ಶ್ರೀವಾಟಾಳ್ ನಾಗರಾಜ್ : ಇಲ್ಲ ಅದಲ್ಲ, ಅವರು ಹೇಳಿದ್ದುದು ಸರಿ.

ಅದ್ಯಕ್ಷರು : ಅನಾವಶ್ಯಕವಾಗಿ ಸಮಯ ವ್ಯರ್ಥವಾಗುತ್ತಿದೆ, ದಯಮಾಡಿ ನನ್ನ ಮಾತನ್ನು ಕೇಳಿ. ಅವರೊಂದು ಹೇಳುವುದು, ತಾವೊಂದು ಹೇಳುವುದು ಹೀಗೆ ಮಾತಿಗೆ ಮಾತು ಬೆಳೆದುಕೊಂಡು ಹೋಗುತ್ತದೆ. ಅನಾವಶ್ಯಕವಾಗಿ ಸಮಯ ವ್ಯರ್ಥವಾಗುತ್ತದೆ. ತಾವು ಕೇಳುವುದೇನೆಂದರೆ ಶಾಸಕರಲ್ಲದೆ, ಶಾಸಕರು ಅಪೇಕ್ಷೆ ಪಡುವ ಇನ್ನೊಬ್ಬರಿಗೆ ವಿಶೇಷವಾಗಿ ವಿರೋಧ ಪಕ್ಷದ ಶಾಸಕರು ಇರತಕ್ಕ ಸಂದರ್ಭಗಳಲ್ಲಿ ಕೊಡಬೇಕೆಂದು ಆಗಿದೆ. ಅದು ನೀತಿಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೀರಿ. ಅವರು ಹೆಚ್ಚು ಕಮ್ಮಿ ಒಪ್ಪಿಕೊಂಡಂತೆ ನನಗನ್ನಿಸಿತು. ಅವರು ಬಂದಾಗ ಅದರ ಬಗ್ಗೆ ಉತ್ತರಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಪಾಲಿಸಿ ಡಿಸಿಷನ್ ಇದೆ.

ಶ್ರೀ ವಾಟಾಳ್ ನಾಗರಾಜ್ : ನಾಮಕರಣ ಮಾಡುವುದು ಅವರ ಪಕ್ಷದವರನ್ನೇ ಹಾಕಿಕೊಳ್ಳುವುದಲ್ಲ. ಅದು ನೀತಿಯ ಪ್ರಶ್ನೆಯಾಗುವುದಿಲ್ಲ. ಮೂರು ಜನರನ್ನು ನಾಮಕರಣ ಮಾಡತಕ್ಕದ್ದು ಅವರ ಪಕ್ಷದವರನ್ನು ನಾಮಕರಣ ಮಾಡಿಕೊಳ್ಳುವುದಕ್ಕಲ್ಲ. ಇದು ಸರ್ಕಾರವೇ ಹೊರತು ಪಕ್ಷವಲ್ಲ.

(ಗೊಂದಲ)

ಅಧ್ಯಕ್ಷರು : ಇದು ಬಹಳ ಸಣ್ಣ ವಿಚಾರ, ತೀರ್ಮಾನವಾಗಿದೆ. ಮುಖ್ಯಮಂತ್ರಿಗಳು ನೀವು ಪ್ರಸ್ತಾಪ ಮಾಡಿದ್ದೀರಿ. ಅವರು ಇದ್ದಾಗ ಪ್ರಸ್ತಾಪ ಮಾಡಿ. ಈಗೇಕೆ ಸಮಯ ವ್ಯರ್ಥ ಮಾಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸುಮಾರು ಎರಡೂವರೆ ವರ್ಷಗಳಿಂದ ಶಾಸಕರು ಅಧ್ಯಕ್ಷರಾಗಿರಬೇಕೋ, ಬೇರೆಯವರು ಆಗಿರಬೇಕೋ, ಮುಂತಾಗಿ ಚರ್ಚೆಗಳಾಗಿ ಫಲಾನುಭವಿಗಳು ಸಾಯುತ್ತಿದ್ದಾರೆ. ಯಾರು ಅಧ್ಯಕ್ಷರಾಗಿರಬೇಕು, ಯಾರು ಸದಸ್ಯರಾಗಿರಬೇಕು ಎಂಬುದಕ್ಕಿಂತ ಬಡವರಿಗೆ ನಿವೇಶನ ಮತ್ತು ಮನೆಗಳು ಸಿಗಬೇಕು ಎಂಬುದು ಮುಖ್ಯ. ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಅಧಿವೇಶನ ಮುಗಿಯುವುದರೊಳಗಾಗಿಯಾದರೂ ತಮಗೆ ತಿಳಿದಂತೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ನಾಮಿನೇಷನ್ ಮಾಡುವ ಏರ್ಪಾಡು ಮಾಡಿ. ನಾವು ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇವೆ. ಅವರನ್ನು ಭೇಟಿ ಮಾಡಿ ಮಾತನಾಡಿ, ಅವರು ಕೊಡಿ ಎಂದರೆ ಕೊಡಿ ಬೇಡ ಎಂದರೆ ಬೇಡ ಎಂಬುದು ತಮಗೆ ಬಿಟ್ಟ ವಿಚಾರ. ಎರಡನೆಯದಾಗಿ ನಾಮಕರಣ ಸದಸ್ಯರನ್ನು ನೇಮಕ ಮಾಡುವುದು ತಮ್ಮ ಜವಾಬ್ದಾರಿ. ಆದರೆ ಅದನ್ನು ಮಾಡಲಿಲ್ಲ. ಎಂಭತ್ತು ಕಡೆ ಮಾಡಿದ್ದೀರಿ, ಎಲ್ಲಿ ಮಾಡಿದ್ದೀರಿ ಅಲ್ಲಿ ಕೆಲಸವಾಗುತ್ತದೆ, ಎಲ್ಲಿ ಮಾಡಿಲ್ಲ ಅಲ್ಲಿ ಕೆಲಸವಾಗುವುದಿಲ್ಲ ಅಲ್ಲಿ ಶಾಸಕರನ್ನು ಜನರು ಹರಾಜುಹಾಕುತ್ತಾರೆ.

ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಿ ನಾವು ಜನರ ಮುಂದೆ ನಗೆಪಾಟಲಿಗೆ ಗುರಿಯಾಗುವ ದುಸ್ಥಿತಿ ಬಂದಿದೆ. ಜವಾಬ್ದಾರಿ ಇರತಕ್ಕ ಸರ್ಕಾರ ನಾಮಕರಣ ಮಾಡುವಂಥ ಕಾಲದಲ್ಲಿ ಒಂದೇ ಬಾರಿಗೆ ಎಲ್ಲಾ ಕಡೆ ಮಾಡಬೇಕಿತ್ತು. ಈಗಲಾದರೂ ಆ ಕೆಲಸವನ್ನು ಮಾಡಿ. ಈಗ ನಗರದಲ್ಲೆಲ್ಲೂ ಕಾರ್ಯಕಲಾಪ ನಡೆಯುತ್ತಿಲ್ಲ. ಸದಸ್ಯರು ಇಲ್ಲಿದಿದ್ದರೆ ಅವರು ಬಂದಮೇಲೆ ಸೇರಿಕೊಳ್ಳುತ್ತಾರೆ, ಅಲ್ಲಿಯವರೆಗೆ ಶಾಸಕರು ಇರುವುದಿಲ್ಲವೆ? ಶಾಸಕರು, ಅಲ್ಲಿರುವ ನಗರಸಭಾ ಅಧ್ಯಕ್ಷರು ಜವಾಬ್ದಾರರಲ್ಲವೆ? ಮೂರು ಜನ ನಾಮಕರಣ ಸದಸ್ಯರಿಲ್ಲವೆಂದು ಸುಮ್ಮನಿರುವುದೇ? ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಬಡವರನ್ನಲ್ಲವೆ? ಶ್ರೀಮಂತರನ್ನು ಆಯ್ಕೆ ಮಾಡಲು ಆಗುತ್ತದೆಯೇ? ಎಲ್ಲಿ ನಾಮಕರಣ ಮಾಡಿಲ್ಲ ಅಲ್ಲಿ ಕಾರ್ಯಕಲಾಪಗಳನ್ನು ನಡೆಸಲಿ ಒಂದು ವಾರ ಇಲ್ಲವೆ ಹದಿನೈದು ದಿವಸಗಳಲ್ಲಿ ನಾಮಕರಣ ಪ್ರಕ್ರಿಯೆಯನ್ನು ಪೂರ್ತಿ ಮಾಡುತ್ತೀರಾ ಅದರ ಬಗ್ಗೆ ಭರವಸೆ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾರ್ಯಕಲಾಪಗಳನ್ನು ಮಾಡಬೇಡಿ ಎಂದು ಇದುವರೆಗೆ ಯಾವುದೇ ಸರ್ಕಾರಿ ಆದೇಶವನ್ನು ಮಾಡಿಲ್ಲ. ಆದರೆ, ತಾವು ಈ ಸದನ ಮುಗಿಯುವುದರೊಳಗೆ ನಾಮಕರಣ ಪೂರ್ಣ ಮಾಡಬೇಕೆಂದು ಸಲಹೆ ಕೊಟ್ಟಿದ್ದೀರಿ. ಈ ಅಧಿವೇಶನ ಮುಗಿಯುವುದರೊಳಗೆ ಮಾಡುತ್ತೇವೆ.

ಶ್ರೀ ಆರ್.ಜಿ. ವೆಂಕಟಾಚಲಯ್ಯ : ಮಾನ್ಯ ಅದ್ಯಕ್ಷರೆ, ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳ ಬಗ್ಗೆ ಪಟ್ಟಿಯನ್ನು ತಾಲ್ಲೂಕು ಪಂಚಾಯಿತಿಯವರು ಕೊಡುತ್ತಾರೆ. ನಿಮ್ಮ ಪಂಚಾಯಿತಿಗೆ ಇಷ್ಟು ಮನೆಗಳು ಬಂದಿವೆ ಪಟ್ಟಿ ಕಳಿಸಿ ಎಂದು ಕೇಳಿದ್ದರು. ಆದರೆ ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ಒಂದೂ ಸಭೆಯೂ ಆಗಿಲ್ಲ. ನಮ್ಮನ್ನು ಭೇಟಿ ಮಾಡಿಲ್ಲ. ಈ ರೀತಿ ಮನೆ ವಿತರಣೆಯಾದರೆ ಆಶ್ರಯ ಸಮಿತಿ ಏಕೆ ಬೇಕು? ಹಿಂದಿನ ಸರ್ಕಾರ ಆಶ್ರಯದ ಫಲಾನುಭವಿಗಳಿಗೆ ಆಯ್ಕೆ ಮಾಡುವ ಅಧಿಕಾರವನ್ನು ಆಶ್ರಯ ಸಮಿತಿಗೆ ಕೊಟ್ಟಿತ್ತು. ಮನೆಗಳ ಹಕ್ಕುಪತ್ರಗಳನ್ನು ಕೊಡತಕ್ಕ ಅಧಿಕಾರವನ್ನು ಆಶ್ರಯ ಸಮಿತಿಗೆ ಕೊಟ್ಟಿತ್ತು. ಆದರೆ ಇವತ್ತು ಎಗ್ಸಿಕ್ಯುಟೀವ್ ಅಧಿಕಾರಿಗಳೇ ಸೋಲ್ ಏಜೆಂಟ್ಸ್‌ಗಳಾಗಿದ್ದಾರೆ. ಹಕ್ಕುಪತ್ರವನ್ನು ಅವರೇ ಕೊಡುತ್ತಿದ್ದಾರೆ. ಆಶ್ರಯ ಮನೆಗಳಿಗೆ ಅವರೇ ಪಂಚಾಯಿತಿಯಿಂದ ಅನುಮೋದನೆ ಕೊಡುತ್ತಿದ್ದಾರೆ. ಹಾಗಿದ್ದಮೇಲೆ ಈ ಆಶ್ರಯ ಸಮಿತಿಯ ಕೆಲಸವೇನು? ಸರ್ಕಾರ ಇದುವರೆಗೆ ಇದರ ಬಗ್ಗೆ ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಗ್ರಾಮಸಭೆಗಳ ಪಟ್ಟಿಯನ್ನು ಆಯ್ಕೆ ಮಾಡತಕ್ಕ ಅಧಿಕಾರವನ್ನು ಈ ಅಶ್ರಯ ಸಮಿತಿಗೆ ಕೊಡಬೇಕು. ಇಲ್ಲದೆ ಹೋದರೆ ಈ ಸಮಿತಿ ಇದ್ದು ಪ್ರಯೋಜನ ಇಲ್ಲ. ಪ್ರಕಾಶ್‌ರವರು ಗ್ರಾಮಸಭೆ ಪಟ್ಟಿಯಲ್ಲಿ ನೂರು ಇರಲಿ ಎಂಭತ್ತು ಇರಲಿ ಅದನ್ನು ಗ್ರಾಮಪಂಚಾಯಿತಿಯ ಆಧಾರದ ಮೇಲೆ ಆಯ್ಕೆ ಮಾಡತಕ್ಕ ಅಧಿಕಾರ ಸಮಿತಿಯದು ಎಂದು ಹೇಳಿದರು. ಆದರೆ, ಖಂಡಿತವಾಗಿ ಇದು ಎಲ್ಲೂ ಆಗುತ್ತಾ ಇಲ್ಲ. ಇವತ್ತಿನವರೆಗೂ ನಮ್ಮ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಯ ಒಂದು ಮೀಟಿಂಗ್ ಆಗಿಲ್ಲ. ನಮ್ಮ ಗ್ರಾಮದಲ್ಲಿ ಆಶ್ರಯ ಸಮಿತಿಯನ್ನು ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ ಮೊನ್ನೆಮೊನ್ನೆಯವರೆಗೆ ಅವರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿ ಕೆಲಸ ಮಾಡಿದಂಥವರು ತಾವು ಇವತ್ತು ಜಿಲ್ಲಾ ಪಂಚಾಯತ್‌ಗಳಿಗೆ, ತಾಲ್ಲೂಕ್ ಪಂಚಾಯತ್‌ಗಳಿಗೆ, ಗ್ರಾಮಪಂಚಾಯತ್‌ಗಳಿಗೆ ಕೊಟ್ಟಿರತಕ್ಕ ಅಧಿಕಾರವನ್ನು ಮೊಟಕುಗೊಳಿಸತಕ್ಕದ್ದು ಅಂದರೆ ಇದು ಅತ್ಯಂತ ವಿಪರ್ಯಾಸ. ಬಹಳ ಹಿರಿಯರು ಅವರು. ತಾವು ಜಿಲ್ಲಾಪಂಚಾಯಿತಿಯ ಅಧ್ಯಕ್ಷರಾಗಿದ್ದಾಗ ಯಾವ ರೀತಿಯ ನಿರ್ಧಾರಗಳನ್ನು ಮಾಡಿದ್ದೀರಿ?

ಶ್ರೀ ಆರ್.ಜಿ. ವೆಂಕಟಾಚಲಯ್ಯ : ನಾನು ವನ್ಯ ಸಚಿವರಿಗೆ ಒಂದು ವಿಷಯವನ್ನು ಹೇಳುತ್ತೇನೆ. ನಾವು ಅಧಿಕಾರ ಮೊಟಕುಗೊಳಿಸಬೇಕು ಎಂದು ಹೇಳುತ್ತಿಲ್ಲ. ಗ್ರಾಮಸಭೆ ಸುಪ್ರೀಂ ಆಗಿರತಕ್ಕಂಥದ್ದು. ಪಟ್ಟಿ ಆಯ್ಕೆ ಮಾಡತಕ್ಕ ಅಧಿಕಾರವನ್ನು ಈ ಸಮಿತಿಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಶಾಸನ ಸಭೆಗಳಿಗೆ ಆರಿಸಿ ಬರತಕ್ಕವರು ಸಾಕಷ್ಟು ಪ್ರೌಢಿಮೆ ಇರತಕ್ಕಂಥವರು ಎಂಬುದು ಲೋಕದ ನಂಬಿಕೆ. ಯಾವುದಾದರೂ ಒಂದು ಕಗ್ಗಂಟಾದ, ಜಟಿಲವಾದ ವಿಚಾರಗಳನ್ನು ಪುನಃ ಪುನಃ ಚರ್ಚೆ ಮಾಡುವುದರಲ್ಲಿ ಅರ್ಥ ಇದೆ. ಆದರೆ, ಕ್ಷುಲ್ಲಕವಾದಂತಹ, ಸರಳವಾದಂತಹ ಸ್ಪಷ್ಟೀಕರಣಗಳನ್ನು ಗಂಟೆಗಟ್ಟಲೆ ಎಳೆದು ಎಳೆದು ಪುನಾರವರ್ತನೆ ಮಾಡಿ ಚರ್ಚೆ ಮಾಡಿದರೆ ಯಾರಿಗೂ ಈ ಕಲಾಪಗಳಲ್ಲಿ ಆಸಕ್ತಿ ಉಂಟಾಗುವುದಿಲ್ಲ. ನಮ್ಮ ನಡವಳಿಕೆ ನಮ್ಮ ಪ್ರೌಢಿಮೆಯನ್ನು ಪ್ರತಿಬಿಂಬಿಸುತ್ತದೆ. ಈಗಲೂ ನಾವು ಇಲ್ಲಿ ಕೂರಲಿಕ್ಕೆ ಅರ್ಹರೆ, ಎಂಬ ಪ್ರಶ್ನೆ ಬರುತ್ತದೆ. ಎಲ್ಲರಿಗೂ ಸಮಯ ಕೊಡುತ್ತೇನೆ. ನಾನು ಸ್ಪಷ್ಟವಾಗಿ ಪ್ರಾಥಮಿಕ ಶಾಲೆಗಳಲ್ಲಿ ಪಾಠ ಹೇಳುವ ಹಾಗೆ ಹೇಳಿದ್ದೇನೆ. ಕಾನೂನು ಏನು ಹೇಳುತ್ತದೆ, ನಮ್ಮ ಪರಿಸ್ಥಿತಿ ಏನು, ಸುತ್ತೋಲೆ ಏನಿದೆ? ನಾವು ಏನು ಮಾಡಬೇಕು ಎನ್ನತಕ್ಕಂಥದ್ದನ್ನು ಮತ್ತೆ ಮತ್ತೆ ಚರ್ಚೆ ಮಾಡುವುದು ಮತ್ತೆ ಇದರ ಬಗ್ಗೆ ವ್ಯಾಖ್ಯಾನ ಪ್ರಶ್ನೆ, ಒಟ್ಟಿಗೆ ಆರು ಜನ ಎದ್ದುನಿಂತುಕೊಳ್ಳುವುದು ಇದೆಲ್ಲಾ ಶಾಸನಸಭೆಗೆ ಗೌರವ ತರತಕ್ಕದ್ದು ಅಲ್ಲ. ಫಲಾನುಭವಿಗಳನ್ನು ಗುರುತಿಸತಕ್ಕ ಜವಾಬ್ದಾರಿ ಗ್ರಾಮಸಭೆಗೆ ಇರುತ್ತದೆ. ಯಾವ ಹಳ್ಳಿಗಳಲ್ಲಿ ಫಲಾನುಭವಿಗಳನ್ನು ತೆಗೆದುಕೊಳ್ಳಬೇಕು ಎನ್ನುವ ಅಧಿಕಾರ ಗ್ರಾಮಸಭೆಗೆ ಇರುತ್ತದೆ. ಫಲಾನುಭವಿಗಳನ್ನು ಗುರುತಿಸಿ ಪಟ್ಟಿ ಕಳುಹಿಸಿದ ಮೇಲೆ, ಆ ಪಟ್ಟಿಯಲ್ಲಿ ಎಷ್ಟು ಜನರಿಗೆ ಕೊಡಲಿಕ್ಕೆ ಅಗುತ್ತದೆ ಅವರನ್ನು ಆಯ್ಕೆ ಮಾಡತಕ್ಕ ಅಧಿಕಾರ ಆಶ್ರಯ ಸಮಿತಿಗೆ ಇರುತ್ತದೆ. ಇದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಇದರ ಬಗ್ಗೆ ಸುತ್ತೋಲೆ ಚರ್ಚೆ, ವ್ಯಾಖ್ಯಾನ ಅರ್ಥ ಇಲ್ಲದೆ ಇರುವುದು. ಈಗ ವಿಶ್ವೇಶ್ವರ ಹೆಗಡೆಯವರು ಒಂದು ಸ್ಪಷ್ಟೀಕರಣ ಕೇಳಿದ್ದಾರೆ. ಮುಂದೆ ಡಿ.ಆರ್. ಪಾಟೀಲ್ ಆಮೇಲೆ ಯಾರಿಗೂ ಅವಕಾಶ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ನಮಗೆ ಪೂರ್ಣ ನಂಬಿಕೆ ಇದೆ. ಆದ್ದರಿಂದ ನಾವು ಆ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಎಲ್ಲೋ ಒಂದು ಕಡೆ ಸರ್ಕಾರದಲ್ಲಿ ಈ ಶಾಸಕರನ್ನು ತೃಪ್ತಿಪಡಿಸುವ ಯೋಜನೆ ಇದೇಯೇನೋ ಎನಿಸುತ್ತದೆ. ಏಕೆಂದರೆ, ತಾಲ್ಲೂಕು ಪಂಚಾಯಿತಿಗೆ, ಗ್ರಾಮಸಭೆಗೆ ಇಂತಿಷ್ಟು ಫಲಾನುಭವಿಗಳು ಎಂದು ಗುರುತಿಸುತ್ತಾರೆ. ನಾವು ಶಾಸಕರು ಆಶ್ರಯ ಸಮಿತಿಯ ಅಧ್ಯಕ್ಷರಾಗಿದ್ದರೂ ಅವರು ನಿಶ್ಚಯ ಮಾಡಿದಂತಹ ಗುರಿಯ ಫಲಾನುಭವಿಗಳನ್ನು

ಆಯ್ಕೆ ಮಾಡಬೇಕು. ಒಂದು ಗ್ರಾಮಸಭೆಗೆ ನಿಜವಾಗಿ ಅರ್ಹರಿರುವ 15 ಜನ ಫಲಾನುಭವಿಗಳಿಗೆ ಕೊಡಲೇಬೇಕು ಎಂದು ನನಗೆ ಅಪೇಕ್ಷೆ ಇದ್ದರೂ ಸಹ ಗ್ರಾಮಸಭೆಯಿಂದ ಆಯ್ಕೆ ಆಗಿ ಬಂದಿದ್ದರೂ ಸಹ ಈ ತಾಲ್ಲೂಕ್ ಪಂಚಾಯಿತಿ ಗುರಿ ಬರೀ 10 ಎಂದು ನಿಶ್ಚಯ ಮಾಡಿದರೆ ಬರೀ ಹತ್ತು ಮಾತ್ರ ಕೊಡಬೇಕಾಗುತ್ತದೆ. ಅಂದರೆ ಇಲ್ಲಿ ನಮಗೆ ತೃಪ್ತಿಪಡದಂಥ ಗೊಂದಲ ಮಾಡುವಂಥ ಭಾವನೆಯ ಒಂದು ಅಂಶ ವ್ಯಕ್ತವಾಗುತ್ತದೆ. ಆಶ್ರಯ ಸಮಿತಿಗೆ ಅರ್ಹರಿರುವ 15 ಜನ ಕೊಡುವ ಅಪೇಕ್ಷೆ ಇದ್ದರೂ ತಾಲ್ಲೂಕು ಪಂಚಾಯಿತಿ ಆಯ್ಕೆ ಮಾಡಿದಂತಹ 10 ಜನ ಫಲಾನುಭವಿಗಳಿಗೆ ಮಾತ್ರ ಕೊಡಬೇಕಾದರೆ ತೊಂದರೆ, ತೊಡಕು ಅಲ್ಲಿ ಉದ್ಭವವಾಗುತ್ತದೆ. ಇನ್ನೊಂದು ಕಡೆ 10 ಜನ ಫಲಾನುಭವಿಗಳು ಇಲ್ಲದಿದ್ದರೂ ತಾಲ್ಲೂಕು ಪಂಚಾಯಿತಿ ನಿಶ್ಚಯ ಮಾಡಿದ್ದರಿಂದ 10 ಜನಕ್ಕೆ ಕೊಡಲೇಬೇಕಾಗಿದೆ. ಈ ಒಂದು ತೊಂದರೆ ಇದೆ ಎನ್ನತಕ್ಕದ್ದು ನನ್ನ ಭಾವನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಮಾನಸಿಕ ಸಿದ್ಧತೆ ಇಲ್ಲದಿರುವುದರಿಂದ ಈ ಗೊಂದಲ ಇದೆ. ಅಧಿಕಾರ ವಿಕೇಂದ್ರಿಕರಣವನ್ನು ಒಪ್ಪಿಕೊಂಡ ಮೇಲೆ ನೀವು ತಾಲ್ಲೂಕ್ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ನೀವು ಬರಬೇಕು ಅದು ಅನಪೇಕ್ಷಣೆಯವಾದುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ತಾಲ್ಲೂಕು ಪಂಚಾಯಿತಿಯಲ್ಲಿ ಲಭ್ಯವಿರುವ ಮನೆಗಳೆಷ್ಟು ಮತ್ತು ಯಾವ ಊರಿನಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಯೋಜನೆ ಮಾಡುತ್ತಾರೆ. ಗ್ರಾಮಸಭೆಯವರು ಆಯ್ಕೆ ಮಾಡಿದಂಥ ಅರ್ಹ ಫಲಾನುಭವಿಗಳ ವಿವರಣೆಯನ್ನು ನಿಮಗೆ ಕೊಡುತ್ತಾರೆ. ಅದರಲ್ಲಿ ಇರತಕ್ಕಂಥವರನ್ನು ತಾವು ಆಯ್ಕೆ ಮಾಡುತ್ತೀರಿ. ತಾವು ಹೇಳಿದಂತೆ ನೀವು 15 ಜನ ಅರ್ಹ ಫಲಾನುಭವಿಗಳನ್ನು ಗುರುತಿಸಿರಬಹುದು. ಆದರೆ, ನಮಗೆ ಸಂಪನ್ಮೂಲಗಳ ಕೊರತೆ ಇದೆ. ಈ ಎಲ್ಲಾ ಕಾರಣಗಳಿಂದ 10 ಜನರಿಗೆ ಕೊಡಬೇಕಾಗುತ್ತದೆ. ಆ 15 ಜನರಲ್ಲಿ 10 ಜನರನ್ನು ಆಯ್ಕೆ ಮಾಡುವಂತಹ ನಿರ್ಧಾರ ಏನಿದೆ ಅದು ನಿಮ್ಮ ಆಶ್ರಯ ಸಮಿತಿಗೆ ಬಿಟ್ಟಿರತಕ್ಕದ್ದು, ಆದುದರಿಂದ, ಇದರಲ್ಲಿ ಮಾನಸಿಕವಾಗಿ ಅಧಿಕಾರ ವಿಕೇಂದ್ರೀಕರಣವನ್ನು ಒಪ್ಪಿಕೊಂಡರೆ ಏನೂ ತೊಂದರೆ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವವರು ತಾಲ್ಲೂಕ್ ಪಂಚಾಯಿತಿಯವರು, ನಗರಪ್ರದೇಶಗಳಲ್ಲಿ ಯಾರು ಮಾಡುತ್ತಾರೆ ಎನ್ನುವುದರ ಬಗ್ಗೆ ಆ್ಯಕ್ಟ್‌ನಲ್ಲಿ ಕ್ಲಿಯರ್ ಆಗಿ ಇಲ್ಲ. ಆ ಅಧಿಕಾರವನ್ನು ಯಾವ ಆಶ್ರಯ ಸಮಿತಿಗೆ ಕೊಡುತ್ತೀರಾ ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ನೋಟಿಫಿಕೇಶನ್ ಕಾಪಿಯನ್ನು ನಾನು ಕೊಡುತ್ತೇನೆ. ಗ್ರಾಮಸಭೆ ಇರಬಹುದು, ನಗರಸಭೆ ಇರಬಹದು, ಗ್ರಾಮಾಂತರ ಪ್ರದೇಶ ಇರಬಹುದು, ಅದರಲ್ಲಿ ಎಲ್ಲಿಯೂ ಯಾರೂ ಸಹ ಅರ್ಜಿಯನ್ನು ಕೊಡದೆ, ಅಲ್ಲಿ ಫಲಾನುಭವಿಗಳು ಲಭ್ಯವಿಲ್ಲದೆ ಹೋದರೆ ಆಗ ನಿಜವಾದ ಅರ್ಹ ಫಲಾನುಭವಿಗಳನ್ನು ಹುಡುಕಿ ಅವರಿಗೆ ಕೊಡುವಂತಹ ಅಧಿಕಾರ ಸಮಿತಿಗೆ ಇದೆ. ಅದರ ಬಗ್ಗೆ ಒಂದು ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಅದನ್ನು ಕಳುಹಿಸಿ ಕೊಟ್ಟಿದ್ದೇನೆ. ತಾವು ಇನ್ನು ಏನಾದರೂ ಮಾಡಿಫಿಕೇಶನ್ ಮಾಡಬೇಕು ಎಂದು ಸಲಹೆ ಕೊಟ್ಟರೆ ಅದನ್ನು ಸಹ ಮಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಅವರು ನಗರಸಭೆ ವಿಷಯದಲ್ಲಿ ಪ್ರಸ್ತಾಪ ಮಾಡಿದರು. ಅಲ್ಲಿ ಗ್ರಾಮಸಭೆಯ ಪರಿಕಲ್ಪನೆ ನಗರದ ಪ್ರಾಧಿಕಾರದಲ್ಲಿ ಇಲ್ಲ. ಆದುದರಿಂದ, ಅಲ್ಲಿ ನಗರಸಭೆ ತಯಾರು ಮಾಡತಕ್ಕ ಫಲಾನುಭವಿಗಳು ಪಟ್ಟಿ ಇದ್ದರೆ ಅದನ್ನು ತಾವು ಪರಾಂಬರಿಸಬೇಕು.

ಡಾ: ಎಂ.ಪಿ. ಕರ್ಕಿ : ಅಧ್ಯಕ್ಷರೆ, ಒಂದು ತಾಲ್ಲೂಕಿನಲ್ಲಿ ಒಂದಕ್ಕಿಂತ ಹೆಚ್ಚು ಶಾಸಕರು ಇರುವ ಸಂದರ್ಭದಲ್ಲಿ, ಎರಡು ಮೂರು ಜನ ಶಾಸಕರು ಇದ್ದರೆ ಅವರನ್ನು ಈ ಸಮಿತಿಯಲ್ಲಿ ಸೇರಿಸಿದರೆ ಒಳ್ಳೆಯದಾಗುತ್ತದೆ. ಇಲ್ಲದೆ ಹೋದರೆ ಒಬ್ಬ ಶಾಸಕರಿಗೆ ಇನ್ನೊಬ್ಬ ಶಾಸಕರು ಇರತಕ್ಕ ಕ್ಷೇತ್ರದ ಪರಿಚಯ ಇರುವುದಿಲ್ಲ. ಈ ಒಂದು ತಿದ್ದುಪಡಿಯನ್ನು ಆಶ್ರಯ, ಆರಾಧನಾ ಮುಂತಾದ ಸಮಿತಿಗಳಲ್ಲೂ ಮಾಡತಕ್ಕ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಒಂದು ನಗರವ್ಯಾಪ್ತಿಯಲ್ಲಿ ಬರತಕ್ಕವರು ಎಲ್ಲರೂ ಸಹ ಸದಸ್ಯರಾಗಿದ್ದಾರೆ. ಹೆಚ್ಚಿನ ಪ್ರದೇಶವನ್ನು ಪ್ರತಿನಿಧಿಸತಕ್ಕಂಥ ಶಾಸಕರು ಅಧ್ಯಕ್ಷರಾಗಿದ್ದಾರೆ. ಇದರ ಬಗ್ಗೆ ಏನೂ ತೊಂದರೆ ಇಲ್ಲ. ಈಗ ಸಿ.ಎಂ. ಲಿಂಗಪ್ಪನವರೂ ಮಾತನಾಡುತ್ತಾರೆ, ಆಮೇಲೆ ಯೋಗೀಶ್‌ಭಟ್ ಮಾತನಾಡುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಸುತ್ತೋಲೆಯಲ್ಲಿ ಎಲ್ಲಾ ಸ್ಪಷ್ಟವಾಗಿದೆ. ಭೌಗೋಳಿಕವಾಗಿ ಹೆಚ್ಚಿನ ಪ್ರದೇಶವನ್ನು ಪ್ರತಿನಿಧಿಸತಕ್ಕವರು ಅಧ್ಯಕ್ಷರಾಗಿದ್ದಾರೆ. ಸ್ವಲ್ಪ ಭಾಗವನ್ನು ಪ್ರತಿನಿಧಿಸತಕ್ಕವರು ಮತ್ತೊಬ್ಬ ಸಹಅಧ್ಯಕ್ಷರಾಗಿ ಇದ್ದಾರೆ. ತಾಲ್ಲೂಕು ಪಂಚಾಯಿತಿಯವರು ಉಪಾಧ್ಯಕ್ಷರಾಗಿದ್ದಾರೆ. ಎಲ್ಲಾ ಸ್ಪಷ್ಟವಾಗಿ ಇದೆ.

ಅಧ್ಯಕ್ಷರು : ಮುಂದೆ, ಸಿ.ಎಂ. ಲಿಂಗಪ್ಪ, ಮತ್ತು ಯೋಗಿಶ್‌ಭಟ್ ಅವರು ಮಾತನಾಡಲಿ, ನೀವು ಲಂಚ್ ಸಮಯದೊಳಗೆ ಮುಗಿಸಬೇಕು.

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದ ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳ ಅನುದಾನದ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು : ಯಾವುದರ ಮೇಲೆ ನೀವು ಮಾತನಾಡುತ್ತಿದ್ದೀರಾ? ಶಿಕ್ಷಣ ನಾವು ಮೂವ್ ಮಾಡಿದ್ದೇವಾ? ಈಗ ನಗರಾಭಿವೃದ್ಧಿ ಮತ್ತು ವಸತಿ ಇದರ ಬಗ್ಗೆ ಮಾತನಾಡುತ್ತಿದ್ದೇವೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆನೇ ಉನ್ನತ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತನಾಡುತ್ತೇನೆ ಎಂದು ಮನವಿ ಕೊಟ್ಟಿದ್ದೇನೆ.

ಅಧ್ಯಕ್ಷರು : ಏನು ಲಿಂಗಪ್ಪನವರೇ, ಏನು ಡಿಮ್ಯಾಂಡ್ ನಡೆಯುತ್ತಿದೆ, ಎಂದು ನಿಮಗೆ ಗೊತ್ತಿಲ್ಲ, ಅಜೆಂಡಾ ನೋಡುವುದಿಲ್ಲ. ಹೌಸ್‌ಗೆ ತಯಾರಿ ಮಾಡಿ ಕೊಂಡು ಬರುವುದಿಲ್ಲ. I have not seen you in the House at all. ನೀವು ಹೌಸ್‌ಗೆ ಬರುವುದಿಲ್ಲ. ಎಲ್ಲೋ ಅಕಸ್ಮಾತ್ ಬಂದು 10 ನಿಮಿಷ ಕುಳಿತುಕೊಳ್ಳುತ್ತೀರಿ,

ಶ್ರೀ ಸಿ.ಎಂ. ಲಿಂಗಪ್ಪ : ಮೊನ್ನೆಯಿಂದ ಇದೇ ವಿಷಯಕ್ಕಾಗಿ ಕಾಯ್ದುಕೊಂಡು ಇಲ್ಲೇ ಕುಳಿತುಕೊಂಡಿದ್ದೇನೆ.

ಅಧ್ಯಕ್ಷರು : ಯಾವ ಸದಸ್ಯರು ಎಷ್ಟು ಹೊತ್ತಿಗೆ ಬರುತ್ತಾರೆ. ಎಷ್ಟು ಹೊತ್ತಿಗೆ ಹೋಗುತ್ತಾರೆ, ಯಾರು ಹೌಸ್‌ಗೆ ಬರದೇ ಹಾಗೆ ಸಹಿ ಮಾಡಿ ಹೋಗುತ್ತಾರೆ, ಯಾರು ಬೆಳಿಗ್ಗೆ ಬಂದರೆ ರಾತ್ರಿತನಕ ಕುಳಿತಿರುತ್ತಾರೆ ಎರಡೂ ಜಾತಕ ನನ್ನ ಹತ್ತಿರ ಇದೆ. ಅರ್ಧ ಗಂಟೆ ನನ್ನ ಹತ್ತಿರ ಬಂದು ಕುಳಿತುಕೊಳ್ಳಿ ಒಬ್ಬೊಬ್ಬರ ವೈಯಕ್ತಿಕ ಜಾತಕವನ್ನು ಹೇಳುತ್ತೇನೆ.

12.40 ಪಿ.ಎಂ.

ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಇತ್ತೀಚೆಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್ ಕುರಿತಾಗಿ ಅವರು ಆ ಮಾತನ್ನು ಆಡಿದ್ದರು. ಇಲ್ಲಿಯತನಕ ಅವುಗಳಿಗೆ ಆರ್ಥಿಕ ಶಕ್ತಿಯನ್ನು ಮತ್ತು ಅಧಿಕಾರ ವ್ಯಾಪ್ತಿಯನ್ನು ಕೊಟ್ಟಿಲ್ಲ. ಎಲ್ಲಿಯತನಕ ಅವುಗಳನ್ನು ನಾವು ಕೊಡುವುದಿಲ್ಲವೋ ಅಲ್ಲಿಯತನಕ ನಿಜವಾದ ಅರ್ಥದಲ್ಲಿ ಈ ದೇಶ ಅಭಿವೃದ್ಧಿಯನ್ನು ಕಾಣಲಿಕ್ಕೆ ಅಸಾಧ್ಯ. ಬಹುಶಃ ಸ್ಥಳೀಯವಾದಂತಹ ಆಡಳಿತ ಸಂಸ್ಥೆಗಳ ಕುರಿತಾಗಿ ಈ ಮಾತನ್ನು ಅವರು ಹೇಳಿದ್ದಾರೆಂದು ನನ್ನ ನಂಬಿಕೆ ಇದರಲ್ಲಿ ಮುಖ್ಯವಾಗಿ ಬರುವಂಥಾದ್ದು ನಗರಪಾಲಿಕೆ ಮತ್ತು ಮಹಾನಗರಪಾಲಿಕೆಗಳು.ಇಂತಹವುಗಳ ಕುರಿತು ಅವರು ಅದೇ ಭಾವನೆಯನ್ನು ಪ್ರಕಟ ಮಾಡಿದ್ದಾರೆ ಎನ್ನುವಂತಹ ಅರ್ಥ ಬರುವ ರೀತಿಯಲ್ಲಿ ಅವರು ಹೇಳಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ಬಂದಿರುವಂತಹ ಒಂದು ಸಮಸ್ಯೆ ಏನು ಎಂದು ಹೇಳಿದರೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಆರ್ಥಿಕ ಶಕ್ತಿಯನ್ನು ಕೊಡುವ ಬಗ್ಗೆ, ನಮ್ಮ ಕಡೆಯಿಂದ ಯಾವುದೇ ರೀತಿಯಾದ ಒಂದು ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಇತ್ತೀಚೆಗೆ ಮಾನ್ಯ ಉಪ ಮುಖ್ಯಮಂತ್ರಿಗಳೂ ಹಾಗೂ ಅರ್ಥ ಮಂತ್ರಿಗಳೂ ಆದ ಶ್ರೀ ಸಿದ್ಧರಾಮಯ್ಯನವರು ರಾಜ್ಯ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ತಮ್ಮ ಬಜೆಟ್ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ಆದರೆ ಇವತ್ತಿನವರೆಗೂ ಅದು ಅನುಷ್ಠಾನಕ್ಕೆ ಬಂದಿಲ್ಲ. ನಾನು ಒಂದು ವಿಷಯ ಹೇಳುವಂಥಾದ್ದು ಏನೆಂದರೆ, ನಗರಪಾಲಿಕೆ, ಮಹಾ ನಗರಪಾಲಿಕೆ ಅಥವಾ ನಗರ ಪ್ರದೇಶಗಳಿಂದ ಸುಮಾರು ಶೇಕಡ 65-70 ರಷ್ಟು ಸೇಲ್ಸ್ ಟ್ಯಾಕ್ಸ್ ಇರಬಹುದು, ಎಕ್ಸೈಜ್ ಟ್ಯಾಕ್ಸ್ ಇರಬಹುದು, ಈ ರೀತಿ ಬೇರೆ ಬೇರೆ ವಿಭಾಗಗಳಿಂದ ಬರುವಂತಹ ಆದಾಯ ದೊರೆಯದಿದ್ದರೆ ಇವತ್ತು ಎಲ್ಲಾ ರೀತಿಯಲ್ಲೂ ನಗರ ಪ್ರದೇಶಗಳು ಕಡೆಗಣಿಸಲ್ಪಟ್ಟಿವೆ. ತಮ್ಮ ಸ್ವಂತ ಆರ್ಥಿಕ ಶಕ್ತಿಯಿಂದ ಸ್ವಾವಲಂಬಿಯಾಗಿ ಆಡಳಿತ ನಡೆಸುವಂತಹ ಸ್ಥಿತಿಯಲ್ಲಿ ಅವುಗಳು ಇಲ್ಲ. ಆದುದರಿಂದ, ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ರಾಜ್ಯ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತಂದೇ ತರುತ್ತೇವೆ ಎನ್ನುವಂತಹ ಏನೊಂದು ಆಶ್ವಾಸನೆಯನ್ನು ಸರ್ಕಾರ ಕೊಟ್ಟಿದೆ, ಅದನ್ನು ತಕ್ಷಣವೇ

ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಲಿಕ್ಕೆ ಇಚ್ಛಿಸುತ್ತೇನೆ. ಉದಾಹರಣೆಗೆ ಮಂಗಳೂರು ಮಹಾ ನಗರಪಾಲಿಕೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಇಲ್ಲಿ ರೋಡ್ ಟ್ಯಾಕ್ಸ್ ಮೂಲಕ ಸುಮಾರು 20 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ. ಆದರೆ ನಗರಪಾಲಿಕೆ, ಮಹಾ ನಗರಪಾಲಿಕೆಗೆ ಸರ್ಕಾರ ಕೊಡುವಂತಹ ಅನುದಾನ ಕೇವಲ 15-20 ಲಕ್ಷ ರೂಪಾಯಿಗಳು ಮಾತ್ರ. ಈ ಅಲ್ಪ ಹಣದಲ್ಲಿ ಯಾವ ರೀತಿ ರಸ್ತೆ ರಿಪೇರಿ ಮಾಡಬಹುದು, ಯಾವ ರೀತಿಯಲ್ಲಿ ಅದನ್ನು ಅಭಿವೃದ್ಧಿಗೊಳಿಸಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆ. ಇವತ್ತು ನಮಗೆ ಕನಿಷ್ಟ 6 ಕೋಟಿ ರೂಪಾಯಿಗಳು ಬೇಕಾಗಿದೆ. ಆದುದರಿಂದ, ನಾನು ಸರ್ಕಾರವನ್ನು ಕೇಳುವುದಿಷ್ಟೇ, ರೋಡ್ ಟ್ಯಾಕ್ಸ್‌ನಲ್ಲಿಯೂ ಕೂಡ ಕನಿಷ್ಟ ಶೇಕಡ 30ರಷ್ಟನ್ನಾದರೂ ಕೊಡುವಂತಹ ಒಂದು ನಿರ್ಣಯವನ್ನು ಸರ್ಕಾರ ಇವತ್ತು ತೆಗೆದುಕೊಳ್ಳಬೇಕು. ಉಳಿದ ಶೇಕಡ 70ರಷ್ಟು ಹಣ ಬೇರೆ ಬೇರೆ ಇಲಾಖೆಗಳ ಚಟುವಟಿಕೆಗಳಿಗೆ ಅಥವಾ ರಾಜ್ಯದ ಅಭಿವೃದ್ಧಿಗೆ ಹೋಗಲಿ. ರೋಡ್ ಟ್ಯಾಕ್ಸ್‌ನಲ್ಲಿ ಕನಿಷ್ಟ ಶೇಕಡ 30 ರಷ್ಟು ಹಣವನ್ನು ಸ್ಥಳೀಯ ರಸ್ತೆಗಳ ಅಭಿವೃದ್ಧಿಗೋಸ್ಕರ ಕೊಡಲಿಕ್ಕೆ ಮೋಟಾರ್ ವಾಹನ ಕಾಯಿದೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಬೇಕೆಂಬ ಒಂದು ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ವಿಶೇಷವಾಗಿ ಮಹಾ-ನಗರಪಾಲಿಕೆಯಲ್ಲಿ ವಾಹನಗಳ ಸಾಂದ್ರತೆಗಳು ಹೆಚ್ಚು ಇರುವುದರಿಂದ ಅಲ್ಲಿರುವಂತಹ ರಸ್ತೆಗಳನ್ನು ಹಂತ-ಹಂತವಾಗಿ ಕಾಂಕ್ರೀಟೀಕರಣ ಮಾಡಬೇಕಾಗಿದೆ. ಈ ಕಾರ್ಯಕ್ಕೋಸ್ಕರ ಮೋಟಾರ್ ವಾಹನ ಕಾಯಿದೆಯ ಕಲಂ 19ನ್ನು ಮಹಾ ನಗರಪಾಲಿಕೆಗೆ ಅನುಕೂಲವಾಗುವಂತೆ ಪರಿಷ್ಕರಣ ಮಾಡಬೇಕೆಂದೂ ಕೂಡ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಮೂಲಕ ಯಾವುದೇ ವಾಹನಗಳನ್ನು ರಿಜಿಸ್ಟರ್ ಮಾಡುವ ಹಂತದಲ್ಲಿ ಈ ವಾಹನಗಳ ಕೆಪಾಸಿಟಿಗೆ ಅನುಗುಣವಾಗಿ ಒಂದು ನಿಶ್ಚಿತವಾದ ಮೊತ್ತವನ್ನು ಮಹಾ ನಗರಪಾಲಿಕೆಗೆ ರೆವಿನ್ಯೂ ಆಧಾರದಲ್ಲಿ ಒದಗಿಸುವುದಕ್ಕೆ ಸಾಧ್ಯತೆ ಇದೆ. ಇನ್ನೊಂದು ವಿಚಾರವೆಂದರೆ, ಮಂಗಳೂರು ಮಹಾ ನಗರಪಾಲಿಕೆಯ ಸುತ್ತಮುತ್ತಲೂ ಇರುವಂತಹ ಪ್ರದೇಶಗಳಲ್ಲಿ ಅನೇಕ ಮೆಗಾ ಇಂಡಸ್ಟ್ರೀಸ್ ಬಂದಿರುವಂತಹ ಹಿನ್ನೆಲೆಯಲ್ಲಿ ಅಲ್ಲಿ ಬರುವಂತಹ ವಾಹನಗಳ ಒತ್ತಡ, ಇದೆಲ್ಲವನ್ನೂ ಪರಿಗಣಿಸಿ ನಾನು ಹೇಳುವಂತಾದ್ದು ಇಷ್ಟೇ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರ ಸಮ್ಮುಖದಲ್ಲಿ ಇಲ್ಲಿರುವಂತಹ ಅನೇಕ ಶಾಸಕ ಮಿತ್ರರು, ಮಂತ್ರಿಗಳ ಉಪಸ್ಥಿತಿಯಲ್ಲಿ ನಡೆದಂತಹ ಚರ್ಚೆ ಸಂದರ್ಭದಲ್ಲಿ ಟರ್ನ್ ಓವರ್ ಸೆಸ್ ಅಥವಾ ಬೆಟರ್ ಮೆಂಟ್ ಸೆಸ್ ಎಂದು ಹೇಳಿಕೊಂಡು ಕನಿಷ್ಟ ಶೇಕಡ ಎರಡರಷ್ಟನ್ನಾದರೂ ಕೊಡಬೇಕೆಂದು ಹೇಳಿ ಒಂದು ಪ್ರಸ್ತಾವವನ್ನು ನಾನು ಮಂಡಿಸಿದ್ದೆ. ವಿಶೇಷವಾಗಿರುವಂತಹ ಈ ಮೆಗಾ ಇಂಡಸ್ಟ್ರೀಸ್‌ಗಳಿಂದ ನಮಗೆ ಕಡ್ಡಾಯ ಧನವಾಗಿ ಕನಿಷ್ಟ ಶೇಕಡಾ ಎರಡರಷ್ಟು ಸೆಸ್ ಆದರೂ ನಮಗೆ ಬರಬೇಕೆಂದು ಹೇಳಿ ನಾನು ಆಗ್ರಹವನ್ನು ಮಾಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಅನೇಕ ಮಂತ್ರಿಗಳೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ಆದರೆ ಅದು ಅನುಷ್ಠಾನಕ್ಕೆ ಬಂದಿಲ್ಲ. ಬಹುಶಃ ಈ ಶೇಕಡ 2 ರಷ್ಟು ಸೆಸ್ ಅನ್ನು ಸಂಗ್ರಹ ಮಾಡಿ ಅಭಿವೃದ್ಧಿ ಶುಲ್ಕವೆಂದು ಮಹಾ ನಗರಪಾಲಿಕೆಗೆ ಅಥವಾ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿಕ್ಕಿದಾಗ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಒಂದು ಆರ್ಥಿಕ ಶಕ್ತಿಯನ್ನು ಕೊಟ್ಟು ಹಾಗಾಗುತ್ತದೆ. ಇನ್ನೊಂದು ಉದಾಹರಣೆಗೆ ಹೇಳುವುದಾದರೆ,

ವಿಶಾಖಪಟ್ಟಣದಲ್ಲಿರುವ ವೈಜಾಕ್ ಪೋರ್ಟ್‌ನಿಂದ ಮಹಾ ನಗರಪಾಲಿಕೆಗೆ ಅದರ ಟರ್ನ್‌ಓವರ್ ಮೇಲೆ ಶೇಕಡ 2ರಷ್ಟು ಸೆಸ್ ಅನ್ನು ಅಭಿವೃದ್ಧಿ ಶುಲ್ಕವೆಂದು ಹೇಳಿಕೊಂಡು ಕೊಡುತ್ತಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಇದನ್ನು ಅವರು ಕೊಡುತ್ತಿದ್ದಾರೆ. ಅದರೆ ರಾಜ್ಯದಲ್ಲಿರುವಂತಹ ಒಂದೇ ಒಂದು ಪೋರ್ಟ್ ಆಗಿರುವ ನ್ಯೂ ಮಂಗಳೂರು ಪೋರ್ಟ್‌ಗೆ ಕಳೆದ ಹಲವಾರು ವರ್ಷಗಳಿಂದ ಅಥವಾ ಹಲವಾರು ದಶಕಗಳಿಂದ ಕೆಲಸ ಮಾಡುತ್ತಿದ್ದರೂ ಕೂಡ ಮಹಾ ನಗರಪಾಲಿಕೆಗೆ ಯಾವುದೇ ರೀತಿಯ ಸೆಸ್ ಅನ್ನು ಕೊಡುತ್ತಿಲ್ಲ ಅಥವಾ ಬೆಟರ್‌ಮೆಂಟ್ ಸೆಸ್ ಅಥವಾ ಅಭಿವೃದ್ಧಿ ಶುಲ್ಕವನ್ನೂ ಕೂಡ ಕೊಡುತ್ತಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಈ ಒಂದು ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತುಕತೆ ನಡೆಸಿಕೊಂಡು ಈ ರೀತಿಯಲ್ಲಿ ಮಹಾ ನಗರಪಾಲಿಕೆಗೆ ಶುಲ್ಕವನ್ನು ಕೊಡುವ ಬಗ್ಗೆ ಸನ್ಮಾನ್ಯ ಸಚಿವರು ಕಾಳಜಿ ವಹಿಸಿ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಬಗ್ಗೆ ತಾವು ಪ್ರಯತ್ನ ಮಾಡುತ್ತೀರಿ ಎಂಬ ವಿಶ್ವಾಸಕೂಡ ನನಗೆ ಇದೆ. ಉತ್ತರ ನೀಡುವ ಸಂದರ್ಭದಲ್ಲಿ ಖಂಡಿತ ತಮ್ಮಿಂದ ಈ ಮಾತನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ಮಹಾ ನಗರಪಾಲಿಕೆ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಹಾಗೆಹೇಳುವುದಾದರೆ ಪ್ರಾಧಿಕಾರದ ವ್ಯಾಪ್ತಿಗೆ ಬಂದಿರುವಂತಹ ಈ ಮೆಗಾ ಇಂಡಸ್ಟ್ರೀಸ್ ಯಾವುವು ಇವೆ, ಇವತ್ತು ಯಾವುದೇ ಕಾನೂನನ್ನು ಪಾಲನೆ ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಎಂ.ಆರ್.ಪಿ.ಎಲ್. ಸಂಸ್ಥೆ, ಬಿ.ಎಸ್.ಎಫ್. ಸಂಸ್ಥೆ, ಹೆಚ್.ಪಿ.ಸಿ.ಎಲ್. ನಂತಹ ಇಂಡಸ್ಟ್ರೀಸ್‌ಗಳು ಯಾವುವು ಇವೆ ಅವು ಬೃಹತ್ ಕಟ್ಟಡಗಳನ್ನು ಕಟ್ಟಿದ್ದಾರೆ. ಯಾವುದೇ ರೀತಿಯಲ್ಲೂ ಅವು ಕೊಡಬೇಕಾದ ಬೆಟರ್‌ಮೆಂಟ್ ಸೆಸ್ ಆಗಲೀ ಅಥವಾ ವಾಟರ್ ಅಗ್ ಮೆಂಟೇಷನ್ ಚಾರ್ಜಸ್ ಇವುಗಳನ್ನೆಲ್ಲಾ ಕೊಟ್ಟಿಲ್ಲ. ಕೇವಲ ಎಂ.ಆರ್.ಪಿ.ಎಲ್. ಸಂಸ್ಥೆಯೊಂದೇ 18 ಕೋಟಿ 16ಲಕ್ಷ ರೂಪಾಯಿಗಳ ಬಾಕಿ ಉಳಿಸಿಕೊಂಡಿದೆ. ಆ ಬಗ್ಗೆ ನಾವಿಲ್ಲಿ ಪದೇ ಪದೇ ಉಲ್ಲೇಖ ಮಾಡಿದ್ದರಿಂದ ಅವರಿಂದ 3 ಕೋಟಿ ರೂಪಾಯಿಗಳನ್ನು ಮಾತ್ರ ಸಂಗ್ರಹ ಮಾಡಲಿಕ್ಕೆ ಸಾಧ್ಯವಾಗಿದೆ. ಆದರೆ ಇನ್ನೂ 15 ಕೋಟಿ 16 ಲಕ್ಷ ರೂಪಾಯಿಗಳ ಬಾಕಿ ಇವತ್ತಿಗೂ ಅವರಿಂದ ಬಂದಿಲ್ಲ. ಇವತ್ತು ಅತ್ಯಂತ ಒಂದು ಗಂಭೀರವಾದಂತಹ ನೀರಿನ ಸಮಸ್ಯೆ ನಗರಪಾಲಿಕೆ ಜನತೆಯನ್ನು ಕಾಡುತ್ತಿದೆ. ಕನಿಷ್ಟ ಈ ಹಣವನ್ನು ಸಂಗ್ರಹ ಮಾಡಿದರೆ ಈ ನೀರು ಸರಬರಾಜು ಯೋಜನೆ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಅದನ್ನು ಉಪಯೋಗಿಸಿದರೆ ಸಾಕಷ್ಟು ಲಾಭವಾಗಬಹುದು. ಈ ನಿಟ್ಟಿನಲ್ಲಿ ನಾನು ಕಳೆದ ಎರಡೂವರೆ ವರ್ಷಗಳಿಂದ ಈ ಬಗ್ಗೆ ಪದೇ ಪದೇ ಉಲ್ಲೇಖ ಮಾಡಿದರೂ ಕೂಡ ಸರ್ಕಾರ ಯಾವುದೇ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಅಷ್ಟು ಮಾತ್ರವಲ್ಲ, ಒಂದು ಹಂತದಲ್ಲಿ ಪ್ರಯತ್ನ ಮಾಡಿ ಅಲ್ಲಿರುವಂತಹ ಅಡ್ಮಿನಿಸ್ಟ್ರೇಟರ್ ಉಪಸ್ಥಿತಿಯಲ್ಲಿ ಸಂಬಂಧಪಟ್ಟ ಕೈಗಾರಿಕೆಗಳ ಪ್ರಮುಖರನ್ನು ಕರೆಯಿಸಿ ಮಾತುಕತೆ ನೆಡೆಸಿ ಇನ್ನೇನು ನಾವು ಆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆನ್ನುವ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಒಂದು ಫ್ಯಾಕ್ಸ್ ಬಂತು. ಯಾವುದೇ ರೀತಿಯಲ್ಲೂ ಇಂಟರ್‌ವಿನ್ ಆಗಬಾರದು, ನಾವು ಅದನ್ನು ಏನು ಮಾಡಬೇಕು ಎಂದು ನಿಶ್ಚಯ ಮಾಡುತ್ತೇವೆ ಎನ್ನುವಂತಹ ರೀತಿಯಲ್ಲಿ ಕೂಡ ಮಾತು ಕೇಳಿಬಂದಿತು. ಈ ಮೆಗಾ ಇಂಡಸ್ಟ್ರೀಸ್‌ಗಳೊಂದಿಗೆ ಸಂಬಂಧಪಟ್ಟ ಇಲಾಖೆಗಳು ಅಥವಾ ಮಂತ್ರಿಗಳು ಯಾವ ರೀತಿಯ ಕಾಳಜಿಯನ್ನು ಇಟ್ಟುಕೊಂಡಿದ್ದಾರೆ ಅಥವಾ ಯಾವರೀತಿ ನಿಮ್ಮಿಬ್ಬರ ನಡುವೆ ಸಂಪರ್ಕ ಇದೆ,

ಅನ್ಯೋನ್ಯತೆ ಇದೆ ಎಂಬುದು ನಮಗೆ ಖಂಡಿತಾ ಗೊತ್ತಿಲ್ಲ. ದಯವಿಟ್ಟು ಇಂತಹ ಅನುಮಾನಕ್ಕೆ ಅವಕಾಶ ಕೊಡಬೇಡಿ. ನ್ಯಾಯಯುತವಾಗಿ ಸಂಗ್ರಹ ಮಾಡಬೇಕಾದ ಹಣವನ್ನು ಖಂಡಿತ ಸಂಗ್ರಹ ಮಾಡಬೇಕು. ಅದನ್ನು ಸಂಗ್ರಹಿಸಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೊಡಲಿ, ಖಂಡಿತಾ ಇದರಿಂದ ನಿಜವಾದ ಅರ್ಥದಲ್ಲಿ ಅಭಿವೃದ್ಧಿಗೊಳಿಸಲಿಕ್ಕೆ ಸಾಧ್ಯತೆ ಇದೆ ಎಂಬ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಚ್ಛಿಸುತ್ತೇನೆ. ಅನಂತರ ವಿಶೇಷವಾಗಿ ಆರ್ಥಿಕವಾಗಿ ನೆರವು ಕೊಡಬಲ್ಲ ಅನೇಕ ವಾಣಿಜ್ಯ ಸಂಕೀರ್ಣಗಳನ್ನು ಮಹಾ ನಗರಪಾಲಿಕೆ ಅಥವಾ ನಗರಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟುವಂತಹ ಕಾರ್ಯಕ್ರಮಗಳಾಗುತ್ತಿವೆ. ಆದರೆ ಈ ಬಗ್ಗೆ ಕೆಲವು ನಿಬಂಧನೆಗಳನ್ನು ಈ ಸಂದರ್ಭದಲ್ಲಿ ಹೆಚ್.ಯು.ಡಿ. ಇಲಾಖೆ ಹಾಕುತ್ತಿದೆ. ವಿಶೇಷವಾಗಿ ರೈಟ್ಸ್ ಸಂಸ್ಥೆಯಿಂದಲೇ ಅಥವಾ ಇಂಥಿಂಥ ಸಂಸ್ಥೆಯಿಂದಲೇ ಅದನ್ನು ಮಾಡಿಸಬೇಕೆಂದು ನಿಬಂಧನೆ ಹಾಕಲಾಗುತ್ತಿದೆ. ಉಸ್ತುವಾರಿ ಅಥವಾ ಸೂಪರ್‌ವೈಸರಿ ಚಾರ್ಜಸ್ ಎಂದು ಹೇಳಿ ಶೇಕಡ 17ಕ್ಕಿಂತ ಜಾಸ್ತಿ ಕಲೆಕ್ಟ್ ಮಾಡುತ್ತಿದ್ದಾರೆ. 10 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಾಡಬೇಕೆಂದಿದ್ದರೆ, ಕಟ್ಟಡವನ್ನು ಕಟ್ಟಬೇಕಾಗಿದ್ದರೆ ಸುಮಾರು 1 ಕೋಟಿ 70 ಲಕ್ಷ ರೂಪಾಯಿಗಳು ಉಸ್ತುವಾರಿ ಅಥವಾ ಸೂಪರ್‌ವೈಸರಿ ಚಾರ್ಜಸ್ ಅನ್ನು ಕೊಡುವಂತಹ ಪದ್ಧತಿ ಇದಾಗಿದೆ. ಕನಿಷ್ಟ ಲೀಡಿಂಗ್ ಆರ್ಕಿಟೆಕ್ಟ್ ಕೂಡ ಕೇವಲ ಶೇಕಡ 4 ರಲ್ಲಿ ಮಾಡಿಲಿಕ್ಕೆ ಸಾಮರ್ಥ್ಯ ಇರುವಾಗ ಶೇಕಡ 17 ರಷ್ಟನ್ನು ಸಂಗ್ರಹ ಮಾಡುವುದು ಸರಿಯಲ್ಲ. ಈ ಬಗ್ಗೆ ಸೂಕ್ತವಾದ ಆದೇಶವನ್ನು ಹೊರಡಿಸಬೇಕೆಂದು ಕೋರುತ್ತೇನೆ. ಮಹಾ ನಗರಪಾಲಿಕೆಗಳಿಗೆ ಅಥವಾ ಯಾವುದೇ ಪ್ರಾಧಿಕಾರಗಳಿಗೆ ಇಂತಹ ಮೊತ್ತವನ್ನು ಕಟ್ಟಿಸಿಕೊಳ್ಳುವಾಗ, ಒಂದು ಉದಾಹರಣೆ ಹೇಳುವುದಿದ್ದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಂತಹ ಸಂಸ್ಥೆ ಅವುಗಳಿಂದ ಕೂಡ ಈ ತರಹದ ಸಮಸ್ಯೆಗಳು ಬರುತ್ತಿವೆ. ಇಂತಹ ನಿಬಂಧನೆಗಳ ಬಗ್ಗೆ ಖಂಡಿತ ತಾವು ಹೆಚ್ಚಿನ ಗಮನ ಹರಿಸಬೇಕು ಮತ್ತು ಈ ತರಹ ಹೆಚ್ಚಿನ ಸೂಪರ್‌ವೈಸರಿ ಚಾರ್ಜಸ್ ಅನ್ನು ಹಾಕುವಂತಾದ್ದರ ಬಗ್ಗೆ ಸರ್ಕಾರ ಇಂಟರ್‌ವಿನ್ ಆಗಿ ಕೇವಲ ಶೇಕಡ 4ಕ್ಕೆ ಮಾತ್ರ ಅದನ್ನು ಸೀಮಿತಗೊಳಿಸಬೇಕೆಂಬ ಒತ್ತಾಯವನ್ನೂ ಕೂಡ ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಅನೇಕ ಅನಧಿಕೃತ ಕಟ್ಟಡಗಳನ್ನು ಕಟ್ಟುವಂಥಾದ್ದು ಮಹಾ ನಗರಪಾಲಿಕೆಗಳಲ್ಲಿ ನಡೆಯುತ್ತಿದೆ. ಅಕ್ರಮವಾಗಿ ಕಟ್ಟಿದ್ದನ್ನು ಸಕ್ರಮಗೊಳಿಸುವಂತಹ ಒಂದು ನಿಶ್ಚಿತವಾದ ಒಂದು ವ್ಯವಸ್ಥೆ ಇದೆ. ಈ ಸಂದರ್ಭದಲ್ಲಿ ಇವತ್ತು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಯಾವ ಕಾರಣಕ್ಕೋಸ್ಕರ ಇದನ್ನು ವಾಯ್‌ಲೇಟ್ ಮಾಡುತ್ತಿದ್ದಾರೆ. ಅದಕ್ಕೆ ಪ್ಲಾನ್ ಅನ್ನು ಯಾರು ಅಪ್ರೂವ್ ಮಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಮಹಾ ನಗರಪಾಲಿಕೆಗಳಲ್ಲಿ ಇರುವಂತಹ ಇಂಡಿನಿಯರ್‌ಗಳು ಕ್ವಾಲಿಫೈಡ್ ಆಗಿರುವುದಿಲ್ಲ. ಮಂಗಳೂರು ಮಹಾ ನಗರಪಾಲಿಕೆಗೆ ಇತ್ತೀಚೆಗೆ ತಾನೇ ಒಬ್ಬ ಕ್ವಾಲಿಫೈಡ್ ಇಂಜಿನಿಯರ್ ಬಂದಿದ್ದಾರೆ. ಇಲ್ಲಿಯವರೆಗೆ ಅಲ್ಲಿ ಒಬ್ಬ ಡಿಪ್ಲೋಮೋ ಪದವಿ ಪಡೆದಂತಹ ಇಂಜಿನಿಯರ್ ಇದ್ದರು. ದೊಡ್ಡ ದೊಡ್ಡ ಬೃಹತ್ ಕಟ್ಟಡಗಳ ನಕ್ಷೆಗಳನ್ನು ತರಿಸಿಕೊಂಡು ಆ ಪ್ಲಾನಿಂಗ್‌ನಲ್ಲಿ ಅದನ್ನು ಸಬ್‌ಮಿಟ್ ಮಾಡಿಕೊಂಡು ಅದನ್ನು ಅಪ್ರೂವಲ್ ಕೊಡಬೇಕಾದರೆ ಅದರ ಮಾಹಿತಿ ಇಲ್ಲದೇ ಇರುವ ಒಂದು ಟೆಕ್ನಿಕಲ್ ಕ್ವಾಲಿಫಿಕೇಷನ್ ಕೂಡ ಇಲ್ಲದಂತಹ ಇಂಜಿನಿಯರ್‌ಗಳು ಯಾವ ರೀತಿಯಲ್ಲಿ ಅದಕ್ಕೆ ಅಪ್ರೂವಲ್ ಕೊಡಬಹುದು.

ಅಪ್ರೂವಲ್ ಕೊಟ್ಟ ನಂತರ ಸಮರ್ಪಕವಾಗಿ ಕಟ್ಟಡ ಆಗುತ್ತಿದೆಯೇ ಇಲ್ಲವೋ ಎನ್ನುವುದನ್ನು ಯಾವ ರೀತಿಯಲ್ಲಿ ಉಸ್ತುವಾರಿ ಮಾಡಬಹುದು ಎಂಬುದನ್ನು ಯೋಚಿಸಬೇಕಾಗುತ್ತದೆ. ಈ ಬಗ್ಗೆ ನಾವು ನಿಜವಾಗಿ ಆತ್ಮಾವಲೋಕನ ಮಾಡಬೇಕಾಗಿದೆ. ಅಷ್ಟು ಮಾತ್ರವಲ್ಲ, ಈ ಎಲ್ಲಾ ಸಂದರ್ಭದಲ್ಲಿ ಇದಕ್ಕೆ ಸಮರ್ಪಕವಾದ ತಾಂತ್ರಿಕ ಜ್ಞಾನವುಳ್ಳ ಇಂಜಿನಿಯರುಗಳನ್ನು ಅಲ್ಲಿ ನೇಮಿಸಬೇಕಾಗಿದೆ. ಕೇವಲ ಮಹಾ ನಗರಪಾಲಿಕೆಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ನಾನು ಇದನ್ನು ಹೇಳುತ್ತಿಲ್ಲ. ಇನ್ನು ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮಂಗಳೂರು ಮಹಾನಗರ ಪಾಲಿಕೆ ಅನೇಕ ಕಾರಣಗಳನ್ನು ಹೇಳುತ್ತಿದೆ. ನನಗೆ ತಿಳಿದಿರುವ ಹಾಗೆ ಮಹಾನಗರ ಪಾಲಿಕೆಯವರು ಕೊಡಬೇಕಾದ ಪೂರ್ತಿ ಹಣವನ್ನು ಕೊಟ್ಟಿದ್ದಾರೆ. ಅಷ್ಟಾದರೂ ಕೂಡ ಎಲ್.ಐ.ಸಿ. ಅಥವಾ ಅದಕ್ಕೆ ಸಮಾನಾಂತರ ಲೋನ್‌ನ್ನು ಯಾವುದು ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳಲು ಏಕೆ ವಿಳಂಬ ಆಗುತ್ತಿದೆಯೋ ಗೊತ್ತಾಗಲಿಲ್ಲ. ಬಹುಶಃ ಇವೊತ್ತು ಸಮರೋಪಾದಿಯಲ್ಲಿ ನಾವು ಈ ಕಾರ್ಯವನ್ನು ಮಾಡಿದರೆ ಮಾತ್ರ ನಮ್ಮ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ. ಆದರೆ, ಇದರ ಬಗ್ಗೆ ಎಷ್ಟು ಶೀಘ್ರದಲ್ಲಿ ಕೆಲಸ ಆಗಬೇಕು ಅಷ್ಟು ಶೀಘ್ರದಲ್ಲಿ ಕೆಲಸ ಆಗುತ್ತಿಲ್ಲ ಎಂಬ ಬೇಸರವನ್ನು ಈ ಸಂದರ್ಭದಲ್ಲಿ ನಾನು ಹೇಳಲು ಇಚ್ಛಿಸುತ್ತೇನೆ. ಅದೇ ಸಂದರ್ಭದಲ್ಲಿ ಕುಡಿಯುವ ನೀರಿನ ಮೂಲ ಆಗಿರುವಂತಹ ನೇತ್ರಾವತಿ ನದಿ ನೀರಿನ ಮೇಲೆ ವೆಂಟೆಡ್ ಡ್ಯಾಮ್‌ನ್ನು ಕಟ್ಟಿದ್ದಾರೆ. ಆ ವೆಂಟೆಡ್ ಡ್ಯಾಮಿನ ಅಸ್ಥಿತ್ವ ಇವೊತ್ತು ಅಪಾಯದ ಸ್ಥಿತಿಯಲ್ಲಿ ಇದೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್‌ನವರು ಆ ವೆಂಟೆಡ್ ಡ್ಯಾಮನ್ನು ಕಟ್ಟಿದರು. ಆ ಡ್ಯಾಂ ಕಟ್ಟುವಾಗ ಅನೇಕ ಕಂಬಗಳಲ್ಲಿ ಬಿರುಕು ಬಿದ್ದಿರುವುದರಿಂದ, ಶೇಖರಣೆ ಆಗುವಂಥ ನೀರು ಯಾವಾಗ ಸೋರಿ ಹೋಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಶಾಸನಸಭೆಯಲ್ಲಿ ಅದರ ಬಗ್ಗೆ ಆಗುವಂಥ 30 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ಮಾಡಿಕೊಂಡು ದುರಸ್ತಿಗೊಳಿಸುವಂತಹ ಕಾರ್ಯವನ್ನು ಮಾಡಬೇಕೆಂದು ಒತ್ತಾಯ ಮಾಡಿದ್ದೆ. ಆದರೆ, ಕಳೆದ ವರ್ಷ ಡಿಸೆಂಬರ್ ತನಕ ಅದು ಪೂರ್ತಿ ಆಗಲಿಲ್ಲ. ಆದಕಾರಣ ಈ ಡಿಸೆಂಬರ್ ಒಳಗೆ ಅದನ್ನು ಮುಗಿಸುವ ಜವಾಬ್ದಾರಿಯನ್ನು ಮಾನ್ಯ ಸಚಿವರು ಹಾಗೂ ಸರ್ಕಾರ ಹೊತ್ತುಕೊಂಡು ಅದನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅದು 25 ವರ್ಷಗಳ ಹಿಂದಿನಿಂದ ಇರುವಂತಹ ಪಂಪು. ಆ ಪಂಪಿನ ಡಿಸ್‌ಚಾರ್ಜ್ ಕಡಿಮೆಯಾಗಿದೆ. ಕಳೆದ ಸಾರಿ ಇದಕ್ಕೆ ಸಂಬಂಧಪಟ್ಟ ಹಾಗೆ ಟೆಂಡರ್ ಕೂಡ ಕರೆದಿದ್ದು ಆಗಿದೆ. ಆದರೆ, ಪಂಪನ್ನು ಒದಗಿಸಲಿಕ್ಕೆ ಸರ್ಕಾರ ವಿಫಲವಾಗಿದೆ. ಬಹುಶಃ ಮಳೆಗಾಲದಲ್ಲಿ ಈ ಪಂಪನ್ನು ಒದಗಿಸಿದರೆ ಅಥವಾ ಅಳವಡಿಸಿದರೆ ಕಾರ್ಯಚಟುವಟಿಕೆಯನ್ನು ಮಾಡಲಿಕ್ಕೆ ಸಾಧ್ಯವಿದೆ. ಆದರೆ ಇದು ಕೂಡ ಏಕೆ ವಿಫಲವಾಗಿದೆ ಎಂದು ಸರಿಯಾಗಿ ಗೊತ್ತಿಲ್ಲ. ಆದಕಾರಣ, ತಕ್ಷಣ ಅದರ ಬಗ್ಗೆ ಗಮನಹರಿಸಬೇಕು ಎಂದು ಹೇಳುತ್ತೇನೆ. ಇನ್ನು 25 ವರ್ಷಗಳ ಹಿಂದಿನಿಂದ ಇರುವಂಥ ಒಳಚರಂಡಿ ವ್ಯವಸ್ಥೆ ಯೋಜನೆ ಇವೊತ್ತು ಪೂರ್ತಿ ಅವ್ಯವಸ್ಥಿತವಾಗಿ ಅನೇಕ ರೋಗ ರುಜಿನುಗಳಿಗೆ ಕಾರಣವಾಗಿದೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಕೂತ್ಕೊಂಡು ಯಾವ ರೀತಿ ಕಾರ್ಯವನ್ನು ಮಾಡಬೇಕೆಂದು ಯೋಚನೆ ಮಾಡಿದಾಗ ಅದಕ್ಕೆ ಸಂಬಂಧಪಟ್ಟ ಯೋಜನೆ ಕೂಡ ಹಾಕಲಾಯಿತು. ಅದನ್ನು ಟಾಟಾ ಕನ್‌ಸ್ಲೆಟೆನ್ಸಿಯವರ ಮೂಲಕ

ಸಮಗ್ರವಾಗಿ ಅಧ್ಯಯನ ಮಾಡಿಕೊಂಡು ಅದಕ್ಕೆ ಹಣವನ್ನು ಎ.ಡಿ.ಬಿ. ಮೂಲಕ ಅಥವಾ ವರ್ಲ್ಡ್ ಬ್ಯಾಂಕಿನ ಮೂಲಕ ಬಿಡುಗಡೆ ಮಾಡಿ ಅದನ್ನು ಅನುಷ್ಠಾನಗೊಳಿಸುವ ಹಾಗೂ ಅಭಿವೃದ್ಧಿಗೊಳಿಸುವ ಚಿಂತನೆ ಕೂಡ ಆ ಸಂದರ್ಭದಲ್ಲಿ ಆಯಿತು. ಆದರೆ ಆಶ್ಚರ್ಯ ಎಂದರೆ ಸುಮಾರು ಒಂದು ವರ್ಷದಿಂದ ಟಾಟಾ ಕನ್ಸಲ್‌ಟೆನ್ಸಿಯವರಿಗೆ ಸಂಬಂಧಪಟ್ಟ ಫೈಲ್ ಹೆಚ್.ಯು.ಡಿ. ಯಲ್ಲಿ ಪೆಂಡಿಂಗ್ ಇದೆ. ಅದನ್ನು ಏಕೆ ಕ್ಲಿಯರ್ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಗೊತ್ತಿಲ್ಲ. ಅದನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಕ್ಲಿಯರ್ ಮಾಡಲು ಸಾಧ್ಯವಾಗಲಿಲ್ಲ. ಅಕಸ್ಮಾತ್ ಅದರಲ್ಲಿ ಏನಾದರೂ ತಪ್ಪು ಇದ್ದರೆ ಅದಕ್ಕೆ ಬದಲಿ ವ್ಯವಸ್ಥೆಯನ್ನಾದರೂ ಮಾಡಬೇಕಾಗಿತ್ತು ಆದರೆ ಬದಲಿ ವ್ಯವಸ್ಥೆ ಮಾಡಲು ಇಲಾಖೆ ವಿಫಲವಾಗಿದೆ. ಹೀಗಾಗುವುದರಿಂದ ದೊಡ್ಡ ಕಾರ್ಯಕ್ರಮಗಳ ಅಭಿವೃದ್ಧಿ ಕುಂಠಿತವಾಗುತ್ತದೆ. ಆದ್ದರಿಂದ ಇದರ ಕಡೆಗೆ ತಕ್ಷಣ ಗಮನಹರಿಸಬೇಕು, ಎಂದು ಒತ್ತಾಯ ಮಾಡುತ್ತೇನೆ. ಇನ್ನೂ ಅನೇಕ ಸಂದರ್ಭಗಳಲ್ಲಿ ಅನಧಿಕೃತ ಕಟ್ಟಡ ಯಾವುದು ಇದೆ ಆ ಕಟ್ಟಡ ಕಟ್ಟಿದಾಗ ಸರ್ವೆ ಸಾಮಾನ್ಯವಾಗಿ ಅಂತಹ ಕಟ್ಟಡ ಉದ್ಘಾಟನೆ ಮಾಡಲು ಮಂತ್ರಿಗಳನ್ನು ಕರೆಯುತ್ತಾರೆ. ಮಂತ್ರಿಗಳು ಅಂತಹ ಸಮುಚ್ಛಗಳಿಗೆ ಕರೆದಾಗ ಕಟ್ಟಡಗಳ ಕಂಪ್ಲೀಷನ್ ರಿಪೋರ್ಟ್ ಆಗಿದೆಯಾ, ಕಾನೂನು-ಬದ್ಧವಾಗಿ ಕಟ್ಟಡ ಕಟ್ಟದ್ದಾರೋ ಇಲ್ಲವೋ ಎಂದು ವಿಚಾರಿಸದೆ ಹೋದರೆ ಅದಕ್ಕೆ ಅಪ್ರತ್ಯಕ್ಷವಾಗಿ ನಾವು ಪ್ರಾಮುಖ್ಯತೆ ಕೊಟ್ಟಹಾಗೆ ಆಗುತ್ತದೆ. ಆದಕಾರಣ ಮಂತ್ರಿಮಹೋದಯರು ಯಾವುದೇ ಉದ್ಘಾಟನಾ ಕಾರ್ಯಕ್ಕೆ ಹೋಗುವಾಗ ಅದನ್ನು ಪರಿಶೀಲಿಸಿ ಅಲ್ಲಿಗೆ ಹೋಗಬೇಕೆಂದು ಒತ್ತಾಯ ಮಾಡುತ್ತೇನೆ. ವಿಶೇಷವಾಗಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಅಷ್ಟೇ ಅಲ್ಲ ಮಹಾನಗರ ಪಾಲಿಕೆಯವರ ಆ್ಯಕ್ಟ್‌ನ್ನು ತಾವು ಅಧ್ಯಯನ ಮಾಡಿದರೆ ಅನೇಕ ರೂಲ್ಸ್ ಇನ್ನೂ ಫ್ರೇಮ್ ಮಾಡಿಲ್ಲ. ಮೇಯರನ್ನು ಚುನಾಯಿಸುವಾಗ ಮತ್ತು ಇಳಿಸುವಾಗ ಯಾವುದೇ ರೀತಿಯ ಕಾನೂನಿನಲ್ಲಿ ಕ್ಲಾರಿಫಿಕೇಶನ್ ಇಲ್ಲ, ಹಾಗೆಯೇ ಅನೇಕ ಸಣ್ಣ ಸಣ್ಣ ಸಂಗತಿಗಳಿಗೆ ಯಾವುದೇ ರೀತಿಯ ಕ್ಲಾರಿಫಿಕೇಶನ್ ಇಲ್ಲ. ಮಹಾನಗರ ಪಾಲಿಕೆಯ ಆ್ಯಕ್ಟ್ ಅಪೂರ್ಣವಾಗಿದೆ. ಆದಕಾರಣ ಅದಕ್ಕೆ ಬೇಕಾದಂಥ ರೂಲ್ಸ್ ಫ್ರೇಮ್ ಮಾಡಿಸಬೇಕೆಂದು ಒತ್ತಾಯ ಮಾಡಲಿಚ್ಛಿಸುತ್ತೇನೆ. ಇನ್ನು ಈ ವಾರ್ಡ್ ಸಮಿತಿಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಮಹಾನಗರ ಪಾಲಿಕೆಯಲ್ಲಿ ವಾರ್ಡ್ ಸಮಿತಿಗಳನ್ನು ಮಾಡಬೇಕು ಮತ್ತು ಅವುಗಳ ಮೂಲಕ ಅಭಿವೃದ್ಧಿ ಚಟುವಟಿಕೆಗಳಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕಾರ್ಪೋರೇಟರೊಬ್ಬರು ತಮ್ಮ ಡಿವಿಜನ್ ಅಭಿವೃದ್ಧಿ ಚಟುವಟಿಕೆ ಮಾಡುವಾಗ ಆಗಿರುವಂಥ ಕಾಮಗಾರಿಗಳ ಉಸ್ತುವಾರಿಯನ್ನು ಅಥವಾ ಕೌಂಟರ್ ಚೆಕಿಂಗ್ ಮಾಡುವಂಥ ಒಂದು ವ್ಯವಸ್ಥೆಯನ್ನು ವಾರ್ಡ್ ಸಮಿತಿ ಮೂಲಕ ಮಾಡಲಿಕ್ಕೆ ಸಾಧ್ಯವಾದಾಗ ನಿಜವಾಗಿ ನಮ್ಮಲ್ಲಿ ಜನರು ಪ್ರತ್ಯಕ್ಷವಾಗಿ ಆಡಳಿತದಲ್ಲಿ ಭಾಗವಹಿಸಲು ಆಗುತ್ತದೆ ಹಾಗೂ ಕಳಪೆ ಕಾಮಗಾರಿ ಮೇಲೆ ಚೆಕ್ ಮಾಡುವ ವ್ಯವಸ್ಥೆ ಕೂಡ ಆಗುತ್ತದೆ. ಒಬ್ಬ ಆಟೋರಿಕ್ಷಾ ಡ್ರೈವರ್ ಹಿಡಿದು ಡಾಕ್ಟರ್ ಹಿಡಿದು ಇಂಜಿನಿಯರ್ ತನಕ ಎಲ್ಲಾ ತಜ್ಞರ ಸಮಿತಿ ಆ ವಾರ್ಡ್ ಸಮಿತಿಗಳಲ್ಲಿ ಇದ್ದರೆ ನಿಜವಾದ ಅರ್ಥದಲ್ಲಿ ವಾರ್ಡ್ ಸಮಿತಿ ಈ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಉತ್ತರ

ಬೇಡಿಕೆ ಸಂಖ್ಯೆ 3 : (ನಗರಾಭಿವೃದ್ಧಿ ಸಚಿವರಿಂದ ಉತ್ತರ)

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳಿಂದ ಮಾನ್ಯ ಸದಸ್ಯರು ನನ್ನ ಇಲಾಖೆಯ ಬೇಡಿಕೆ ಸಂಖ್ಯೆ 31ರ ಮೇಲೆ ಮಾತನಾಡಿದ್ದಾರೆ. ಸಾಕಷ್ಟು ಸಲಹೆ ಸೂಚನೆಗಳನ್ನು ಟೀಕಾರೂಪದಲ್ಲಿ ಮತ್ತು ಬೇರೆ ರೀತಿಯಲ್ಲಿ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಹಲವು ಇಲಾಖೆಗಳಲ್ಲಿ ನಗರಾಭಿವೃದ್ಧಿ ಇಲಾಖೆ ಬಹಳ ಮುಖ್ಯವಾದಂಥ ಇಲಾಖೆ. ಈ ಒಂದು ಇಲಾಖೆಗೆ ನಗರಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂಥ ಒಂದು ಜವಾಬ್ದಾರಿ ಇದೆ. ಮುಖ್ಯವಾಗಿ ಮೂಲಭೂತ ಸೌಕರ್ಯಗಳನ್ನು ಕೊಡುವಂಥ ಜವಾಬ್ದಾರಿ ಇದೆ. ಉದಾಹರಣೆಗೆ ನೀರು ರಸ್ತೆ ದೀಪ, ಸಂಚಾರಿ ವ್ಯವಸ್ಥೆ ಹೀಗೆ ಇನ್ನು ಇತರ ವ್ಯವಸ್ಥೆಗಳನ್ನು ಕೊಡುವಂಥ ಒಂದು ಕರ್ತವ್ಯ ಇವೊತ್ತು ನಗರಾಭಿವೃದ್ಧಿ ಇಲಾಖೆಯ ಮೇಲೆ ಇರತಕ್ಕಂಥ ಒಂದು ದೊಡ್ಡ ಜವಾಬ್ದಾರಿ. ಈ ಒಂದು ಇಲಾಖೆಯ ಅಡಿಯಲ್ಲಿ ಸುಮಾರು 14 ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿವೆ. ವಸತಿ ಸಚಿವರಾದ ರೇವಣ್ಣನವರು, ಪೌರಾಡಳಿತ ಸಚಿವರು ಮಿರಾಜುದ್ದೀನ್ ಪಟೇಲರು, ಬಿ.ಡಿ.ಎ. ಸಚಿವರಾದ ಅನಂತ್‌ನಾಗ್‌ರವರು ಹಾಗೂ ನಾನು ಹೀಗೆ ನಾಲ್ಕು ಸಚಿವರಲ್ಲಿ ಈ ಇಲಾಖೆ ಹಂಚಿಕೆಯಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಇಲಾಖೆ, ನಗರಾಭಿವೃದ್ಧಿ ಮಂಡಲಿ ಮತ್ತು ನಗರ ಯೋಜನಾ ಪ್ರಾಧಿಕಾರಗಳು ನನ್ನ ಇಲಾಖೆಗೆ ಬರುವಂಥದ್ದು. ನಮ್ಮ ರಾಜ್ಯದಲ್ಲಿ ಒಟ್ಟು 19 ನಗರಾಭಿವೃದ್ಧಿ ಪ್ರಾಧಿಕಾರಗಳು ಕೆಲಸ ಮಾಡುತ್ತಿವೆ ನಗರದ ಅಭಿವೃದ್ಧಿ ಹಾಗೂ ನಗರವನ್ನು ಯೋಜನಾಬದ್ಧವಾಗಿ ಬೆಳೆಸುವ ದಿಸೆಯಲ್ಲಿ, ಅವು ಕೆಲಸ ಮಾಡುತ್ತಿವೆ. ಅದೇ ರೀತಿ 21 ನಗರ ಯೋಜನಾ ಪ್ರಾಧಿಕಾರಗಳು ಕೆಲಸ ಮಾಡುತ್ತಿವೆ. ಇತ್ತೀಚೆಗೆ40 ಸಾವಿರ ಜನಸಂಖ್ಯೆಗೆ ಹೆಚ್ಚು ಇರತಕ್ಕಂಥ ಸುಮಾರು23 ಪುರಸಭೆಗಳನ್ನೇ ನಗರಯೋಜನೆ ಪ್ರಾಧಿಕಾರಗಳನ್ನು ಮಾಡಿಕೊಂಡು74ನೇ ತಿದ್ದುಪಡಿ ಪ್ರಕಾರ ಯೋಜನಾಪ್ರಾಧಿಕಾರಗಳನ್ನು ಮಾಡಿಕೊಂಡು ನಗರಾಭಿವೃದ್ಧಿಗೆ ಯೋಜನಾಬದ್ಧವಾಗಿ ಬೆಳವಣಿಗೆ ಆಗಬೇಕು ಎನ್ನತಕ್ಕಂಥ ದಿಸೆಯಲ್ಲಿ ಇವೊತ್ತು ಕೆಲಸಗಳನ್ನು ಮಾಡುತ್ತಿವೆ. ಇವೊತ್ತು ರಾಜ್ಯದಲ್ಲಿ 19 ನಗರಾಭಿವೃದ್ಧಿ ಪ್ರಾಧಿಕಾರಗಳು ಎಲ್ಲಾ ಜಿಲ್ಲೆಗೆ ಒಂದರಂತೆ ಕೆಲಸ ಮಾಡುತ್ತಿವೆ. ಬಹಳ ಮುಖ್ಯವಾದ ಕೆಲಸ ಅಲ್ಲಿ ಬಡಾವಣೆಗಳನ್ನು ನಿರ್ಮಾಣ ಮಾಡುವಂಥದ್ದು. ಈಗ ಹಾಲಿ ಇರತಕ್ಕಂಥ ಪುರಸಭೆ ಕಾರ್ಪೋರೇಶನ್ ಲಿಮಿಟ್ ಏನು ಇದೆ ಅದನ್ನು ಬಿಟ್ಟು ಇರುವಂಥ ಪ್ರದೇಶಗಳನ್ನು ಮಾಸ್ಟರ್ ಪ್ಲಾನ್ ಮಾಡುವಂಥ ಓಡಿಪಿ ಮತ್ತು ಸಿಡಿಪಿ ವ್ಯಾಪಕ ಸ್ಥೂಲ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಿಕೊಂಡು ಹತ್ತು ವರ್ಷಗಳಲ್ಲಿ ಅದರ ಅಭಿವೃದ್ದಿ ಯಾವ ರೀತಿ ಆಗುತ್ತದೆಂದು ಎಲ್ಲಾ ಸೌಕರ್ಯ ಕಲ್ಪಿಸುವಂತೆ ಅದರಲ್ಲಿ ನಿವೇಶನಗಳನ್ನು ಮಾಡುವಂತೆ ಮತ್ತು ಸಾರ್ವಜನಿಕ ಅಭಿವೃದ್ಧಿ ಆಗುವಂಥದ್ದು, ಗುರುತಿಸುವಂಥದ್ದು, ಪಾರ್ಕ್, ಆಟದ ಮೈದಾನಕ್ಕೆ ಶೇಕಡ 50ರಷ್ಟು ಮೀಸಲಾತಿಯನ್ನು ಇಟ್ಟಿದ್ದೇವೆ. ಉತ್ತಮ ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂಬ ಯೋಜನೆಯನ್ನು ಮಾಡಿದ್ದೇವೆ. ಮೈಸೂರು ಮಹಾರಾಜರ ಕಾಲದಿಂದ ಪ್ರಾರಂಭವಾಗಿರತಕ್ಕ, ಇಡೀ

ರಾಷ್ಟ್ರದಲ್ಲಿ ಪ್ರಥಮಬಾರಿಗೆ ನಮ್ಮ ಮೈಸೂರಿನಿಂದ ಪ್ರಾರಂಭವಾದ ನಗರ ಅಭಿವೃದ್ಧಿ ಮಂಡಳಿ ಅಲ್ಲಿಂದ ಇತ್ತೀಚೆಗೆ 1945ರಲ್ಲಿ ಬೆಂಗಳೂರು ಅಭಿವೃದ್ಧಿ ಮಂಡಳಿ ಎಂದು ಪ್ರಾರಂಭವಾಗಿದೆ. ಇದರ ಜೊತೆಗೆ ಮುಖ್ಯವಾಗಿ ರಾಜ್ಯದಲ್ಲಿ ಪ್ರಾರಂಭವಾಗಿರತಕ್ಕ ಗುಲ್ಬರ್ಗಾ, ಮಂಗಳೂರು ಬೇರೆ ಬೇರೆ ಪಟ್ಟಣಗಳಲ್ಲಿಯೂ ಸಹ ಇದೆ ರೀತಿ ನಗರ ಅಭಿವೃದ್ಧಿ ಟ್ರಸ್ಟ್ ಮಂಡಳಿ ಎಂದು ಇಟ್ಟುಕೊಂಡು ಅದನ್ನು ಅಭಿವೃದ್ಧಿ ಮಾಡುವಂತಹ ಕಾರ್ಯ, ನಮ್ಮ ಜಗದೀಶ್ ಶೆಟ್ಟರ್ ಅವರು ಮಾತನಾಡುವಾಗ ತಿಳಿಸಿದರು. ಅದೇ ರೀತಿ ಸಭಾಧ್ಯಕ್ಷರು ಮಾತನಾಡುವಾಗ ತಿಳಿಸಿದರು, ನಗರಾಭಿವೃದ್ಧಿ ಯೋಜನಾಬದ್ಧವಾಗಿ ಸಾಗಬೇಕಾದರೆ ಸರ್ಕಾರವು ಅದರಲ್ಲಿ ಹಸ್ತಕ್ಷೇಪ ಮಾಡಬಾರದು. ಆದರೆ ಸರ್ಕಾರ ಹಸ್ತಕ್ಷೇಪ ಮಾಡುವಂಥದ್ದು ಇದರಲ್ಲಿ ಇಲ್ಲ. ಕಾರಣ ಇವತ್ತು ನಗರಾಭಿವೃದ್ಧಿ ಪ್ರಾಧಿಕಾರದವರು ತಾವೇ ಹಣವನ್ನು ರೂಢಿಸಿಕೊಂಡು ಸರ್ಕಾರದಿಂದ ಹಣವನ್ನು ತೆಗೆದುಕೊಳ್ಳದೆ ಅಭಿವೃದ್ಧಿ ಮಾಡುವಂಥ ಕಾರ್ಯವನ್ನು ಮಾಡುತ್ತಿದ್ದಾರೆ. ಆ ದಿಶೆಯಲ್ಲಿ 1968ರಿಂದ ಇತ್ತೀಚೆಗೆ ಆದಂತಹ ಪ್ರಾಧಿಕಾರಗಳು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವಂಥದ್ದು ಮತ್ತು ಆಯಾ ಸನ್ನಿವೇಶ ಮತ್ತು ವಾತಾವರಣಕ್ಕೆ ಅನುಗುಣವಾಗಿ ಅಭಿವೃದ್ಧಿ ಮಾಡುವಂತಹ ಕಾರ್ಯವನ್ನು ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ತಾವು ಎಷ್ಟು ನಿವೇಶನಗಳನ್ನು ಹಂಚಿದ್ದೀರಿ, ಪ್ರಾಧಿಕಾರದಲ್ಲಿ ನಿವೇಶನಗಳ ವಿಚಾರದಲ್ಲಿ ಯಾವ ರೀತಿ ಕೆಲಸಗಳನ್ನು ಮಾಡದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಅಂಕಿ ಅಂಶಗಳು ಇವೆ. ಇವತ್ತು ರಾಜ್ಯದಲ್ಲಿ ಪ್ರಾಧಿಕಾರಗಳಿಂದ ಒಟ್ಟು 11,123 ಎಕರೆ ಜಮೀನನ್ನು ಸ್ವಾಧೀನ ಮಾಡಿ ನಿವೇಶನಳಿಗೆ ಅರ್ಜಿಯನ್ನು ಹಾಕಿಕೊಂಡಂತವರಿಗೆ ಈ ಪ್ರಾಧಿಕಾರದ ಅಡಿಯಲ್ಲಿ 78,173 ಅರ್ಜಿಗಳನ್ನು ಸ್ವೀಕೃತ ಮಾಡಿದ್ದೇವೆ. ಈಗಾಗಲೇ 48,225 ನಿವೇಶನಗಳನ್ನು ರಾಜ್ಯದಲ್ಲಿ ಹಂಚಿದ್ದೇವೆ. ಅತಿ ಹೆಚ್ಚು ಎಂದರೆ ಮೈಸೂರು ಜಿಲ್ಲೆಯಲ್ಲಿ 3,643 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದೇವೆ. ಅದರಲ್ಲಿ 17,650 ನಿವೇಶನಗಳಲ್ಲಿ ಹಂಚಲಾದಂತಹ ನಿವೇಶನಗಳು 10,359 ಹೀಗೆ ನಮ್ಮ ಜಗದೀಶ್ ಶೆಟ್ಟರ್ ಮಾಹಿತಿ ಪ್ರಕಾರ ಹುಬ್ಬಳ್ಳಿ-ಧಾರವಾಡದಲ್ಲಿ 2,066 ಎಕರೆ ,36 ಗುಂಟೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದೇವೆ. 6,773 ನಿವೇಶನಗಳಲ್ಲಿ 4,716 ನಿವೇಶನಗಳನ್ನು ಹಂಚಲಾಗಿದೆ. ಈ ಎಲ್ಲ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾಧಿಕಾರಗಳು ಮಾಡುತ್ತಿವೆ. ಇದರಲ್ಲಿ ಖಾಸಗಿಯವರು ಅಲ್ಲಲ್ಲಿ ಲೇಔಟ್‌ಗಳನ್ನು ಮಾಡಿ ಅದಕ್ಕೆ ಕಂಟಿನ್ಯೂಟಿ ಇಲ್ಲದೆ ಬರೀ ಊರುಗಳಲ್ಲಿ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿ ಮಾರಾಟ ಮಾಡಿಕೊಂಡ ಪ್ರಕರಣಗಳು ಇವೆ. ಆದರೆ ಇದು ಸಂಪೂರ್ಣವಾಗಬೇಕಾದರೆ, ರಸ್ತೆ ಸೌಕರ್ಯ, ನೀರಿನ ವ್ಯವಸ್ಥೆ, ಕಲ್ಪಿಸಿಕೊಡಬೇಕು ಎನ್ನುವ ದಿಶೆಯಲ್ಲಿ ಖಾಸಗಿಯವರು ಇವತ್ತು ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡದೆ ಬರೀ ಮಾರಾಟ ಮಾಡುತ್ತಾ ಇರುವಂಥ ಪ್ರಕರಣಗಳನ್ನು ಗುರುತಿಸಿ ನಮ್ಮ ಇಲಾಖೆಯವರು ಮತ್ತು ಸರ್ಕಾರ ಜನರ ನಿರೀಕ್ಷೆಗೆ ಹತ್ತಿರವಾಗಿ ಅವರಿಗೆ ನಿವೇಶನಗಳನ್ನು ಕೊಡುವಂಥ ಉತ್ತಮವಾದ ಕಾರ್ಯವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಈಶ್ವರಪ್ಪನವರಿಗೆ ಇದು ಗೊತ್ತಿದೆ, ಶಿವಮೊಗ್ಗದಲ್ಲಿ 1,387 ಎಕರೆ ಜಮೀನನ್ನು ಕಾಗೋಡು ತಿಮ್ಮಪ್ಪನವರು ಬಹಳ ಉತ್ತಮವಾಗಿ ಸೋಮನಕಪ್ಪ ಮತ್ತೆ ಬೇರೆ ಬೇರೆ ಕಡೆಗಳಲ್ಲಿ ಅಭಿವೃದ್ಧಿ ಮಾಡಿದ್ದಾರೆ. ಅವರು ಹಿಂದೆ ಗೃಹ ಮಂಡಳಿಯ ಅಧ್ಯಕ್ಷರಾಗಿದ್ದಾಗ ನಾನು ಸ್ಥಳಕ್ಕೆ ಹೋಗಿ ನೋಡಿದ್ದೇನೆ, ಅಲ್ಲಿ ಅವರು ದೊಡ್ಡ,

ಲೇಔಟ್ ಮಾಡಿ, ಬಡವರಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ. ಅಲ್ಲಿ ಸುಮಾರು 6,410 ನಿವೇಶನಗಳಲ್ಲಿ 4,722 ನಿವೇಶನಗಳನ್ನು ಬಡಜನರಿಗೆ ಬೇರೆ ಬೇರೆ ಹಂತಗಳಲ್ಲಿ ನಿವೇಶನಗಳನ್ನು ಹಂಚುವಂತ ಕಾರ್ಯವಾಗಿದೆ. ಕೆಲವು ಕಡೆ ನಿವೇಶನಗಳಿಗೆ ಬೇಡಿಕೆ ಇಲ್ಲದೆ ಇರುವಂತಹ ಪರಿಸ್ಥಿತಿ ಇದೆ. ಇವತ್ತು ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾದವರು ಖಾಸಗಿ ನಿವೇಶನಗಳನ್ನು ಮಾಡುವಂತವರು. ನಾವು ನಿವೇಶನಗಳನ್ನು ಮಾಡಲು ಬಂದ ಭೂಮಿಗೆ ಹೆಚ್ಚು ಬೆಲೆ ಕೇಳುವುದು ತಮಗೆ ಗೊತ್ತಿದೆ. ತಾವು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿದ್ದೀರಿ, ನಾವು ಸರ್ಕಾರದವರು ತೆಗೆದುಕೊಳ್ಳಬೇಕು, ಎನ್ನುವ ಜಮೀನಿನಲ್ಲಿ ಖಾಸಗಿಯವರು ಪೈಪೋಟಿ ಮಾಡಿ ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಅನೇಕ ಪ್ರಕರಣಗಳು ಕೋರ್ಟಿನಲ್ಲಿ ಇರವುದರಿಂದ ಸಾಕಷ್ಟು ಬೇಗನೆ ಕೆಲಸವನ್ನು ಮಾಡದೆ ಇರುವಂತ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇದು ಇವತ್ತು ನಮ್ಮ ಮುಂದೆ ಇರುವಂಥ ಪರಿಸ್ಥಿತಿ ಆದರೂ ಯೋಜನಾ ಪ್ರಾಧಿಕಾರದವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೊಂದು ಪ್ರಮುಖವಾದ ವಿಷಯ ಎಂದರೆ 40 ಸಾವಿರಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಇರುವಂಥ ಕಡೆಗಳಲ್ಲಿ ಯೋಜನೆಗಳನ್ನು ಪ್ರಾಧಿಕಾರದವರು ಮಾಡಿ ಪುರಸಭೆ ಮಟ್ಟದಲ್ಲಿ ಯೋಜನೆಗಳನ್ನು ಹೇಗೆ ಮಾಡಬೇಕೆಂದು ಆ ಸನ್ನಿವೇಶದಲ್ಲಿ ಅಲ್ಲಿನ ವಾತಾವರಣಕ್ಕೆ ಅನುಗುಣವಾಗಿ ಮಾಡಿಕೊಡಲು ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು 5 ವರ್ಷದಲ್ಲಿ ರಾಜ್ಯದಲ್ಲಿ ಉಳಿದಂತಹ 151 ಪಟ್ಟಣ ಪ್ರದೇಶಗಳು ಯೋಜನಾಬದ್ಧವಾಗಿ ಬೆಳೆಯುವ ದೃಷ್ಟಿಯಲ್ಲಿ ಶಾಸನಬದ್ಧ ಯೋಜನೆ ತಯಾರು ಮಾಡಿ ಅದಕ್ಕೆ ರೂಪ ಕೊಡುವಂತಹ ಕಾರ್ಯವನ್ನು ಮಾಡಬೇಕೆಂದು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. 5 ವರ್ಷದಲ್ಲಿ ಉಳಿದ 151 ಪಟ್ಟಣಗಳಲ್ಲಿ ಇವತ್ತು ಸಮಗ್ರ ಯೋಜನೆಯನ್ನು ವಿಸ್ತರಿಸಿ ಬೆಳವಣಿಗೆ ನಿರ್ದಿಷ್ಟ ರೂಪವನ್ನು ಕೊಡುವ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಇವತ್ತು 74ನೇ ಸಂವಿಧಾನ ತಿದ್ದುಪಡಿ ಪ್ರಕಾರ ಆಯಾ ಪುರಸಭೆಗಳನ್ನು ಅಲ್ಲಿಯ ಪ್ರಾಧಿಕಾರಗಳನ್ನಾಗಿ ಮಾಡಿ, ಅಭಿವೃದ್ಧಿಯನ್ನು ಮಾಡಬೇಕೆಂಬ ಕಾರ್ಯಕ್ರಮಗಳನ್ನು ಸಹ ನಾವು ಹಾಕಿಕೊಂಡಿದ್ದೇವೆ. ಇವತ್ತು ನಮ್ಮಲ್ಲಿ ಓಡಿಪಿ, ಸಿಡಿಪಿ ಕೊಡುವಂಥ ಕಾರ್ಯ ಮತ್ತು ಕಟ್ಟಡದ ವಿಸ್ತೀರ್ಣ ನಿರ್ಧರಿಸುವಂಥ ಒಂದು ಮಾಪನ ಇವೆಲ್ಲಾ ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ವಿಶೇಷವಾಗಿ ಮಾನ್ಯ ಸದಸ್ಯರು ಸೂಚಿಸಿದ ಹಾಗೆ ಪ್ರಾಧಿಕಾರಗಳಿಗೆ ಆರ್ಥಿಕವಾಗಿ ಹಣ ಬರಬೇಕು ಅದಕ್ಕೆ ಬೇರೆ ನಿವೇಶನಗಳನ್ನು ಮಾಡಿ ಕೊಡುವ ದೃಷ್ಟಿಯಲ್ಲಿ ನಿವೇಶನಗಳು ಬೇಕು ಎಂದು ಬಂದ ಠೇವಣಿ ಹಣದಲ್ಲಿ ನಿರ್ವಹಿಸುವಂಥ ಕಾರ್ಯವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಅದನ್ನು ಈಗ ಕ್ರೋಢಿಕರಿಸುವುದಕ್ಕೋಸ್ಕರ ಅಭಿವದ್ಧಿ ಶುಲ್ಕ, ಕೊಳಚೆ ನಿರ್ಮೂಲ ಶುಲ್ಕ, ಹಾಕುವಂಥ ಒಂದು ಕಾರ್ಯ ಇದು. ಸಿಂಗಲ್ ವಿಂಡೋ ಕಾರ್ಯಕ್ರಮವನ್ನು ಹಾಕಿಕೊಳ್ಳಿ ಎಂದು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಇವತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಇವತ್ತು ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ ಗುಲ್ಬರ್ಗಾ, ಬೆಳಗಾಂ, ಮಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಕಟ್ಟಡಕ್ಕೆ ಲೈಸೆನ್ಸ್ ಮತ್ತು ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೊಡುವಂತಹ ಕಾರ್ಯವನ್ನು ಮಹಾನಗರಪಾಲಿಕೆಗಳು

ಮಾಡುತ್ತವೆ. ಹೊಸದಾಗಿ ಆದ ಯೋಜನಾ ಪ್ರಾಧಿಕಾರಗಳಿಗೆ ಆರ್ಥಿಕ ಶಕ್ತಿ ಇರುವುದಿಲ್ಲ ಆದ್ದರಿಂದ ಶೇಕಡ 5 ಮಾತ್ರ ಪಡೆಯುತ್ತೇವೆ. ಅವರಿಗೆ 10 ಸಾವಿರ 15 ಸಾವಿರ ಕೊಟ್ಟು ಅಲ್ಲಿನ ಪ್ಲಾನ್ ಮಾಡುವ ವ್ಯವಸ್ಥೆಗೆ ಮಾತ್ರ ತೆಗೆದುಕೊಳ್ಳುತ್ತೇವೆ. ಇದಲ್ಲದೆ ಬೇರೆ ಯಾವ ರೀತಿಯಲ್ಲಿ ಹಣ ತೆಗೆದುಕೊಳ್ಳುವುದಿಲ್ಲ. ಈ ಪ್ರಾಧಿಕಾರಗಳಿಂದ ಬಂದಿರತಕ್ಕಂತಹ ಹಣದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟುವುದು, ಬಸ್ ನಿಲ್ದಾಣ ಹಾಗೂ 10 ರಿಂದ 17 ಸಾವಿರ ಕೋಟಿ ರೂಪಾಯಿಗಳ ಎರಡು ಸಂಕೀರ್ಣಗಳನ್ನು ತೆಗೆದುಕೊಂಡಿದ್ದೇವೆ. ಆರ್ಥಿಕವಾಗಿ ಅವರು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ ಹಣವನ್ನು ತುಂಬಿಸಿಕೊಳ್ಳುವುದು, ಮತ್ತು ಹುಡ್ಕೊ ಸಂಸ್ಥೆ ಬೇರೆ ಬೇರೆ ಸಂಸ್ಥೆಗಳಿಂದ ಅದಕ್ಕೆ ಆರ್ಥಿಕ ನೆರವನ್ನು ಕೊಡುವಂತಹ ಕಾರ್ಯವನ್ನು ಸಹ ಸರ್ಕಾರ ಇವತ್ತು ಮಾಡುತ್ತಿದೆ. ವಿಶೇಷವಾಗಿ ಇವತ್ತು ನಮ್ಮ ಆಸೆ ಏನೆಂದರೆ ನಿವೇಶನ ಇಲ್ಲದವರಿಗೆ, ನಿವೇಶಗಳನ್ನು ಕೊಡುವುದು. ಈ ಕಾರ್ಯವು ಯಾವುದೇ ಲಾಭ ನಷ್ಟ ಇಲ್ಲದೆ ಆಗಬೇಕು. ಪಟ್ಟಣ ಪ್ರದೇಶಗಳು ಬಹು ಬೇಗನೆ ಬೆಳೆಯುತ್ತವೆ. ನಾವು ಹಿಂದೆ ನೋಡಿದ ಜನಸಂಖ್ಯೆಗಿಂತ ಎರಡರಷ್ಟು, ಮೂರರಷ್ಟು ಜನಸಂಖ್ಯೆ ಬೆಳೆಯುತ್ತಿದೆ. ಈ ಜನಸಂಖ್ಯೆಯ ಸೌಕರ್ಯಗಳ ಬಗ್ಗೆ ರಸ್ತೆ ಸರಿಯಿಲ್ಲ, ದೀಪದ ವ್ಯವಸ್ಥೆ ಇಲ್ಲ, ಡಾಂಬರೀಕರಣ ಇಲ್ಲ ಎಂದು ಮಾನ್ಯ ಸಗೀರ್ ಅಹಮದ್ ಅವರು ಹೇಳಿದ್ದಾರೆ. ಅವರು ಇಲಾಖೆಯಲ್ಲಿ ಕೆಲಸ ಮಾಡಿದಂಥವರು. ಜನರಿಗೆ ಸೌಕರ್ಯ ಕೊಡಬೇಕು ಎನ್ನುವ ದೃಷ್ಟಿಯಲ್ಲಿ ಸಂಪನ್ಮೂಲಗಳನ್ನು ನಗರ ಪ್ರಾಧಿಕಾರಗಳು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ.

1.10 ಪಿ.ಎಂ.

ಮಾನ್ಯ ಸಗೀರ್ ಅಹಮದ್ ರವರು ಮಾತನಾಡುತ್ತಾ ನಗರಾಭಿವೃದ್ಧಿ ಇಲಾಖೆಯವರು ಮನೆಗಳನ್ನು ಕಟ್ಟಿಸಿಕೊಡುವಂಥ ಕೆಲಸವನ್ನು ಮಾಡಬೇಕೆಂದು ಹೇಳಿದರು. ಚಿಕ್ಕಮಗಳೂರಿನಲ್ಲಿ ಏಕೆ ನೀವು ಹಾಗೆ ಬಿಡುತ್ತಿದ್ದೀರಿ ಎಂದು ಕೇಳಿದ್ದಾರೆ. ಆದರೆ ಆ ರೀತಿ ಮನೆಗಳನ್ನು ಕಟ್ಟಲು ನನಗೆ ಇಷ್ಟವಿಲ್ಲ. ನಾನು ಅನೇಕ ಕಡೆ ಮನೆಗಳನ್ನು ಕಟ್ಟಿಸಿಕೊಡುವಂಥ ಕಾರ್ಯವಾದಾಗ ಅಲ್ಲಿ ಬಹಳ ತೊಂದರೆಗೆ ಸಿಕ್ಕಿಕೊಂಡು ಮನೆಗಳನ್ನು ಪೂರ್ಣವಾಗಿ ಮುಗಿಸದೇ ಟೆಂಡರ್‌ದಾರರು ತೆಗೆದುಕೊಂಡು ಅರ್ಧಂಬರ್ಧ ಮನೆಗಳನ್ನು ಕಟ್ಟಿದ್ದಾರೆ. ಈ ರೀತಿಯ ಮನೆಗಳನ್ನು ಕಟ್ಟಿರುವುದಕ್ಕೆ ಸಂಬಂಧಪಟ್ಟಂತೆ ಮೈಸೂರಿನಲ್ಲಿ ಮೂಡಾದವರು ಕಟ್ಟಿರುವ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಮನೆಗಳೇ ಉದಾಹರಣೆಯಾಗಿದೆ. ಇದಲ್ಲದೇ ತಾವು ಹೌಸಿಂಗ್ ಬೋರ್ಡ್ ಮನೆಗಳ ಬಗ್ಗೆ ಹೇಳುತ್ತ ಮನೆಗಳು ಬಿದ್ದುಹೋಗುತ್ತವೆ, ಮನೆಯೊಳಗೆ ಹೋಗುವುದಕ್ಕೆ ಆಗುವುದಿಲ್ಲ ಮತ್ತು ನೋಡುವುದಕ್ಕೂ ಆಗುವುದಿಲ್ಲವೆಂದು ಹೇಳಿದಿರಿ. ರಾಜ್ಯದಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಅದಕ್ಕೋಸ್ಕರ ನಾವು ಕೇವಲ ನಿವೇಶನಗಳನ್ನು ಕೊಡುವಂಥ ಕಾರ್ಯವನ್ನು ಮಾಡೋಣವೆಂದು ನಿರ್ಧರಿಸಿರುವುದು, ಏಕೆಂದರೆ ಮನೆಗಳನ್ನು ಕಟ್ಟಿಕೊಡುವಂಥ ಕಾರ್ಯದಲ್ಲಿ ಈ ಹಿಂದೆ ಅನೇಕ ಅಕ್ರಮಗಳು ಅವ್ಯವಹಾರಗಳು ನಡೆದಿರುವಂಥದ್ದನ್ನು ನೋಡಿದ್ದೇವೆ. ಇದೇ ರೀತಿ ಮುಂದೆಯೂ ಆಗುವುದು ಬೇಡ ಎಂದು ಹೇಳಿ ಡಿಸ್‌ಕರೇಜಿಂಗ್ ಮಾಡುವ ದೃಷ್ಟಿಯಿಂದ ನಮ್ಮ ಕಾರ್ಯವ್ಯಾಪ್ತಿಯನ್ನು ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದ್ದೇವೆ. ಆಗಲೂ ಆ ಪ್ರಾಧಿಕಾರದವರೇ

ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದಾಗ ಈ ಹಿಂದೆ ಅನೇಕ ಪ್ರಾಸಿಕ್ಯೂಶನ್‌ಗಳಾಗಿವೆ, ಲೋಕಾಯುಕ್ತ ತನಿಖೆಗಳಾಗಿವೆ ಮತ್ತು ಸಾಕಷ್ಟು ಗೊಂದಲಗಳು ಆಗಿವೆ. ಆ ದೃಷ್ಟಿಯಿಂದ ನಾವು ತೀರ್ಮಾನ ಮಾಡಿದ್ದೇವೆ. ಮನೆ ಕಟ್ಟಿಕೊಡುವ ಕೆಲಸ ಕಷ್ಟಕರವಾದುದು. ಏಕೆಂದರೆ ನಮಗೆ ನಾವೇ ಒಂದು ಸ್ವಂತ ಮನೆ ಕಟ್ಟಿಕೊಳ್ಳಬೇಕಾದರೆ ವರ್ಷಾನುಗಟ್ಟಲೆ ಆಗುತ್ತದೆ. ಇದಲ್ಲದೇ ಈ ಕಾರ್ಯಕ್ಕಾಗಿ ಒಂದಕ್ಕೆ ಎರಡರಷ್ಟು ಹಣವನ್ನು ತುಂಬಬೇಕಾಗುತ್ತದೆ. ಈ ರೀತಿಯಲ್ಲಿ ಹಣವನ್ನು ತುಂಬುವುದಕ್ಕೆ ಆಗುವುದಿಲ್ಲವೆನ್ನುವುದು ಇಂದು ಇರತಕ್ಕಂಥ ಪ್ರಶ್ನೆಯಾಗಿದೆ. ಆದುದರಿಂದ, ಮನೆ ಕಟ್ಟಿಕೊಡುವಂಥ ಕಾರ್ಯಕ್ಕೆ ಕೈ ಹಾಕುವಂಥ ಪ್ರಯತ್ನ ಬೇಡವೆಂದು ಹೇಳಿ ಕೇವಲ ನಿವೇಶನವನ್ನು ಕೊಡುವಂಥ ಕಾರ್ಯಕ್ಕೆ ಸೀಮಿತವಾಗಿ ನಗರಾಭಿವೃದ್ಧಿ ಪ್ರಾಧಿಕಾರಿಗಳು ಕೆಲಸ ಮಾಡಬೇಕೆನ್ನುವ ದಿಸೆಯಲ್ಲಿ ಇವೊತ್ತು ಕಾರ್ಯವನ್ನು ಸಮರ್ಪಕವಾಗಿ ಮಾಡುತ್ತಿದ್ದೇವೆ. ಇಂದು ನಗರಾಭಿವೃದ್ಧಿ ವ್ಯವಸ್ಥೆಯಲ್ಲಿ ನಮಗೆ ಖಾಸಗಿಯವರ ಪೈಪೋಟಿ ಕೂಡ ಇದ್ದು ಬಡಾವಣೆಗಳು ಆಗುತ್ತಿವೆ. ಇದರಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟುವಂಥದ್ದು, ನಿವೇಶನಗಳನ್ನು ಹಂಚುವಂಥದ್ದು ಮತ್ತು ಕಡಿಮೆ ದರದಲ್ಲಿ ಇವುಗಳನ್ನು ಮಾರಾಟ ಮಾಡಿ ಹೋಗತಕ್ಕಂಥವರಿಗೆ ನಿಯಂತ್ರಣ ಮಾಡಬೇಕೆನ್ನುವ ದೃಷ್ಟಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಅಲ್ಲಿರತಕ್ಕಂಥ ಸಬ್ ರಿಜಿಸ್ಟ್ರಾರ್‌ಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಲೇ-ಔಟ್ ಮಾಡುವವರು ಅಲ್ಲಿ ಆ ಲೇ-ಔಟ್‌ಗೋಸ್ಕರ ಹಣವನ್ನು ತುಂಬಬೇಕು ಅಥವಾ ನಾವೇ ಮಾಡಿಕೊಡುತ್ತೇವೆಂದು ಹೇಳಿ ನಮಗೆ ಅಷ್ಟು ಹಣವನ್ನು ತುಂಬಬೇಕು. ಈ ಕಾರ್ಯವನ್ನು ಮಾಡಿದಾಗ ಮಾತ್ರ ಅಲ್ಲಿ ವ್ಯವಸ್ಥೆ ಸರಿಹೋಗುತ್ತದೆ ಎನ್ನುವುದರ ಮೇಲೆ ಆದಷ್ಟು ಇವೊತ್ತು ಹೆಚ್ಚು ನಿಯಂತ್ರಣವನ್ನು ಮಾಡಿದ್ದೇವೆ. ಅಕ್ರಮವಾಗಿ ಮನೆಯನ್ನು ಮಾರುವಂಥದ್ದು, ನಿವೇಶನಗಳನ್ನು ಮಾರುವಂಥದ್ದು, ರಿಜಿಸ್ಟ್ರೇಶನ್ ಮಾಡುವಂಥದ್ದು, ಜಿ.ಪಿ.ಎ. ಮಾಡುವಂಥ ಒಂದು ವ್ಯವಸ್ಥೆ, ಇವೆಲ್ಲಾ ಇಂದು ನಿಯಂತ್ರಣದಿಂದ ಕಡಿಮೆಯಾಗಿದ್ದು ನಮ್ಮ ನಿರೀಕ್ಷೆಗೆ ತಕ್ಕಂಥ ಕೆಲಸ ಆಗುತ್ತಿದೆ ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಇನ್ನು ಇವೊತ್ತು ಜನಸಂಖ್ಯೆಗೆ ಅನುಗುಣವಾಗಿ ಯೋಜನೆಗಳನ್ನು ಮಾಡಬೇಕೆಂದು ಹೇಳುತ್ತ ಉಡುಪಿಯನ್ನು ಉದಾಹರಣೆಯಾಗಿ ತೆಗೆದುಕೊಂಡು ಮಾನ್ಯ ಸದಸ್ಯರಾದ ಸಭಾಪತಿಯವರು ಹೇಳಿದರು. ಇವೊತ್ತು ಕೆಲಸ ಆಗಬೇಕಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಬೇಕು, ಆ ಹಣ ಬೇರೆ ಬೇರೆ ರೀತಿಯಲ್ಲಿ ಖರ್ಚು ಮಾಡುವಂಥ ಕಾರ್ಯ ಆಗಬೇಕೆಂದು ಇವೊತ್ತು ಹೇಳಿರತಕ್ಕಂಥ ವಿಷಯ. ಈ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರು ಅರ್ಬನ್ ಸೀಲಿಂಗ್ ಬಗ್ಗೆ ಪ್ರಸ್ತಾಪ ಮಾಡಿದರು. ಇವೊತ್ತು ನಗರ ಭೂಮಿತಿ ಶಾಸನದ ಬಗ್ಗೆ ಸಾಕಷ್ಟು ಸರ್ಚ್ ಮಾಡುತ್ತಿದ್ದೀರಿ, ಆದರೆ ಪ್ರಯೋಜನವಾಗಿಲ್ಲ, ತಾವು ಸ್ವಾಧೀನಪಡಿಸಿಕೊಂಡಿರುವ ಭೂಮಿ ಬಹಳ ಕಡಿಮೆಯಾಗಿದೆಯಾದ ಕಾರಣ ಈ ಶಾಸನಕ್ಕೆ ಏನಾದರೂ ಮಾಡಿ ಎಂದಿದ್ದಾರೆ. ಆದೆರ ಇದು ಕೇಂದ್ರದ ಆ್ಯಕ್ಟ್. ಇದಕ್ಕೆ ಅಮೆಂಡ್‌ಮೆಂಟ್ ತರಬೇಕೆಂದು ಹೇಳಿ ನಮ್ಮ ಸದನ ಮತ್ತು ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಈ ಬಗ್ಗೆ ರೆಸಲ್ಯೂಶನ್ ಮಾಡಿ ಕೇಂದ್ರ ಸರ್ಕಾರಕ್ಕೆ ಅದನ್ನು ಕಳುಹಿಸಲಾಗಿದೆ. ಇಂಥಿಂಥ ಅಮೆಂಡ್‌ಮೆಂಟ್ಸ್ ಎಂದು ಅದರಲ್ಲಿ ಸೂಚಿಸಲಾಗಿದೆ. ಇದಕ್ಕಾಗಿ ಒಂದು ಸಮಿತಿಯನ್ನು ಕೇಂದ್ರ ಸರ್ಕಾರದವರು ನೇಮಕ

ಮಾಡಿದ್ದು ಯಾವ ಯಾವ ಅಮೆಂಡ್‌ಮೆಂಟ್ಸ್‌ಗಳಿವೆ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂಬ ಬಗ್ಗೆ ಕಾರ್ಯೋನ್ಮುಖರಾಗಬೇಕು. ಆದರೆ ತಾವು ಹೇಳಿದ ಹಾಗೆ ನಿರೀಕ್ಷೆಗೆತಕ್ಕಂತೆ ಆ ಸಮಿತಿ ಕೆಲಸ ಮಾಡಿಲ್ಲ. ನಿರೀಕ್ಷೆಯ ಮಟ್ಟಕ್ಕೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಸರ್ಕಾರಕ್ಕೆ ಬೇಕಾದಂಥ ಎಕ್ಸ್‌ಸ್ ಲ್ಯಾಂಡ್ ಏನು ಇದೆ ಅದನ್ನು ಸರ್ಕಾರ ಮತ್ತು ಇತರ ಸಂಸ್ಥೆಗಳಿಗೆ ಕೊಡಬೇಕು ಎನ್ನುವ ಸೂಚನೆಯನ್ನು ತಾವು ಏನು 5 ಮಹಾನಗರಗಳಿಗೆ ಸಂಬಂಧಪಟ್ಟಂತೆ ಹೇಳಿದ್ದೀರಿ ಅಲ್ಲಿ ಆ ಕೆಲಸ ಅಷ್ಟು ನಿರೀಕ್ಷೆಯ ಮಟ್ಟದಲ್ಲಿ ಕೆಲಸವಾಗಿಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇವೊತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ಒಟ್ಟಾರೆ ಉದ್ದೇಶ ಸಫಲವಾಗಿಲ್ಲವೆಂದು ಮಾನ್ಯ ಜಗದೀಶ್‌ಶೆಟ್ಟರು ಹೇಳಿದರು. ಆದರೆ ಸಫಲವಾಗಿರುವದು ಅವರಿಗೆ ಗೊತ್ತಿದೆ. ನಾನು ಹುಬ್ಬಳ್ಳಿ-ಧಾರವಾಡದಲ್ಲಿಯೇ ನೋಡಿದ್ದೇನೆ. ಹಿರಿಯ ಸದಸ್ಯರಾದ ಚಂದ್ರಕಾಂತ್ ಬೆಲ್ಲದ್‌ರವರಿಗೂ ಗೊತ್ತಿದೆ. ಅವರೆಲ್ಲಾ ಆ ಪ್ರಾಧಿಕಾರದಲ್ಲಿ ಸದಸ್ಯರೇ ಆಗಿದ್ದಾರೆ. ಪ್ರಾಧಿಕಾರಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಇದಲ್ಲದೇ ಆ ಕ್ಷೇತ್ರದ ಶಾಸಕರು, ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರುಗಳು ಇನ್ನೂ ತೀವ್ರವಾಗಿ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಯೋಜನಾ ರೂಪದಲ್ಲಿ ಬೆಳವಣಿಗೆ ಆಗುವುದಕ್ಕೆ ಮತ್ತು ಹೊಸದಾಗಿ ಹೆಚ್ಚು ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ರೈತರಿಗೆ ನಿವೇಶನಗಳನ್ನು ಕೊಡುವಂಥ ದಿಸೆಯಲ್ಲಿ ಕೆಲಸವನ್ನು ಇವೊತ್ತು ಮಾಡಬೇಕಾಗಿದೆ. ಇಂದು ಭೂ ಸ್ವಾಧೀನದ ತಡೆಯಾಗುತ್ತಿದೆ ಮತ್ತು ಖಾಸಗಿಯವರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ಭೂ ಸ್ವಾಧೀನಗಳು ಬಹಳ ತ್ವರಿತವಾಗಿ ಆಗಬೇಕಾಗುತ್ತದೆ, ಆ ದಿಸೆಯಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಹೇಳುತ್ತಾ ಆಕ್ಟ್ರಾಯ್ ಜಾರಿಗೆ ತರುತ್ತೀರಾ ಎಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲೇ ಇದ್ದಾರೆ. ಆಕ್ಟ್ರಾಯನ್ನು ತರುವಂಥ ಯಾವುದೇ ಸೂಚನೆ ಸರ್ಕಾರದ ಮುಂದೆ ಇಲ್ಲ. ಇವೊತ್ತು ಪ್ರವೇಶ ತೆರಿಗೆ ಇದೆ, ಸಂಪನ್ಮೂಲ ಹೆಚ್ಚಿಸಿಕೊಳ್ಳುವ ದಿಸೆಯಲ್ಲಿ ಆಸ್ತಿ ತೆರಿಗೆಯನ್ನು ಹೆಚ್ಚು ಮಾಡಬೇಕು. ಈಗಾಗಲೇ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು ತಿಮ್ಮಯ್ಯನವರ ವರದಿಯನ್ನು ಒಪ್ಪಿಕೊಂಡು ಸ್ಥಳೀಯ ಸಂಸ್ಥೆಗಳಿಗೆ ಹಣ ಕೊಡುವ ದೃಷ್ಟಿಯಿಂದ ಪೌರ ಕಾರ್ಮಿಕರಿಗೆ ಸಂಬಳವನ್ನು ಕೊಡುವಂಥ ಕೆಲಸವನ್ನು ಸಂಪೂರ್ಣವಾಗಿ ಒಪ್ಪಿಕೊಂಡು ನೋಡಿಕೊಳ್ಳುತ್ತಿದ್ದೇವೆ. ಪೌರಾಡಳಿತ ಸಚಿವರು, ಹಣಕಾಸಿನ ಸಚಿವರು ಮತ್ತು ಎಲ್ಲರೂ ಸೇರಿ ಇಡೀ ರಾಜ್ಯದಲ್ಲಿರತಕ್ಕಂಥ ಪೌರ ಕಾರ್ಮಿಕರಿಗೆ ಸಂಪೂರ್ಣವಾಗಿ ಹಣ ತಲುಪುವಂಥ ಕಾರ್ಯವಾಗಬೇಕು ಎನ್ನುವುದೇ ಆಗಿದ್ದು ಆ ದಿಸೆಯಲ್ಲಿ ನಮ್ಮ ಸರ್ಕಾರ ಕೆಲಸ ಮಾಡಿದೆ. ಏಕೆಂದರೆ, ಬಹಳ ದಿವಸಗಳಿಂದ ಈ ಬೇಡಿಕೆ ಇತ್ತು, ಪೌರ ಕಾರ್ಮಿಕರಿಗೆ ಸಂಬಳ ಸರಿಯಾಗಿ ಸಿಗುತ್ತಿಲ್ಲವೆಂದು ಬಹಳ ದಿವಸಗಳಿಂದಲೂ ಹೇಳಲಾಗುತ್ತಿತ್ತು, ತಿಂಗಳುಗಟ್ಟಲೆ ಬಾಕಿ ಸಂಬಳ ಕೊಡಬೇಕಾಗಿದೆ, ಅವರು ಈ ಬಗ್ಗೆ ಸ್ಟ್ರೈಕ್ ಮಾಡುತ್ತಾರೆ, ಕೆಲಸ ಮಾಡುತ್ತಿಲ್ಲವೆನ್ನುವ ಕೂಗಿತ್ತು ಇದು ನಮಗೆಲ್ಲ ಗೊತ್ತಿದೆ. ಆದುದರಿಂದ, ನಾವೆಲ್ಲಾ ಕುಳಿತು ಒಂದು ತೀರ್ಮಾನ ಮಾಡಿ ಅದಕ್ಕೇ ಬೇರೆ ಅಕೌಂಟ್‌ನ್ನು ಓಪನ್ ಮಾಡಿ ಮೊದಲು ಪೌರ ಕಾರ್ಮಿಕರಿಗೆ ಸಂಬಳ ಕೊಟ್ಟು ತದನಂತರ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿ ಇವೊತ್ತು ತಿಮ್ಮಯ್ಯನವರ ವರದಿ ಪ್ರಕಾರ ಸಾಲರಹಿತ

ಆದಾಯವೆಂದು ಏನು ಇವೊತ್ತು ರಾಜ್ಯದಲ್ಲಿದೆ ಆ ಆದಾಯದಲ್ಲಿ ರಾಜ್ಯದ ಅಭಿವೃದ್ಧಿಗೆ 64 ಭಾಗವಾದರೆ, ಲೋಕಲ್ ಬಾಡೀಸ್ ಮತ್ತು ಪಂಚಾಯತ್ ರಾಜ್‌ಗೆ 36 ಪರ್ಸೆಂಟ್ ಕೊಡಲು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆ 36 ಪರ್ಸೆಂಟ್‌ನಲ್ಲಿ ಶೇಕಡ 85ರಷ್ಟು ಭಾಗ ಪಂಚಾಯತ್ ಅಭಿವೃದ್ಧಿಗೆ ಮತ್ತು ಶೇಕಡ 15 ಭಾಗ ಲೋಕಲ್ ಅರ್ಬನ್ ಅಥಾರಿಟೀಸ್‌ಗೆ ಹೋಗುವಂಥ ಕಾರ್ಯವನ್ನು ಇವೊತ್ತು ನಾವು ಮಾಡಿದ್ದೇವೆ. ಆ 15 ಪರ್ಸೆಂಟ್‌ನಲ್ಲಿ ಒಂದೇ ಬಾರಿಗೆ ಕೊಟ್ಟರೆ ಬಹಳ ಜಾಸ್ತಿಯಾಗುತ್ತದೆ ಎನ್ನುವ ದೃಷ್ಟಿಯಿಂದ 90 ಕೋಟಿ ರೂಪಾಯಿಗಳ ಹಣವನ್ನು ಪ್ರತಿ ವರ್ಷ ಕೊಡಬೇಕೆಂದು ಮತ್ತು ಒಟ್ಟು 5 ವರ್ಷಗಳಲ್ಲಿ 450 ಕೋಟಿ ರೂಪಾಯಿಗಳ ಹಣ ಸೇರುವಂಥ ವ್ಯವಸ್ಥೆ ಇವೊತ್ತು ಆಗಿರತಕ್ಕಂಥದ್ದು. ಆದುದರಿಂದ, ಇವೊತ್ತು ನಾವು ತಿಮ್ಮಯ್ಯನವರ ವರದಿಯನ್ನು ತತ್ವಶಃ ಒಪ್ಪಿಕೊಂಡು, ಅವರ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಮುಂದಿನ 5 ವರ್ಷಗಳಲ್ಲಿ ಅಂದರೆ 1997-98ನೇ ಸಾಲಿನಿಂದ 2002 ಅಥವಾ 2003ನೇ ಇಸವಿಯೊಳಗೆ ಶೇಕಡ 15 ಭಾಗ ಹಣವನ್ನು ಸಂಪೂರ್ಣವಾಗಿ ಸೇರುವಂಥ ವ್ಯವಸ್ಥೆಯನ್ನು ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಗೆ ಹೋಗುವಷ್ಟೇ ಹಣ ಇವೊತ್ತು ಮಹಾ ನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳಿಗೆ ಬರುವಂಥ ಕಾರ್ಯವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಬಹಳಷ್ಟು ಸದಸ್ಯರ ಮನಸ್ಸಿನಲ್ಲಿ ಏನಿದೆಯೆಂದರೆ ನಮ್ಮ ನಮ್ಮ ಪುರಸಭೆಗಳಿಂದ, ನಗರಸಭೆಗಳಿಂದ, ಕಾರ್ಪೋರೇಶನ್‌ಗಳಿಂದ ಏನೂ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲವೆಂದುಕೊಂಡಿದ್ದಾರೆ. ಈ ನೋವು ನಿಮಗೂ ಇದೆ ಮತ್ತು ನಮಗೂ ಗೊತ್ತಿದೆ. ಇವೊತ್ತು ನಮ್ಮ ನಿರೀಕ್ಷೆಯಲ್ಲಿ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜನಗಳಿಗೆ ಬೇಕಾದ ಕನಿಷ್ಟ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಮ್ಮ ಆಸೆಯಾಗಿದೆ. ಆ ದೃಷ್ಟಿಯಿಂದ ಅದನ್ನು ಕಲ್ಪಿಸಬೇಕೆನ್ನುವ ಕಾರ್ಯ ಆಗಬೇಕೆಂದು ಹೇಳಿ ಇವೊತ್ತು 90 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಬರುವಂತೆ ಮಾಡಲಾಗಿದೆ. ಮುಂದಿನ ವರ್ಷ ಕೂಡ ಇನ್ನು 90 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಬರುತ್ತದೆ. ಈ ರೀತಿಯಲ್ಲಿ ಅಭಿವೃದ್ಧಿ ಕೆಲಸದಲ್ಲಿ ಹೆಚ್ಚು ಹಣವನ್ನು ತೊಡಗಿಸುವಂಥ ಕಾರ್ಯವನ್ನು ಮಾಡುತ್ತೇವೆಂದು ಇವೊತ್ತು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಬಗ್ಗೆ ಸಾಕಷ್ಟು ಸದಸ್ಯರುಗಳು ಮಾತನಾಡದಿದ್ದರೂ ಕೂಡ ಮಾತನಾಡಿದ ಮೂರ್‍ನಾಲ್ಕು ಸದಸ್ಯರುಗಳೇ ಈ ಬಗ್ಗೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ನಗರಕ್ಕೆ ನೀರು ಸರಬರಾಜು ಮಾಡುವಂಥ ಕಾರ್ಯ ನಮ್ಮ ಇಲಾಖೆಯಿಂದ ಆಗುತ್ತಿದೆ. ಸುಮಾರು 205 ಪಟ್ಟಣಗಳಿಗೆ ನೀರನ್ನು ಸರಬರಾಜು ಮಾಡುವಂಥ ಕಾರ್ಯವನ್ನು ನಮ್ಮ ಇಲಾಖೆ ಮುಖಾಂತರ ಮಾಡುತ್ತಿದ್ದೇವೆ. ಈ 205 ಪ್ರದೇಶಗಳಲ್ಲಿ 5 ಮಹಾ ನಗರಪಾಲಿಕೆಗಳು, 32 ನಗರಸಭೆಗಳು, 81 ಪುರಸಭೆಗಳು, 82 ಪಟ್ಟಣ ಪ್ರದೇಶಗಳು ಮತ್ತು ಹೊಸದಾಗಿ ಮಂಡಲ್ ಪಂಚಾಯತ್‌ನಿಂದ ಬಂದಂಥ ಸಂಸ್ಥೆಗಳು, ಹೀಗೆ ಒಟ್ಟು 205. ಇದರಲ್ಲಿ 8 ನಗರಸಭೆಗಳು ಸೇರಿರಲಿಲ್ಲ, ಇದರ ಜೊತೆಗೆ ಬೆಂಗಳೂರು ಸೇರಿಕೊಳ್ಳುತ್ತದೆ. ಅದರ ಸುತ್ತಲೂ ಬಂದಂಥ ಸ್ಯಾನಿಟರಿ ಬೋರ್ಡ್, ಹಾಗೂ ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡುತ್ತಿದ್ದಂಥದ್ದು, ಆದರೆ ಈಗ ನಗರಸಭೆಗಳನ್ನು ಮಾಡಿದ್ದರಿಂದ 8 ಪ್ಲಸ್ 1 ಸೇರಿ 9 ಆಗಿದ್ದರಿಂದ ಒಟ್ಟು 214 ಆಗುತ್ತದೆ. ಆದುದರಿಂದ ಅದನ್ನು ಹೊರತುಪಡಿಸಿ ಇವತ್ತು 205 ಪಟ್ಟಣಗಳು ಏನಿವೆ ಈ ರಾಜ್ಯದಲ್ಲಿ ಅವುಗಳಿಗೆ

ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಾರ್ಯವನ್ನು ಮಾಡುತ್ತಿದ್ದೇವೆ ಒಟ್ಟು 110 ಲಕ್ಷ ಜನ ವಾಸ ಮಾಡುತ್ತಿದ್ದಾರೆ. 2021ನೆ ಇಸವಿಯನ್ನು ಗಮನದಲ್ಲಿಟ್ಟುಕೊಂಡರೆ ನಿರೀಕ್ಷಿತ ಜನಸಂಖ್ಯೆ ಸುಮಾರು ಎರಡು ಕೋಟಿ ಬೆಳೆಯುತ್ತದೆ ಎನ್ನುವ ಆಧಾರದ ದೃಷ್ಟಿಯಿಂದ ಇವತ್ತು ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡಿದ್ದೇವೆ ಇವತ್ತು ರಾಜ್ಯದಲ್ಲಿ ಚಾಲ್ತಿಯಲ್ಲಿ ಇರತಕ್ಕಂಥ ಯೋಜನೆಗಳು 110. 110 ರಲ್ಲಿ 98 ನೀರು ಸರಬರಾಜು ಯೋಜನೆ, ಒಳಚರಂಡಿ ಯೋಜನೆ 12 ಇದೆ. ಮಾನ್ಯ ಸದಸ್ಯರು ಒಳಚರಂಡಿ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲ ಎಂದು ಹೇಳಿದರು. ಕೆಲವರು ನಮ್ಮ ನಮ್ಮ ನಗರಗಳಲ್ಲಿ ಇಲ್ಲ ಎಂದು ತಿಳಿಸಿದರು. ಇನ್ನು ಕೆಲವರು ಅರ್ಧ ಪರ್ಸೆಂಟ್ ಇದೆ ಎಂದು ಹೇಳಿದರು. ಒಟ್ಟು 50 ಪರ್ಸೆಂಟ್ ಇದ್ದು ನೀರು ಎಲ್ಲೆಂದರಲ್ಲಿ ಹೋಗುತ್ತದೆ. ಅದಕ್ಕೆ ಟ್ರೀಟ್‌ಮೆಂಟ್ ವ್ಯವಸ್ಥೆ ಇಲ್ಲ. ಆಚೆ ಹೋಗುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಅದರಿಂದ ಸಾಕಷ್ಟು ಸಾಂಕ್ರಾಮಿಕ ರೋಗಗಳು ಬರುತ್ತವೆ. ಮಲೇರಿಯಾ, ಗ್ಯಾಸ್ಟ್ರೋ-ಎಂಟ್ರೈಟೀಸ್ ಈ ರೀತಿಯ ಅನೇಕ ಕಾಯಿಲೆಗಳು ಬಂದು ಜನ, ಮಕ್ಕಳು ಖಾಯಿಲೆಗೆ ತುತ್ತಾಗುತ್ತಿದ್ದಾರೆ, ಆದ್ದರಿಂದ ಇದನ್ನು ಸರಿಪಡಿಸಬೇಕಾಗಿದೆ. ತಾವುಗಳು ಹೇಳಿದಂತೆ ವ್ಯವಸ್ಥೆ 50 ಭಾಗದಷ್ಟು ಇಲ್ಲ. ಇವತ್ತು ಇರತಕ್ಕಂಥ ಒಳಚರಂಡಿ ವ್ಯವಸ್ಥೆ 32 ಭಾಗ ಮಾತ್ರ, ನಮ್ಮ ರಾಜ್ಯದಲ್ಲಿ ಇದೆ. ಬೆಂಗಳೂರನ್ನು ಸೇರಿಸಿಕೊಂಡು ಒಂದು ಕೋಟಿ 50 ಲಕ್ಷ ಜನಸಂಖ್ಯೆಗೆ ಒಳಚರಂಡಿ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಮೂರೂವರೆ ಕೋಟಿ ಜನರಿಗೆ ಈ ವ್ಯವಸ್ಥೆ ಇಲ್ಲ. ಪಟ್ಟಣ ಪ್ರದೇಶದಲ್ಲಿ ಇರತಕ್ಕಂಥ ಅಂಕಿಅಂಶಗಳ ಪ್ರಕಾರ ತಾವು 50 ಭಾಗ ಎಂದು ಹೇಳುತ್ತೀರಿ. ಈಗ ಈ ರಾಜ್ಯದಲ್ಲಿ ಯು.ಜೆ.ಡಿ. ವ್ಯವಸ್ಥೆ ಇರತಕ್ಕಂಥಾದ್ದು ಕೇವಲ 32 ಪರ್ಸೆಂಟ್ ಮಾತ್ರ. ಉಡುಪಿಯಲ್ಲಿ ಯು.ಜೆ.ಡಿ. ಸರಿ ಮಾಡಬೇಕು, ಅದು ಜಿಲ್ಲಾ ಕೇಂದ್ರವಾಗುತ್ತದೆ. ಲಾರ್ಡ್ ಕೃಷ್ಣ ಇರುವಂತಹ ಒಂದು ಪುಣ್ಯ ಕ್ಷೇತ್ರ. ತಾವು ಮತ್ತು ಆಚಾರ್ಯರು ಎಲ್ಲಾ ಹೋಗಿದ್ದಿರಿ, ನಮ್ಮ ಇಂಜಿನಿಯರ್ಸ್ ಬಂದಾಗ ಅಲ್ಲಿ ಸ್ವಲ್ಪ ಜಾಗ ಕೊಡುವುದಕ್ಕೆ ಅಡ್ಡಿಪಡಿಸಿದ್ದೂ ತಮಗೆ ಗೊತ್ತಿದೆ. ಜಾಗ ಬಿಡುವುದಕ್ಕೆ ಸಿದ್ಧರಿಲ್ಲ. ಟ್ರೈನ್ ರಸ್ತೆ ಪಕ್ಕದಲ್ಲಿ ಬರುತ್ತದೆ ಆ ಒಳಚರಂಡಿ ವ್ಯವಸ್ಥೆಗೆ ಸ್ವಲ್ಪ ಜಮೀನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋದಾಗ ಅದನ್ನು ಬಿಟ್ಟುಕೊಡದೇ ಇರುವಂತಹ ಪರಿಸ್ಥಿತಿ ಇಲ್ಲಿ ಉಂಟಾಗಿದೆ. ಒಂದು ಲಕ್ಷ ಇಪ್ಪತ್ತೈದು ಸಾವಿರ ಜನ ಇರುವಂತಹ ಊರಿನಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಡಿ ಎಂದು ತಾವು ತಿಳಿಸಿದ್ದೀರಿ. ಹುಬ್ಬಳ್ಳಿ ಧಾರವಾಡಕ್ಕೂ ಸಹ ಒಂದು ಸಮಗ್ರ ಯೋಜನೆ ಮಾಡಿ ನಾವು ಹೋಗಿ ನೋಡಿದೆವು. ಅಲ್ಲಿ ಜಮೀನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಅಲ್ಲಿ ಟ್ರೀಟ್‌ಮೆಂಟ್ ಮಾಡಬೇಕಾದಂತಹ ವ್ಯವಸ್ಥೆ ಇದೆ. ಎಲ್ಲೆಲ್ಲೋ ನೀರು ಹರಿದು, ಆಚೆ ಕಣಿವೆಯಲ್ಲಿ ಓಣಿಯಲ್ಲಿ ನೀರು ಬಿಟ್ಟಿರುವಂತಹ ಪರಿಸ್ಥಿತಿಯನ್ನು ನಾವು ಇಂದು ಕಾಣುತ್ತಿದ್ದೇವೆ. ಅದಕ್ಕೋಸ್ಕರ ಯು.ಜೆ.ಡಿ. ಒಂದು ದೊಡ್ಡ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ವರ್ಲ್ಡ್ ಬ್ಯಾಂಕ್ ಅಥವಾ ವೈ.ಸಿ.ಎಫ್. ಹೊರರಾಷ್ಟ್ರದ ಹಣಕಾಸಿನ ಸಂಸ್ಥೆಗಳಿಗೆ ಒಪ್ಪಿಸಿ ಆ ಮೂಲಕ ಅಭಿವೃದ್ಧಿಪಡಿಸಬೇಕೆಂದು ಕಾರ್ಯಕ್ರಮಗಳನ್ನು ಇವತ್ತು ಹಾಕಿಕೊಳ್ಳಲಾಗಿದೆ. ಕರ್ನಾಟಕ ನೀರು ಸರಬರಾಜು ಯೋಜನೆಯಲ್ಲಿ 449 ಕೋಟಿ ರೂಪಾಯಿಗಳು 39 ಲಕ್ಷ ರೂಪಾಯಿಗಳ ಯೋಜನೆಗಳನ್ನು ಚಾಲ್ತಿಯಲ್ಲಿ ತೆಗೆದುಕೊಂಡಿದ್ದೇವೆ. ಈಗಾಗಲೇ

ಚಾಲ್ತಿಗೊಳಿಸಿರುವ 110ರಲ್ಲಿ 39 ಯೋಜನೆಗಳು ಪೂರ್ತಿಯಾಗಿದೆ. ಇನ್ನು ಉಳಿದ 71 ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯಲ್ಲಿ 66 ನೀರು ಸರಬರಾಜು ಯೋಜನೆ ಇವತ್ತು ಮಾಡಬೇಕಾಗಿದೆ. ಒಳಚರಂಡಿ ಯೋಜನೆ 5 ಇದೆ. ಈ 71 ಯೋಜನೆಗಳಲ್ಲಿ 1997-98ನೇ ಸಾಲಿನಲ್ಲಿ 26 ಯೋಜನೆಗಳನ್ನು ಈ ವರ್ಷದಲ್ಲಿ ಕಾರ್ಯಗತ ಮಾಡುತ್ತೇವೆ. ಮುಂದಿನ ಮಾರ್ಚ್ ಹೊತ್ತಿಗೆ 26 ಯೋಜನೆಗಳನ್ನು ನಾವು ಕಾರ್ಯಗತ ಮಾಡಬೇಕೆಂದು ಹೇಳಿ ಅದಕ್ಕೆ ಸುಮಾರು 164 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಸ್ವಾತಂತ್ರದ ಸುವರ್ಣೋತ್ಸವದ ಕಾರ್ಯಕ್ರಮ ಎಂದು ಹೇಳಿ ಈ ವರ್ಷ ನಮ್ಮ ಇಲಾಖೆವತಿಯಿಂದ ಸಾಧನೆ ವರ್ಷ ಎಂದು ತೆಗೆದಕೊಂಡು ಆಗಸ್ಟ್ 15 ಕ್ಕೆ ಸುಮಾರು ಎಂಟು ಯೋಜನೆಗಳನ್ನು ಉದ್ಘಾಟನೆ ಮಾಡಬೇಕೆಂದು ಕಾರ್ಯಕ್ರಮ ಹಾಕಲಾಗಿದೆ. ಶಿವಮೊಗ್ಗ, ಬಿಜಾಪುರ, ಅರಸೀಕೆರೆ, ತಿಪಟೂರು ತುಮಕೂರು, ಗಂಗಾವತಿ, ಜೇವರ್ಗಿ ಮತ್ತು ಸಿರಸಿ ಇಷ್ಟು ಕಡೆಗಳಲ್ಲಿ ಯೋಜನೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. 1997-98ನೇ ಸಾಲಿನ ನಮ್ಮ ಮಂಡಲಿಯ ಆಯವ್ಯಯ ಸುಮಾರು 164 ಕೋಟಿ ರೂಪಾಯಿಗಳು. ಇದರಲ್ಲಿ ಸರ್ಕಾರದಿಂದ ಬಂದಂತಹ ಹಣ 75 ಕೋಟಿ ರೂಪಾಯಿಗಳು. ಎಲ್.ಐ.ಸಿ. ಯಿಂದ ಈ ಯೋಜನೆಗೆ ಬರುವಂತಹ ಹಣ 8 ಕೋಟಿ 75 ಲಕ್ಷ ರೂಪಾಯಿಗಳು. ಹುಡ್ಕೋ ನೆರವಿನಿಂದ 89 ಕೋಟಿ ರೂಪಾಯಿಗಳು ಬರುತ್ತದೆ. ಹುಡ್ಕೋ ಬಹಳಷ್ಟು ನೆರವನ್ನು ನಮ್ಮ ಕರ್ನಾಟಕ ನೀರು ಸರಬರಾಜು ಯೋಜನೆಗೆ ಕೊಡುತ್ತಿದೆ. ಇದರಿಂದ ಒಟ್ಟು164 ಕೋಟಿ ರೂಪಾಯಿಗಳ ಯೋಜನೆಗಳನ್ನು ಹಾಕಿಕೊಂಡಿದ್ದು, ಇನ್ನು 26 ಕಾರ್ಯಕ್ರಮಗಳಲ್ಲಿ 23 ನೀರು ಸರಬರಾಜು ಮತ್ತು 3 ಒಳಚರಂಡಿ ಯೋಜನೆಗಳನ್ನು ಮಾಡುವಂಥಾದ್ದು ಮತ್ತು ಉಳಿದ 71 ಯೋಜನೆಗಳನ್ನು ಇನ್ನು ನಾಲ್ಕು ವರ್ಷಗಳಲ್ಲಿ ಅಂದರೆ 2000 ವರ್ಷಕ್ಕೆ ಮುಗಿಸುವಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ. ಇದರಲ್ಲಿ ಒಟ್ಟಾರೆ 168 ನಗರ ಪ್ರದೇಶಗಳಿಗೆ ಸಮರ್ಪಕವಾಗಿ ನೀರು ಕೊಡುವಂಥಾದ್ದಕ್ಕೆ ಒಂದು ನೀಲಿ ನಕ್ಷೆಯನ್ನು ಮಾಡಲಾಗಿದೆ ಒಟ್ಟಾರೆ 1,500 ಕೋಟಿ ರೂಪಾಯಿಗಳು ಆಗ್‌ಮೆಂಟೇಷನ್ ಮತ್ತು ಇಂಪ್ರೂವ್‌ಮೆಂಟ್‌ಗೆ ಆಗುತ್ತದೆ. ಎರಡೂ ಮಾಡುವಂತಹ ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಅದರಲ್ಲೂ ವಿಶೇಷವಾಗಿ 17 ಯೋಜನೆಗಳು ಇವತ್ತು ರಾಜ್ಯದಲ್ಲಿ ಹುಡ್ಕೋ ನೆರವಿನಿಂದ ಸಾಲ ಪಡೆದು ಸರ್ಕಾರದಿಂದ ಅನುಮೋದನೆ ಪಡೆಯುತ್ತಿದೆ. ಆ ಯೋಜನೆಗೆ 183 ಕೋಟಿ ರೂಪಾಯಿಗಳಷ್ಟು ಹಣ ನಮಗೆ ಖರ್ಚಾಗುತ್ತದೆ. ಆ 17 ಯೋಜನೆಗಳು ಆಗುವ ಪಟ್ಟಣಗಳು ಯಾವುದೆಂದರೆ ಚಿಕ್ಕಮಗಳೂರು, ಮಾನ್ಯ ಸಗೀರ್ ಅಹ್ಮದ್‌ರವರಿಗೆ ಖುಷಿಯಾಯಿತು. ಕಮಲಾಪುರ ಸಿರಗುಪ್ಪ, ಹಾವೇರಿ, ಜಮಖಂಡಿ. ಸಗೀರ್ ಅಹ್ಮದ್‌ರವರ ಬಗ್ಗೆ ಏಕೆ ಹೇಳಿದೆಯೆಂದರೆ ಅವರು ಯಗಚಿ ನದಿಯಿಂದ ನೀರು ಬರಬೇಕೆಂದು, ಅವರು ಮಂತ್ರಿಗಳಾಗಿದ್ದಾಗ, ಒಂದು ಯೋಜನೆಯನ್ನು ಇಟ್ಟುಕೊಂಡಿದ್ದರು. ಅಲ್ಲಿ ಭೂಸ್ವಾಧೀನವಾಗದೆ ಬೇಲೂರಿನವರು ಗಲಾಟೆ ಮಾಡಿದರು. ನಮಗೆ ಇರಿಗೇಷನ್‌ಗೆ ಬೇಕು ಎಂದು. ನೀರು ಕೊಡುವುದಕ್ಕೆ ಒಪ್ಪಲಿಲ್ಲ ಇದು ಮಾನ್ಯ ಶಿವಪ್ಪನವರಿಗೆ ಗೊತ್ತು. ಇವತ್ತು ಬೇಕಾದಷ್ಟು ನೀರು ಯಗಚಿ ನದಿಯಲ್ಲಿ ಇದೆ. ಅದು ಒಟ್ಟಾರೆ ಬೇಲೂರು ಮತ್ತು ಚಿಕ್ಕಮಗಳೂರಿಗೆ ಕೊಡುವಂತಹ ಜಂಟಿ ಯೋಜನೆ. ಅದು ಕಾರ್ಯಗತವಾಗುತ್ತದೆ ಎಂದು ಅವರಿಗೆ ಖುಷಿ. ಇದರ ಬಗ್ಗೆ ಚಿಕ್ಕಮಗಳೂರಿನಲ್ಲಿ

ಒಂದು ಸಭೆಯಲ್ಲಿ ಅನೌನ್ಸ್ ಮಾಡಿದರು. ಅದಕ್ಕೆ ಹುಡ್ಕೋ ನೆರವು ಕೊಟ್ಟು ಈಗ ಅದು ಮಂಜೂರಾತಿ ಆಗಿದೆ. ಅದಕ್ಕೆ ಆಡಳಿತಾತ್ಮಕ ಅನುಮೋದನೆ ಆಗಿದೆ. ಜಮಖಂಡಿ, ಹೊಳೆನರಸೀಪುರ, ಚನ್ನರಾಯಪಟ್ಟಣ, ಮೂಡಲಗಿ ಕೆ.ಆರ್.ನಗರ, ಶಿಕಾರಿಪುರ ಮತ್ತು ಹರಿಹರ, ಇನ್ನು ಉಳಿದಂತಾದ್ದು ರಾಯಚೂರು, ಬಸವನ ಬಾಗೇವಾಡಿ, ಬಸವ ಕಲ್ಯಾಣ, ಹರಪನಹಳ್ಳಿ, ದಾವಣಗೆರೆ ಮತ್ತು ಬೆಂಗಳೂರು. ಇವುಗಳಿಗೂ ಹುಡ್ಕೋ ನೆರವು ಕೊಡುತ್ತಾರೆ. ಅದಕ್ಕೆ ನಮ್ಮ ಸರ್ಕಾರದ ಹಣಕಾಸಿನ ಇಲಾಖೆಯಲ್ಲಿ ಮಂಜೂರಾತಿ ಮಾಡಿಸಿಕೊಳ್ಳಬೇಕು.

ಅಧ್ಯಕ್ಷರು : ಗುರುಮಿಠಕಲ್, ಚಾಮರಾಜನಗರ ಇಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ :- ಚಾಮರಾಜನಗರದ್ದು ಮೊದಲೇ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅವರನ್ನು ಆಮೇಲೆ ಸ್ಪಷ್ಟೀಕರಣ ಕೇಳೋಣವೆಂದು ಇದ್ದೆ. ತಮಗೆ ನಮ್ಮ ಬಗ್ಗೆ ಇರತಕ್ಕಂಥ ಅಭಿಮಾನಕ್ಕೆ ನೂರು ಅಭಿನಂದನೆಗಳು. ನಮ್ಮ ಬಗ್ಗೆ ತಮಗೆ ಎಷ್ಟು ಪ್ರೀತಿ ಇದೆ.

ಅಧ್ಯಕ್ಷರು : ನೂರು ಎಂದರೆ ಕಡಿಮೆಯಾಗುತ್ತದೆ. ಅಪಾರ ಅಭಿನಂದನೆಗಳು ಎನ್ನಿ.

ಶ್ರೀ ವಾಟಾಳ್ ನಾಗರಾಜ್ : ಅಪಾರ ಅಭಿನಂದನೆಗಳು, ನಾನು ಆಮೇಲೆ ಕೇಳೋಣ ಎಂದು ಇದ್ದೆ. ತಾವು ಕೇಳಿದಿರಿ. ಚಾಮರಾಜನಗರಕ್ಕೆ ನೀರು ಕೊಡುತ್ತೇವೆಂದು ಹೇಳಿ ಐದು ವರ್ಷಗಳಾಯಿತು. ಪಾಪ, ನಿಜವಾಗಲೂ ಈ ಸದನದಲ್ಲಿ ವೀರೇಂದ್ರ ಪಾಟೀಲರನ್ನು ನೆನೆದುಕೊಳ್ಳಬೇಕು. ಅವರು ಶಂಕುಸ್ಥಾಪನೆ ಮಾಡಿ 5-6 ವರ್ಷಗಳಾಯಿತು. ಈ ಶಾಸನ ಸಭೆ ಚುನಾವಣೆ ಬರುವುದರೊಳಗಾಗಿ ಮಾಡಿಬಿಡಿ ಏಕೆಂದರೆ ನಾವು ಚುನಾವಣೆಯಲ್ಲಿ ನಿಲ್ಲಬೇಕು ಎಂದು ಮೊದಲೇ ಹೇಳಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ರಿಕ್ವೆಸ್ಟ್ ಮಾಡುವುದು ಒಂದೇ ಕಡೆ. ಮತ್ತೆ ಇವರ ಕಾಟ ತಾಳಲಾರದೆ ಕೆಲವರು ಏನಾದರೂ ಸಣ್ಣಸಣ್ಣ ಸ್ಕೀಮ್ ಮಾಡಿಯೇ ಮಾಡುತ್ತಾರೆ. ಅದು ಕುಡಿಯುವ ನೀರು ಇರಬಹುದು, ಮನೆ ಇರಬಹುದು, ಕೆರೆ ಇರಬಹುದು. ರಸ್ತೆ ಇರಬಹುದು ಮತ್ತೆ ಆ ಊರಿಗೂ ಹೋಗುವುದಕ್ಕೆ ಎಲ್ಲರೂ ಹೆದರುತ್ತಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ 15ನೇ ತಾರೀಖು ಜಿಲ್ಲೆ ಘೋಷಣೆ ಮಾಡಬೇಕು ಎಂದು ಅವರನ್ನು ಆಹ್ವಾನ ಮಾಡಿದರು. ಅವರು ರ್‍ಯಾಷನಲಿಸ್ಟ್, ಇಂಥಾದ್ದಕ್ಕೆಲ್ಲ ನಂಬಲಾರದಂತಹವರು, ಅಂಧಶ್ರದ್ಧೆಯಲ್ಲಿ ಅವರಿಗೆ ವಿಶ್ವಾಸ ಇಲ್ಲ. ಆದರೂ ಕೂಡ ಅಂಥವರು ಇವತ್ತಿನ ದಿವಸ ಚಾಮರಾಜನಗರವನ್ನು ಅವಾಯ್ಡ್ ಮಾಡಿ, ಬರೀ ಮಹದೇಶ್ವರ ಬೆಟ್ಟಕ್ಕೆ ಹೋಗಿ ಅಲ್ಲಿ ಜಿಲ್ಲೆ ಎಂದು ಘೋಷಣೆ ಮಾಡಿ, ಮತ್ತೆ ಅಲ್ಲಿಂದ ಅನಾಮತ್ ಹಾರಿ ಬೆಂಗಳೂರಿಗೆ ಬರುತ್ತಿದ್ದಾರೆ. ಎಂದರೆ ನಿಮ್ಮ ಚಾಮರಾಜನಗರದ ಪ್ರಭಾವ ಎಷ್ಟಿದೆ, ಅಲ್ಲಿ ಹೋದರೆ ಸಾಕು ಹಿಡಿದುಕೊಂಡು ಬಿಡುತ್ತಾದಂತೆ. ಅದು ಒಂದುಯಮ ನಗರ. ಏನೋ ಗೊತ್ತಿಲ್ಲ. ಅದಕ್ಕೆ ಎಲ್ಲರೂ ಹೆದರುತ್ತಾರೆ. ಮತ್ತು ಅದಕ್ಕೆ ಸಲಹೆ ಕೊಟ್ಟಿದ್ದಾರೆ. ಸರ್ ಈ ತಾಪತ್ರಯ ನಿಮಗೆ ಆಗುತ್ತಿಲ್ಲ, ಬೇಡ. ಹಿಂದಿನವರಿಗೆ ಆಯಿತು ಬಿಡಿ. ನೀವು ಮಾತ್ರ ಮಹದೇಶ್ವರ

ಬೆಟ್ಟಕ್ಕೆ ಬಂದು ಅಲ್ಲಿ ಜಿಲ್ಲೆ ಎಂದು ಘೋಷಣೆ ಮಾಡಿ ವಾಪಸ್ಸು ಬನ್ನಿ ಎಂದು ರಿಕ್ವೆಷ್ಟ್ ಮಾಡಿಕೊಂಡಮೇಲೆ ಈ ಕಾರ್ಯಕ್ರಮಗಳು ನಡೆದಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಾಗಬಾರದು ಎಂದು ಇತ್ತು, ತಕ್ಷಣ ಬಂದು ಬಿಟ್ಟಿತ್ತು. ಈ ಚಾಮರಾಜನಗರದ ಬಗ್ಗೆ ಬಹಳ ಜನರಿಗೆ ತಿಳುವಳಿಕೆ ಇಲ್ಲವೇ ಇಲ್ಲ. ಯಾವ್ಯಾವುದೋ ಕಾರಣಕ್ಕೆ ಇವರು ರಾಜೀನಾಮೆ ಕೊಟ್ಟು ಅಧಿಕಾರ ಕಳೆದು ಕೊಂಡರೆ ಚಾಮರಾಜನಗರದ ಮೇಲೆ ಗುರುತರವಾದ ಆಪಾದನೆ ಮಾಡುತ್ತಿದ್ದೀರಿ. ಚಾಮರಾಜನಗರ ಅತ್ಯಂತ ಗಂಡುಮೆಟ್ಟಿನ ಧೀಮಂತ ಗಡಿ ಜಿಲ್ಲೆಯಾಗುತ್ತಿದೆ. ಮತ್ತು ಅತ್ಯಂತ ಪವಿತ್ರ ಸ್ಥಳ. ಸುತ್ತ ಅರಣ್ಯ ಪ್ರದೇಶ. ಬಿಳಿಗಿರಿ ರಂಗನಾಥನ ದೇವಸ್ಥಾನ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಂಡು ಮೆಟ್ಟಿನ ನಗರ ಎಂದು ಏಕೆ ಎಲ್ಲಾದಕ್ಕೂ ಹೇಳುತ್ತೀರಿ? ಹೆಣ್ಣು ಮೆಟ್ಟಿದ ನಗರ ಎಂದು ಹೇಳಬೇಕು. ತಾವು ಹೇಳುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ವೀರ ಗಂಡು, ವೀರ ಮಹಿಳೆ ಮೆಟ್ಟಿದ ಜಾಗ ಆದ್ದರಿಂದ ನನಗೆ ಅನ್ನಿಸುತ್ತದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್. ಪಟೇಲರು ಸಮಾಜವಾದಿ ಸಿದ್ಧಾಂತಕ್ಕೆ ಅತ್ಯಂತ ಪ್ರಾಮಾಣಿಕವಾಗಿ ದುಡಿದಂತಹ ವ್ಯಕ್ತಿ. ಅವರು ಇತಿಹಾಸದಲ್ಲಿ ಪ್ರತಿಯೊಬ್ಬರನ್ನು ಇಂತಹ ವಿಚಾರಗಳ ಬಗ್ಗೆ ಯಾವಾಗಲೂ ಅವರು ವಿರೋಧ ಮಾಡಿದಂತಹ ವ್ಯಕ್ತಿ. ಆದರೆ ಮುಖ್ಯಮಂತ್ರಿಗಳಾದ ನಂತರ ಈ ಜಾತಿಗಳೆಲ್ಲ ಅವರ ಸುತ್ತ ಸೇರಿಕೊಂಡಿದೆ. ಇದು ಏತಕ್ಕೆ ಬಂತು ಏತಕ್ಕೆ ಸೇರಿತು ಎನ್ನುವುದು ನೋವಿನ ಪ್ರಸಂಗ. ಅಂಥದ್ದರಲ್ಲಿ ಈ ಜಿಲ್ಲೆ ಮಾಡುವಾಗ ಚಾಮರಾಜನಗರಕ್ಕೆ ಹೋಗಬೇಡಿ ಸ್ವಾಮಿ ಎಂದು ಯಾರು ಯಾರೋ ಕೆಲವರು ಭಯವನ್ನು ಹುಟ್ಟಿಸಿದ್ದಾರೆ. ಇದು ಒಳ್ಳೆಯದಲ್ಲ. ಈಗಲೂ ಅವರು ತಮ್ಮ ಮನಸ್ಸು ಬದಲಾವಣೆ ಮಾಡಿ ಬರುವುದಾದರೆ ಅತ್ಯಂತ ಸಂತೋಷದಿಂದ ಅಭಿಮಾನದಿಂದ ಇಡೀ ರಾಜ್ಯದ ಜನತೆಯ ಪರವಾಗಿ ಗಡಿ ಜಿಲ್ಲೆಗೆ ಅವರನ್ನು ಸ್ವಾಗತ ಮಾಡುತ್ತೇನೆ. ಅವರಿಗೆ ಭಯಭೀತಿ ಬಂದು ಬಿಟ್ಟಿದ್ದರೆ ನಾನು ಏನು ಮಾಡುವುದಕ್ಕೆ ಆಗುವುದಿಲ್ಲ. ವಾಟಾಳ್‌ನಾಗರಾಜ್ ಕರೆದುಕೊಂಡು ಹೋದರು ಅದಕ್ಕೋಸ್ಕರ ನಮ್ಮ ಸರ್ಕಾರ ಬಿದ್ದು ಹೋಯಿತು ಎಂದು ಬಿಟ್ಟರೆ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮಗೊಂದು ಸುದ್ದಿ ಏನೆಂದರೆ, ಆ ರೀತಿಯ ರಾಜಕೀಯ ಗೊಂದಲ ಪ್ರಾರಂಭವಾದ ಮೇಲೆ ನೀವು ಬಂದು ಹೆಚ್ಚು ಕಡಿಮೆ ಆದರೆ ನನ್ನ ಮೇಲೆ ಬರುತ್ತದೆಂದು ಬಹಿರಂಗವಾಗಿ ಹೇಳಿದ್ದೀರಿ. ನೀವು ದಯಮಾಡಿ ಬರಬೇಡಿ. ಹಿಂದೆ ಇಂಥ ಅನೇಕ ತರಹದ ಘಟನೆಗಳು ಆಗಿವೆ. ನಾನು ಅದಕ್ಕೆ ಕಾರಣಕರ್ತನಾಗಬೇಕು ಎಂದು ಹೇಳಿದಿರಿ ಎಂದು ಎಲ್ಲಾ ವಲಯಗಳಲ್ಲಿ ಚರ್ಚೆಯಾಗುತ್ತಿದೆ. ಇದರ ಸತ್ಯಾಂಶ ಏನು?

ಶ್ರೀ ವಾಟಾಳ್ ನಾಗರಾಜ್ : ತೆರೆಯಲ್ಲಿ ಒಂದು ಮರೆಯಲ್ಲಿ ಒಂದು ಹೇಳುವಂಥದ್ದು ಇದು ಯಡಿಯೂರಪ್ಪನವರಿಗೆ ಸೇರಿದ್ದುದು ಮತ್ತು ಬಿಜೆಪಿಗೆ ಸೇರಿದ್ದುದು, ನಮಗಲ್ಲ ಇದು.

ಅಧ್ಯಕ್ಷರು : ನೋಡಿ, ಖರ್ಗೆಯವರು ಇದೇ ಮಾತನ್ನು ಹೇಳಿದರು. ನಾನೂ ಸಹ ಅನೇಕ ಜನರಿಂದ ಇದೇ ಮಾತನ್ನು ಕೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ನನ್ನ ಮಾತನ್ನು ನಂಬುವುದಿಲ್ಲವೆ?

ಅಧ್ಯಕ್ಷರು : ನಾನು ನಂಬುತ್ತೇನೆ. ಆದರೆ, ನಿಮ್ಮ ಮೇಲೆ ಇದರ ಬಗ್ಗೆ ಪುಕಾರು ಹುಟ್ಟಿದೆ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ಪ್ರಕಾಶ್‌ರವರೇ, ತಾವೇ ಹೇಳಬೇಕು. "ಹರಕೊಲ್ಲಲ ಪರಕಾಯ್ವನೆ?" ಮುಗಿದು ಹೋಯಿತಲ್ಲಾ ನಮ್ಮ ಕಥೆ. ಯಾರು ರಕ್ಷಣೆ ಇಲ್ಲ ಅಂದರೆ ನನ್ನ ಪರಿಸ್ಥಿತಿ ಏನು? ನೀವು ನನಗೆ ಆಪ್ತರು ನೀವೇ ರಕ್ಷಣೆ ಕೊಡಲಿಲ್ಲ ಅಂದಮೇಲೆ ಬೇರೆ ಯಾರು ಕೊಡುತ್ತಾರೆ?

ಅಧ್ಯಕ್ಷರು : ನಿಮ್ಮ ಮೇಲೆ ನನಗೆ ನಂಬಿಕೆ ಇದೆ. ಅವರು ಯಾರು ಏನೇ ಹೇಳಿದರೂ ಕೂಡ ಕೇಳುವುದಿಲ್ಲ. ಆದರೆ ಪುಕಾರು ಹುಟ್ಟಿದೆ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಸಾರ್, ಇದು ಸತ್ಯಕ್ಕೆ ಬಹಳ ದೂರವಾದುದು.

ಶ್ರೀ ಅರಗ ಜ್ಞಾನೇಂದ್ರ : ಮೊನ್ನೆಯ ದಿವಸ ಅಯ್ಯಪ್ಪಸ್ವಾಮಿ ದರ್ಶನ ಮಾಡಿದ ಮೇಲೆ ಇದು ಎಲ್ಲಾ ಪರಿಹಾರವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ನಮ್ಮ ಕ್ಷೇತ್ರಕ್ಕೆ ಬಂದರೆ ಇನ್ನೂ ಒಂದು ಪಟ್ಟು ಮುಖ್ಯಮಂತ್ರಿ ಆಗುತ್ತಾರೆ. ಅವರು ಬಂದು ನೋಡಲಿ ಇದು ಏನೂ ಇಲ್ಲ ಸುಮ್ಮನೆ ಗಾಬರಿ ಹುಟ್ಟಿಸಿ ಬಿಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಿದ್ದರೆ, ಮಹದೇಶ್ವರ ಬೆಟ್ಟಕ್ಕೆ ಹೋಗಿ ಪೂಜೆ ಮಾಡಿ ಅಲ್ಲೇ ಒಂದು ಬೋರ್ಡ್ ಹಚ್ಚಿ, ಉದ್ಘಾಟನೆ ಮಾಡಿ ಬಂದು ಬಿಡಿ ಸ್ವಾಮಿ ಎಂದು ಏಕೆ ಹೇಳಬೇಕಾಗಿತ್ತು?

ಶ್ರೀ ವಾಟಾಳ್ ನಾಗರಾಜ್ : ಮೊದಲಿನಿಂದಲೂ ಇದರಲ್ಲಿ ಕಿತಾಪತಿ ಇದೆ. ಇದು ನಮ್ಮ ಖರ್ಗೆಯವರ ಮತ್ತು ಯಡಿಯೂರಪ್ಪನವರ ಪಿತೂರಿ. ತಾವು ಇದಕ್ಕೆ ಸೇರಿಲ್ಲ, ನನಗೆ ಗೊತ್ತು, ಸುಮ್ಮನೆ ಹೇಳುತ್ತಾರೆ. ಇದು ಸತ್ಯಕ್ಕೆ ದೂರವಾದದ್ದು. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ನಾನು ಇವತ್ತು ಒಂದು ಸಾವಿರ ಸಲ ಎರಡೂ ಕೈಜೋಡಿಸಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬರಲಿ, ನಾನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುತ್ತೇನೆ. ಒಂದು ತಿಂಗಳಿಂದ ನಾನು ದಯವಿಟ್ಟು ಬನ್ನಿ ಏನೂ ಆಗುವುದಿಲ್ಲ ಎಂದು ಅವರನ್ನು ಒತ್ತಾಯ ಮಾಡುತ್ತಿದ್ದೇನೆ. ಆದರೆ, ಅವರು ನಾನು ಬರುವುದಕ್ಕೆ ತಯಾರಾಗಿದ್ದೇನೆ. ಸುತ್ತಮುತ್ತ ಯಾರ್‍ಯಾರೋ ಬಂದು ಬರಬೇಡಿ, ಬರಬೇಡಿ ಎಂದು ಹೇಳಿತ್ತಿದ್ದಾರೆಂದು ಹೇಳುತ್ತಾರೆ ಆದರೆ, ಅವವು ಯಾರು ಎಂದು ಅವರ ಹೆಸರು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುತ್ತಮುತ್ತ ಯಾರಿರುತ್ತರೆ? ಮಾನ್ಯ ಪ್ರಕಾಶ್‌ರವರು ಇರುತ್ತಾರೆ, ಮಾನ್ಯ ಸಿದ್ಧರಾಮಯ್ಯನವರು ಇರುತ್ತಾರೆ. ಸುತ್ತಮುತ್ತ ಇರುವವರು ಅವರೇ ತಾನೇ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಎಲ್ಲಾ ಶಾಸಕರು, ನಾಗಪ್ಪನವರು, ಸಿದ್ಧರಾಮಯ್ಯನವರು ಎಲ್ಲರೂ ಸೇರಿ ಚಾಮರಾಜನಗರಕ್ಕೆ ಹೋಗಬೇಕು ಎಂದು ಹೇಳಿದ್ದೇವೆಯೇ ಹೊರತು ಬೇರೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮ್ಮ ಮೂಲಕ ಮನವಿ ಮತ್ತೊಮ್ಮೆ ಮಾಡಿಕೊಳ್ಳುತ್ತಿದ್ದೇನೆ. ಎಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಮನವಿಯನ್ನು ಸಲ್ಲಿಸುತ್ತೇನೆ. ಪರಮ ಪವಿತ್ರವಾದಂತಹ ಸ್ಥಳ ಕರ್ನಾಟಕ ರಾಜ್ಯದಲ್ಲಿ ಚಾಮರಾಜನಗರ ಕ್ಷೇತ್ರ, ಅದರಲ್ಲಿ ಏನು ಅನುಮಾನಪಡುವುದು ಬೇಡ.

ಅಧ್ಯಕ್ಷರು : ಅದು ನಿರ್ವಿವಾದ, ನೀವು ಗೆದ್ದು ಬಂದಿರುವುದರಿಂದಲೇ ನಮಗೆ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಸತ್ಯವಾಗಿ ಹೇಳುತ್ತಿದ್ದೀರಿ. ತಮ್ಮ ಈ ಮಾತಿನಿಂದ ನನಗೆ ಬಹಳ ಖುಷಿಯಾಯಿತು. ಇನ್ನೂ 10 ಬಾರಿ ಗೆಲ್ಲುತ್ತೇನೆ, ಅದರ ಬಗ್ಗೆ ಚಿಂತೆ ಇಲ್ಲವೆಂದು ನನಗನ್ನಿಸುತ್ತದೆ. ಈ ಮೂಢನಂಬಿಕೆಗಳನ್ನು ಬಿಟ್ಟು ಈ ಸ್ಥಳಕ್ಕೆ ಬಂದರೆ ಒಳ್ಳೆಯದು. ಸುಮ್ಮನೆ ಈ ಸ್ಥಳದ ಬಗ್ಗೆ ಅಲ್ಲಿನ ಜನರ ಬಗ್ಗೆ ಕೆಟ್ಟ ಭಾವನೆಯನ್ನು ತಾಳುವುದು ಬೇಡ. ಯಾವುದೋ ಕಾರಣಕ್ಕಾಗಿ ಅಧಿಕಾರ ಕೊಳೆದುಕೊಂಡರೆ ಚಾಮರಾಜನಗರ ಕಾರಣ ಎಂದು ಹೇಳುತ್ತಿದ್ದೀರಲ್ಲ!

ಅಧ್ಯಕ್ಷರು : ಅದು ತಪ್ಪು.

ಶ್ರೀ ವಾಟಾಳ್ ನಾಗರಾಜ್ : ಇದು ಅನಾಗರೀಕವಾದಂಥದ್ದು ಮತ್ತು ಅತ್ಯಂತ ಅವಿವೇಕತನದ್ದು ಎಂದು ನಾನು ಅಂದುಕೊಂಡಿದ್ದೇನೆ; ಸ್ವಾಮಿ, ಈಗ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಚಾಮರಾಜನಗರ ಜಿಲ್ಲೆಯಾಗುತ್ತಿದೆ. ದಯಮಾಡಿ ತಾವು ಚುನಾವಣೆಯ ಒಳಗಾಗಿ ಸ್ಪಷ್ಟಪಡಿಸಬೇಕು. ನಾವೆಲ್ಲಾ ಚುನಾವಣೆಗೆ ನಿಲ್ಲಬೇಕು. ನೀವು ಚುನಾವಣೆಗೆ ಬರಬೇಕು. ಮತ ಕೇಳಬೇಕು ಅದಕ್ಕೆ ಈ ಕೆಲಸವನ್ನು ಮಾಡಬೇಕು. ಪ್ರಾಮಾಣಿಕವಾಗಿ ಎಷ್ಟು ದಿವಸದ ಒಳಗಾಗಿ ತಾವು ಮುಗಿಸುತ್ತೀರಿ? ನನಗೆ ಗೊತ್ತು, ತಾವು ಬೇಗ ಮುಗಿಸಿಕೊಡುತ್ತೀರೆಂದು ನನಗೆ ನಂಬಿಕೆ ಇದೆ. ನಿಮ್ಮ ಅಧಿಕಾರಿಗಳಾದ ಗೋವಿಂದರಾಜ್, ಪಾಂಡೆ, ನಿಮ್ಮ ಇಂಜಿನಿಯರ್ ಶ್ರೀನಿವಾಸ್ ರೆಡ್ಡಿ ಇವರೆಲ್ಲರೂ ಬಹಳ ಪ್ರಯತ್ನಪಟ್ಟಿದ್ದಾರೆ. ಗೋವಿಂದರಾಜ್, ಪಾಂಡೆ, ಶ್ರೀನಿವಾಸರೆಡ್ಡಿ, ಇವರೆಲ್ಲರಿಗೂ ನಾನು ಈಈ ಸದನದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದ್ದರಿಂದ, ದಯಮಾಡಿ ತಾವು ಈ ಕಾರ್ಯಕ್ರಮವನ್ನು ಇಷ್ಟು ದಿವಸಗಳಲ್ಲಿ ಮುಗಿಸುತ್ತೇವೆಂದು ಒಂದು ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು : ಈ ಸದನದಲ್ಲಿ ನೀವು ಅಭಿನಂದನೆಯನ್ನು ಸಲ್ಲಿಸಿದ ಮೇಲೆ ನೀವು ಬೇಡ ಅಂದರೂ ಸಹ ಅವರೇ ನಿಂತುಕೊಂಡು ಕೆಲಸವನ್ನು ಮಾಡಿಸಿಕೊಡುತ್ತಾರೆ. ಇದನ್ನೆಲ್ಲಾ ನಾವು ನೋಡಿ ಕಲಿತುಕೊಳ್ಳಬೇಕಾಗುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ನಾವು ಕಾರ್ಯದರ್ಶಿಗಳಿಂದ ಸರಿಯಾಗಿ ಕೆಲಸ ಆಗಿಲ್ಲ ಎನ್ನುವ ದೃಷ್ಟಿಯಿಂದ ವಿಷಯ ಸಮಿತಿಯ ಸಭೆಯಲ್ಲಿ ನಾವು ಮಾತನಾಡಿರುತ್ತೇವೆ. ಅದಕ್ಕೆ ನಾವು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಕೆಲಸ ಹೇಗೆ ಮಾಡಿಸಿಕೊಳ್ಳಬೇಕು ಎಂಬುದನ್ನು ನಾಗರಾಜ್‌ರವರಿಂದ ಕಲಿಯಿರಿ ಎಂದು ಅಧ್ಯಕ್ಷರು ಹೇಳಿದರು ನೋಡಿ. ಯಾವಾಗ ಹೊಗಳಬೇಕು, ಯಾವಾಗ ತೆಗಳಬೇಕು ಎನ್ನುವುದು ಅವರಿಗೆ ಗೊತ್ತಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಸುಮಾರು 5-6 ವರ್ಷಗಳಿಂದ 18 ನೀರು ಸರಬರಾಜು ಯೋಜನೆಗಳಿಗೆ ಎಸ್ಕಲೇಷನ್ ಕೊಡಬೇಕು ಎಂದು ಹೇಳಿ ತಡ ಆಗಿತ್ತು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನವನ್ನು ತೆಗೆದುಕೊಂಡು ಸುಮಾರು 5 ಕೋಟಿ 60 ಲಕ್ಷ ರೂಪಾಯಿಗಳನ್ನು ಕೊಡುವಂತಹ ಕಾರ್ಯ ಆದಮೇಲೆ ಕೆಲವೊಂದು ಕೆಲಸ ಮಾಡಿದೆವು. ಆದರೆ, ಚಾಮರಾಜನಗರಕ್ಕೆ ಪೈಪ್‌ಲೈನ್ ಹಾಕುವ ಕೆಲಸ ತಡವಾಗಿದೆ. ಈಗ ಆ ಕಂಟ್ರಾಕ್ಟರ್‌ನ್ನು ತೆಗೆದುಕೊಂಡಿದ್ದೇವೆ. ಹೊಸ ಕಂಟ್ರಾಕ್ಟರ್‌ಗೆ ಕೊಡಬೇಕು ಎಂದು ಹೇಳಿ ಹಳೆಯ ಕಂಟ್ರಾಕ್ಟರ್ ತೆಗೆದು ಆ ಕಾರ್ಯವನ್ನು ಮಾಡುವಂಥ ಕೆಲಸವನ್ನು ತೆಗೆದುಕೊಂಡಿದ್ದೇವೆ. ಹೆಚ್ಚು ದರಗಳನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಅವರಿಗೆ ಕೊಟ್ಟಂಥದ್ದು ಆಗಿದೆ. 19 ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಒಟ್ಟು 488 ಕೋಟಿ ರೂಪಾಯಿಗಳು ಆಗಲಿದ್ದು, ಆ ಯೋಜನೆಗಳಿಗೆ ಹುಡ್ಕೋದಲ್ಲಿ 86 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಉಳಿದ 13 ಯೋಜನೆಗಳನ್ನು ವಿಶ್ವಬ್ಯಾಂಕ್‌ನಿಂದ ಅಥವಾ ನಮ್ಮ ಹುಡ್ಕೋನಲ್ಲಿ ತೆಗೆದುಕೊಳ್ಳುವುದಕ್ಕೆ 408 ಕೋಟಿ ರೂಪಾಯಿಗಳಾಗುತ್ತದೆ. 408 ಕೋಟಿ ರೂಪಾಯಿಗಳಲ್ಲಿ 13 ಯೋಜನೆಗಳನ್ನು ಮಾಡುವಂತಹ ಕಾರ್ಯಕ್ರಮವನ್ನು ಸಹ ತ್ವರಿತ ನೀರು ಯೋಜನೆಯಲ್ಲಿ ಎನ್‌ಯುಡಬ್ಲ್ಯೂಎಸ್‌ನಲ್ಲಿ ಹಾಕಿಕೊಂಡಿದ್ದೇವೆಂದು ಹೇಳಿ 9 ಯೋಜನೆಗಳಿಗೆ ಕೇಂದ್ರ ಸರ್ಕಾರ ಅರ್ಧದಷ್ಟು ಭಾಗ, ನಮ್ಮ ರಾಜ್ಯ ಸರ್ಕಾರ ಅರ್ಧದಷ್ಟು ಭಾಗ ಹಣವನ್ನು ಹಾಕಬೇಕು ಎಂದು ಹೇಳಿ 10.45 ಕೋಟಿ ರೂಪಾಯಿಗಳ ಕೆಲಸ ರಾಜ್ಯದಲ್ಲಿ ನಡೆಯುತ್ತಿದೆ. ರಾಷ್ಟ್ರೀಯ ನದಿ ಯೋಜನೆಯಲ್ಲಿ ಕಾವೇರಿ ಮತ್ತು ಕೃಷ್ಣ ಜಲಾನಯನ ಪ್ರದೇಶಗಳಲ್ಲಿ ಹೊಸದಾಗಿ ಅಲ್ಲಿ ಕೊಳಚೆ ನೀರು ಶುದ್ಧೀಕರಿಸುವಂಥ ಕಾರ್ಯ ಮಾಡಬೇಕೆಂದು ಇದ್ದಕಾಗಿ ಕೇಂದ್ರ ಸರ್ಕಾರ ವಿಶೇಷವಾಗಿ 17.65 ಕೋಟಿ ರೂಪಾಯಿಗಳನ್ನು ಅನುದಾನವಾಗಿ ಕೊಟ್ಟಿದೆ. ಆ ಕೆಲಸ ಕೂಡ ಇವತ್ತು ರಾಜ್ಯದಲ್ಲಿ ನಡೆಯುತ್ತಾ ಇದೆ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಎಡಿಬಿ ಪ್ರಾಜೆಕ್ಟ್ಸ್ ಎಂದು ಹೇಳಿ, ಮೈಸೂರು, ತುಮಕೂರು, ರಾಮನಗರ, ಚನ್ನಪಟ್ಟಣ ಈ 4 ಯೋಜನೆಗಳಿಗೆ ಇವತ್ತು 172 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿಕೊಂಡು ಒಳಚರಂಡಿ ವ್ಯವಸ್ಥೆ ಮತ್ತು ನೀರನ್ನು ಕೊಡುವಂತಹ ಕಾರ್ಯಕ್ಕೆ ಈಗ 1997ರಲ್ಲಿ ಟೆಂಡರನ್ನು ಕರೆದಿದ್ದೇವೆ. ನವೆಂಬರ್ ಮತ್ತು ಡಿಸೆಂಬರ್ ವೇಳೆಗೆ ಆ ಕೆಲಸವನ್ನು ಪ್ರಾರಂಭಿಸುತ್ತೇವೆ. ಇನ್ನು ರಾಜ್ಯದಲ್ಲಿ ಉಳಿದ 38 ಪ್ರದೇಶಗಳಲ್ಲಿ ನಗರ ಮತ್ತು ಒಳಚರಂಡಿ

ವ್ಯವಸ್ಥೆಯು ಒಟ್ಟು 57 ಬಾಕಿ ಇರುವಂತಹ ಕೆಲಸಗಳಿಗೆ ಇವತ್ತು ಅಂದಾಜನ್ನು ತಯಾರಿಸಿ ಅದನ್ನು ವಿಶ್ವಬ್ಯಾಂಕಿನ ನೆರವಿಗೆ ಕಳುಹಿಸಬೇಕೆಂದು ಹೇಳಿ ಕಾರ್ಯಕ್ರಮವನ್ನು ಇವತ್ತು ಹಾಕಿಕೊಂಡಿದ್ದೇವೆ. ನಮ್ಮ ಈ ಒಂದು ಮಂಡಳಿಯು ಪ್ರಾರಂಭವಾದುದು 1975ರಲ್ಲಿ ಇದಕ್ಕೆ ಆರ್ಥಿಕ ವ್ಯವಸ್ಥೆ ಇದ್ದದ್ದು ಬರೀ ಏಳೂವರೆ ಕೋಟಿ ರೂಪಾಯಿಗಳು ಬರೀ ಏಳೂವರೆ ಕೋಟಿ ರೂಪಾಯಿಗಳಲ್ಲಿ ಪ್ರಾರಂಭವಾದದ್ದು. ಇದು ಇವತ್ತು 27 ವರ್ಷಗಳ ನಂತರ 75 ಕೋಟಿ ರೂಪಾಯಿಗಳಿಗೆ ಹೋಗಿದೆ. ನಮ್ಮ ಆರ್ಥಿಕ ವ್ಯವಸ್ಥೆಯನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಶ್ರೀಮಾನ್ ಸಭಾಪತಿಯವರು ಮಾತನಾಡುವಾಗ ಒಂದು ಸಾವಿರ ಕೋಟಿ ರೂಪಾಯಿಗಳಾದರೂ ಕೊಡಬೇಕೆಂದು ತಿಳಿಸಿದ್ದರು. ಆದರೆ ನಮ್ಮಲ್ಲಿರುವುದು 75 ಕೋಟಿ ರೂಪಾಯಿಗಳು ಇನ್ನು 925 ಕೋಟಿ ರೂಪಾಯಿಗಳನ್ನು ಹಾಕಬೇಕಾಗುತ್ತದೆ. ಅವರು ಹೆಚ್ಚು ಹಣವನ್ನು ತೊಡಗಿಸಿದರೆ ಹೆಚ್ಚು ನೀರು ಮತ್ತು ಒಳಚರಂಡಿ ವ್ಯವಸ್ಥೆ ಮಾಡಬಹುದು. ಇದು ಬಹಳ ಮುಖ್ಯವಾದುದು. ಜನಗಳಿಗೆ ನೀರನ್ನು ಕೊಡುವಂಥದ್ದು ಆಗಬೇಕು. ಜನಗಳಿಗೆ ಯಾವಾಗಲೂ ನೀರು ಸಿಗಬೇಕು. ಬಿಜಾಪುರದಲ್ಲಿ ಸುಮಾರು 5-6 ದಿವಸಕ್ಕೆ ಒಮ್ಮೆ ನೀರು ಕೊಡುತ್ತಿದ್ದಾರೆ. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ 2-3 ದಿವಸಕ್ಕೆ ಒಮ್ಮೆ ನೀರು ಕೊಡುತ್ತಿದ್ದಾರೆ. ಇದು ಎಲ್ಲ ತಪ್ಪಬೇಕು. ನದಿ ಮೂಲಗಳಿಂದ ತೆಗೆದುಕೊಡುವುದು ಆಗಬೇಕು. ಕಾವೇರಿ ಮತ್ತು ಭೀಮಾ ನೀರನ್ನು ತಂದು ಕೊಡುವಂತಹ ವ್ಯವಸ್ಥೆ ಆಗಬೇಕು. ಘಟಪ್ರಭಾ ಮತ್ತು ಮಲಪ್ರಭಾ ಬೇರೆಬೇರೆ ನದಿ ಮೂಲಗಳಿಂದ ನೀರನ್ನು ತರಲು ಪೈಪ್‌ಲೈನುಗಳಿಗೆ ಖರ್ಚು ಜಾಸ್ತಿ ಇದೆ.

1.40 ಪಿ.ಎಂ.

ಆದರೆ ನಮ್ಮ ಬಜೆಟರಿ ಪ್ರಾವಿಷನ್ ಇರತಕ್ಕಂಥದ್ದು ಬಹಳ ಕಡಿಮೆ ಅಂದರೆ 75 ಕೋಟಿರೂಪಾಯಿಗಳು. ಅದರಲ್ಲಿ ಹಣಕಾಸು ಸಂಸ್ಥೆಗಳಾದ ಹುಡ್ಕೋ ಆಗಬಹುದು, ಎಲ್.ಐ.ಸಿ. ಆಗಬಹುದು, ವರ್ಲ್ಡ್ ಬ್ಯಾಂಕ್ ಮತ್ತು ಬೇರೆ ಬೇರೆ ಕಡೆಗಳಿಂದ ತಂದರೂ ನಮಗೆ ಇರುವಂಥ 140-45 ಕೋಟಿ ರೂಪಾಯಿಗಳ ಬಜೆಟ್‌ನೊಳಗೆ ರಾಜ್ಯದಲ್ಲಿ ಕೆಲಸಕಾರ್ಯಗಳು ಆಗ ಬೇಕಾಗಿದೆ. ಇವೊತ್ತು ರಾಜ್ಯದಲ್ಲಿ 296 ಪೂರ್ಣಗೊಳಿಸಿರುವ ಯೋಜನೆಗಳ ಮೂಲಕ ನೀರನ್ನು ಒದಗಿಸುತ್ತಾ ಇರತಕ್ಕಂಥದ್ದು ಕೊಳವೆ ನೀರು ಸರಬರಾಜು ಯೋಜನೆ 196 ಮುಗಿಸಿದ್ದೇವೆ, ನಗರ ನೀರು ಸರಬರಾಜು ಯೋಜನೆ - 54, ಮತ್ತು ಮಂಡಳಿ ನೀರು ಸರಬರಾಜು ಯೋಜನೆಯಲ್ಲಿ 20, ಹೀಗೆ ಒಟ್ಟು 296 ಪೂರ್ಣಗೊಳಿಸಿರತಕ್ಕ ಯೋಜನೆಗಳ ಮೂಲಕ ಕೆಲಸ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಯಾವಾಗ ಮುಗಿಸುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಇದನ್ನು ಚುನಾವಣೆಗೆ ಮುಂಚೆ ಮುಗಿಸಬೇಕಾಗುತ್ತದೆ. ಏಕೆಂದರೆ, ತಾವು ಹೇಳಿದ ಹಾಗೆ1999-2000 ಇಸವಿಗೆ ಚುನಾವಣೆ ಬರುವುದರಿಂದ ಚುನಾವಣೆಗೆ ಮುಂಚಿತವಾಗಿ ಮುಗಿಸಬೇಕೆಂಬುದು ಸದಸ್ಯರ ಆಸೆ ಕೂಡ ಆಗಿದೆ. ಆದ್ದರಿಂದ, ಇರುವಂಥ ಎರಡು ವರ್ಷಗಳಲ್ಲಿ ನಾವು ಹೋಗುವುದಕ್ಕೆ ಮುಂಚಿತವಾಗಿ ಈ ಯೋಜನೆಗಳನ್ನು ಮುಗಿಸಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಕಾರ್ಯಕ್ರಮವನ್ನು ತಾವು ಬಹಳ ತ್ವರಿತವಾಗಿ ಮಾಡಿ. ಏಕೆಂದರೆ ಚಾಮರಾಜನಗರಕ್ಕೆ ಸಂಬಂಧಿಸಿದಂತೆ ಇದು 7-8 ವರ್ಷಗಳಿಂದ ಹಾಗೆ ಇದೆ. ತಾವು ಹೋದಸಾರ್ತಿಯು ಅದೇ ಭರವಸೆಯನ್ನು ಕೊಟ್ಟಿದ್ದಿರಿ. ಚುನಾವಣೆ ಬರುವುದಕ್ಕೆ ಇನ್ನೂ ಎರಡು ವರ್ಷಗಳು ಇವೆ. ಅಷ್ಟರೊಳಗೆ ಆಗಬೇಕಾದಂಥ ಕೆಲಸಕಾರ್ಯಗಳನ್ನು ತರಾತುರಿಯಿಂದ ಮಾಡಬೇಕಾಗುತ್ತದೆ. ಆದ್ದರಿಂದ, ಈ ಕೆಲಸವನ್ನು ಇಬ್ಬರು ಮೂವರಿಗೆ ಕೊಟ್ಟು ಇದನ್ನು ಜರೂರಾಗಿ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳ ಬೇಕು ಮತ್ತು ಯಾವಾಗ ಇದನ್ನು ಮುಗಿಸಿಕೊಡುತ್ತೀರಿ ಎಂಬುದನ್ನು ಪ್ರಾಮಾಣಿಕವಾಗಿ ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಈಗಾಗಲೇ ಆ ಕಂಟ್ರಾಕ್ಟುದಾರರನ್ನು ತೆಗೆದುಹಾಕಿದ್ದು, ಯಾರು ಈ ಕೆಲಸಗಳನ್ನು ಬೇಗ ಮುಗಿಸುತ್ತಾರೆ ಅವರಿಗೆ ಹೊಸ ಕಂಟ್ರಾಕ್ಟನ್ನು ಕೊಟ್ಟು ಅಂದರೆ ಇಬ್ಬರು ಮೂವರು ಏಜೆನ್ಸಿಯವರಿಗೆ ಕೊಟ್ಟು ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗ ಯೋಜನೆಯೂ ಕೂಡ 5 ಕೋಟಿ ರೂಪಾಯಿಗಳು ಇದ್ದುದು 12 ಕೋಟಿ ರೂಪಾಯಿಗಳು ಆಗಿದೆ. ಇದನ್ನು ಯಾವಾಗ ಮುಗಿಸುತ್ತೀರಿ ಎಂದು ಗೊತ್ತಾಗಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಅದರ ಬಗ್ಗೆ ನಿನ್ನೆ ಮೇಲ್ಮನೆಯಲ್ಲಿ ಶಂಕರಮೂರ್ತಿಯವರು ಪ್ರಶ್ನೆಯನ್ನು ಕೇಳಿದರು ನಾನು ಸಾಕಷ್ಟು ಉತ್ತರವನ್ನು ನೀಡಿದೆ. ಈಗಾಗಲೇ ಸಾಕಷ್ಟು ಕೆಲಸಕಾರ್ಯಗಳು ಆಗಿರತಕ್ಕಂಥದ್ದು ತಮಗೆ ಗೊತ್ತಿದೆ. ಗಾಜನೂರು ಡ್ಯಾಮ್‌ಗೆ 6 ಎಂ.ಜಿ.ಡಿ. ನೀರನ್ನು ತರುವಂಥ ವ್ಯವಸ್ಥೆ, 365 ದಿನಗಳ ಕಾಲ ನೀರನ್ನು ಕೊಡತಕ್ಕಂಥದ್ದು. ಈಗಾಗಲೇ ಟ್ಯಾಂಕನ್ನು ಕಟ್ಟತಕ್ಕಂಥ ಕೆಲಸವೆಲ್ಲ ಆಗಿದೆ. ನಾವು ಆಗಸ್ಟ್ 15ಕ್ಕೆ ಕಚ್ಚಾನೀರನ್ನು ಸಂಸ್ಕರಣಾ ಘಟಕಕ್ಕೆ ತರುವಂಥ ವ್ಯವಸ್ಥೆ ಎಲ್ಲವನ್ನೂ ಮಾಡಿಕೊಂಡಿದ್ದೇವೆ. ಇವೊತ್ತು ಪವರ್ ಸಪ್ಲೈಗಾಗಿ ಅಲ್ಲಿ ಮೂರು ಕೋಟಿ ರೂಪಾಯಿ ಬಾಕಿ ಇದೆ. ಇವೊತ್ತು ಕೆ.ಇ.ಬಿ.ಗೆ ನಾವು ಕೊಡಬೇಕಾದಂಥ ಬಾಕಿ 118 ಕೋಟಿ ರೂಪಾಯಿಗಳು ಇದನ್ನು ನಮ್ಮ ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ಬಾಕಿ ಇಟ್ಟುಕೊಂಡಿದೆ. ಒಟ್ಟಿನಲ್ಲಿ ಆಗಸ್ಟ್ 15ಕ್ಕೆ 8 ಯೋಜನೆಗಳನ್ನು ಚಾರಿಗೆ ಕೊಡಬೇಕು ಎಂದು ಇದ್ದೇವೆ. ನಮ್ಮ ತುಮಕೂರಿನವರಾದ ಶಿವಣ್ಣನವರು ತುಮಕೂರಿಗೂ ಸಹ ಕೊಡಿ ಎಂದು ಹೇಳುತ್ತಿದ್ದಾರೆ ಅವರು ಸುಮಾರು ಒಂದು ಕೋಟಿ 5 ಲಕ್ಷ ರೂಪಾಯಿಗಳ ಬಾಕಿ ಇಟ್ಟುಕೊಂಡಿದ್ದಾರೆ, ತಮ್ಮಿಂದ ಮೂರು ಕೋಟಿ ರೂಪಾಯಿಗಳು ಬಾಕಿ ಇದೆ. ಹೀಗೆ ಅರಸೀಕೆರೆ-ತಿಪಟೂರಿನವರು 52 ಲಕ್ಷ ರೂಪಾಯಿ ಬಾಕಿ ಇಟ್ಟುಕೊಂಡಿದ್ದಾರೆ. ಕೆ.ಇ.ಬಿ.ಯವರು ಬಾಕಿ ಹಣವನ್ನು ಕಟ್ಟಿ ಎಂದು ಕೇಳುತ್ತಿದ್ದಾರೆ ಆದರೆ ಸ್ಕೀಂನಲ್ಲಿ ಹಣವನ್ನು ಅವರಿಗೆ ತುಂಬಿಬಿಟ್ಟಿದ್ದೇವೆ. ತಮಗೆ ಎಕ್ಸ್‌ಪ್ರೆಸ್ ಫೀಡರ್, ಎಕ್ಸ್‌ಪ್ರೆಸ್ ಲೈನ್ ಎಲ್ಲಾ ಹಾಕಿಕೊಟ್ಟಿದ್ದೇವೆ. ಆದರೆ ಕೆ.ಇ.ಬಿ.ಯವರು ಬಾಕಿ ಹಣವನ್ನು ತುಂಬಿ ನಾವು ಪವರ್ ಸಪ್ಲೈ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳು, ನಾನು ಮತ್ತು ಕೆ.ಇ.ಬಿ.ಯ ಅಧ್ಯಕ್ಷರ ಜೊತೆಗೆ ಮಾತನಾಡುತ್ತೇವೆ. ಏನೋ ಅಲ್ಪಸ್ವಲ್ಪ ಅಂದರೆ ಒಂದೆರಡು ಲಕ್ಷ ರೂಪಾಯಿಗಳನ್ನು ಕಟ್ಟುವುದಾದರೆ ಕಟ್ಟಿಸೋಣ. ಎಲ್ಲರೂ

ಕಟ್ಟುವುದಿಲ್ಲ ಎಂದು ಹೇಳಿದರೆ ತೊಂದರೆಯಾಗುತ್ತದೆ. ಅದಕ್ಕೆ ನಾವು ಮೂರುಜನ ಕುಳಿತು ತೀರ್ಮಾನ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಅದಕ್ಕೆ ಪವರ್ ಸಪ್ಲೈ ಕೊಟ್ಟು ಚಾಲೂ ಮಾಡುವಂಥದ್ದಕ್ಕೆ ಅಂದರೆ ಲೈನ್ ಟೆಸ್ಟಿಂಗ್ ಎಲ್ಲಾ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಚಾಲೂ ಕೊಡುವಂಥ ಕೆಲಸವನ್ನು ಇವೊತ್ತು ಮಾಡುತ್ತೇವೆ.

ಶ್ರೀ ಬಿ. ನಂಜಾಮರಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಆಗಸ್ಟ್ 15 ರಂದು ಕುಡಿಯುವ ನೀರಿನ ಯೋಜನೆಯನ್ನು ಉದ್ಘಾಟನೆ ಮಾಡಲಾಗುವುದೆಂದು ಹೇಳಿದರು. ಆದರೆ ಇವೊತ್ತು ವಿದ್ಯುಚ್ಛಕ್ತಿಯ ಅಭಾವದಿಂದ ಅದು ಆಗುವುದಿಲ್ಲ. ಆದಕಾರಣ ತಾವು ಏನು ಮಾಡುತ್ತೀರಿ ಎಂಬ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಒಂದು ಕಾಲದಲ್ಲಿ ತುಮಕೂರಿನವರು ಹೇಮಾವತಿ ಕಾಲುವೆಯಲ್ಲಿ ನೀರು ಬರುವುದಿಲ್ಲ ಎಂದು ಹೇಳುತ್ತಿದ್ದರು. ಅನಂತರ ನಮ್ಮ ನಾಗೇಗೌಡರು ಕಾಲುವೆಯಲ್ಲಿ ನೀರನ್ನು ಹರಿಯಬಿಟ್ಟರು, ನೀರು ಹರಿಯಿತು. ನಮ್ಮ ಶಿವಣ್ಣನವರು ಬುಗುಡನಹಳ್ಳಿ ಕೆರೆಯಲ್ಲಿ ನೀರೇ ಬರುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ, ಇವೊತ್ತು ಏಳು ಅಡಿ ನೀರು ಇದ್ದು ನಮ್ಮ ಲೆವೆಲ್‌ಗೆ ಎಷ್ಟು ಬೇಕೋ ಅಷ್ಟು ನೀರನ್ನು ಇಟ್ಟುಕೊಂಡಿದ್ದೇವೆ. ಈಗ ಹೇಳುತ್ತಾರೆ ನೀರೇನೊ ನಮ್ಮ ಕಾಲುವೆಗೆ ಬಂತು ನಮ್ಮ ಕೆರೆಗೆ ನೀರು ಹೇಗೆ ತುಂಬುತ್ತೀರಿ ಎಂದು ಅಲ್ಲೊಂದು ಪೈಪ್ ಇದೆ ಆ ಪೈಪ್‌ನಲ್ಲಿ ನೀರು ಹೋಗುವುದೇ ಇಲ್ಲ ಎಂದರು, ಈಗ ನೀರೆಲ್ಲ ತುಂಬಿದಮೇಲೆ ಏನು ಹೇಳಿದರು ಅಂದರೆ, ಕೆರೆಯೇ ಇರುವುದಿಲ್ಲ ಎಂದು ಮೊನ್ನೆ ತುಮಕೂರಿಗೆ ಹೋಗಿದ್ದಾಗ ಹೇಳಿದರು. ನಾನು ಅದನ್ನೂ ಟೆಸ್ಟ್ ಮಾಡಿದ್ದೇನೆ, ರಿಸರ್‌ವಾಯರ್ ಕೂಡ ಇದೆ. ಅವರು ಕೇಳುವುದು ಗ್ರಾವಿಟಿಯಲ್ಲೂ ನೀರು ಬರುತ್ತದೆ, ಅದರ ಜೊತೆಗೆ ನೀರು ಹರಿದಾಗ ಪಂಪು ಸಹ ಮಾಡಬೇಕಾಗುತ್ತದೆ. ಆದ್ದರಿಂದ ಎಷ್ಟು ಬೇಗ ಚಾಲು ಕೊಡುತ್ತೀರಿ ಎಂದು. ಈಗಾಗಲೇ ಹೇಳಿದಂತೆ ವಿದ್ಯುಚ್ಛಕ್ತಿಯ ಪ್ರಶ್ನೆ ಇದೆ, ಅಲ್ಲಿ ಪಂಪುಗಳನ್ನು ಅಳವಡಿಸಿಕೊಡಬೇಕಾಗುತ್ತದೆ.

ಶ್ರೀ ಬಿ. ನಂಜಾಮರಿ : ಸನ್ಮಾನ್ಯ ಅಧ್ಯಕ್ಷರೆ, ಈ ನೀರನ್ನು ಪಂಪ್ ಮಾಡದಿದ್ದರೆ ಮತ್ತೆ ಇನ್ನು ಮೂರು ತಿಂಗಳಿನಲ್ಲಿ ಹೇಮಾವತಿ ನೀರನ್ನು ನಿಲ್ಲಿಸುತ್ತಾರೆ. ಆ ನೀರನ್ನು ನಿಲ್ಲಿಸಿದಾಗ ಕೆರೆಗೆ ಒಂದು ವರ್ಷ ನೀರನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಈಚನೂರು ಕೆರೆಗೆ ಕಾಲುವೆ ಮುಖಾಂತರ ಹೋಗುವ ನೀರಿಗೆ ಪೊಜಿಷನ್ ಗ್ರಾವಿಟಿನಲ್ಲಿ ಬರದೇ ಇದ್ದರೆ ನೀರು ತುಂಬುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ನಾನು ಮೊನ್ನೆ ಒಂದು ಸುತ್ತು ಹೋಗಿ ಬಂದೆ. ಆದರೆ ತಿಪಟೂರಿನಲ್ಲಿ ನೀವು ಹೋಗಿದ್ದೀರಾ, ನೋಡಿದ್ದೀರಾ ತಮ್ಮ ಗಮನಕ್ಕೂ ಸಹ ಬಂದಿರಬೇಕು. 2-3 ದಿವಸಕ್ಕೆ 2-3 ಕೊಡ ನೀರು ಸಿಗದೇ ಬೇರೆ ಸ್ಥಳಗಳಿಂದ ಗಾಡಿಯಲ್ಲಿ ನೀರನ್ನು ತರುತ್ತಿದ್ದಾರೆ. ಬಹುಶಃ ನಾನು ಕರ್ನಾಟಕ ರಾಜ್ಯದಲ್ಲಿ ಇಂಥ ಪರಿಸ್ಥಿತಿಯನ್ನು ಎಲ್ಲೂ ನೋಡಿಲ್ಲ. ಮತ್ತು

ಆ ದೃಶ್ಯ ಕೂಡ ಇಲ್ಲ. ಆದಷ್ಟು ಬೇಗ ತಿಪಟೂರಿಗೆ ನೀರನ್ನು ಕೊಟ್ಟರೆ ಶಾಸಕರು ರಸ್ತೆಯಲ್ಲಿ ಓಡಾಡುವ ಸ್ಥಿತಿ ಬರಬಹುದು. ಇದು ಬಹಳ ವಿಚಿತ್ರವಾದ ಸುದ್ಧಿ ಇದೆ, ದಯಮಾಡಿ ಇದರ ಬಗ್ಗೆ ಏನು ಮಾಡುತ್ತೀರಿ ಮಡಿ. ಅಲ್ಲಿ ಬಂದ್ ಆಚರಿಸಿದರು ಎಲ್ಲಾ ಮಾಡಿದರು. ಏಕೆಂದರೆ ವಾಟಾಳ್ ನಾಗರಾಜ್‌ನವರ ಊರಿನಲ್ಲಿ ನೀರಿದ್ದು ಪೈಪಲೈನ್ ಎಳೆಯುವುದರಲ್ಲಿ ಒಂದೆರಡು ದಿನ ತಡವಾದರೂ ಪರ್ವಾಗಿಲ್ಲ, ಆದರೆ ಇಲ್ಲಿ ಒಂದು ಕೊಡ ನೀರು ಸಿಗುತ್ತಾ ಇಲ್ಲ. ಈ ರೀತಿಯ ಧಾರುಣ ಪರಿಸ್ಥಿತಿ ಇದೆ. ಆದ್ದರಿಂದ ತಿಪಟೂರಿನ ಬಗ್ಗೆ ವಿಶೇಷವಾದ ಗಮನವನ್ನು ತೆಗೆದುಕೊಳ್ಳಬೇಕು. ಏಕೆಂದರೆ ವಾಟಾಳ್ ನಾಗರಾಜ್‌ರವರಿಗೆ ಬಾಯಿ ಇದೆ ಅವರ ಕೆಲಸವಾಗುತ್ತದೆ, ತಿಪಟೂರಿನವರಿಗೆ ಮಾತನಾಡುವುದಕ್ಕೆ ಆಗುತ್ತಿಲ್ಲವಾದ್ದರಿಂದ ಅವರ ಕೆಲಸವಾಗುತ್ತಿಲ್ಲ.

ಶ್ರೀ ಬಿ. ನಂಜಾಮರಿ : ಅಧ್ಯಕ್ಷರೆ, ನಮ್ಮ ತಿಪಟೂರಿನಲ್ಲಿ ಕುಡಿಯುವುದಕ್ಕೆ ನೀರನ್ನು ಮೂರು ತಿಂಗಳಿನಿಂದ ಕೊಡುತ್ತಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಯಡಿಯೂರಪ್ಪನವರ ಮಾತಿಗೆ ತಾವು ಬಲೆ ಕೊಡಿ. ಆದರೆ ನಮಗೆ ಕೊಡಬೇಡಿ ಎಂದು ಅವರು ಏನು ಹೇಳಿದರು ಆ ಮಾತಿಗೆ ಬೆಲೆ ಕೊಡಬೇಡಿ. ನೀವು ನಿಮ್ಮ ಮಂಡಳಿಯ ಅಧ್ಯಕ್ಷರ ಒಂದು ಟೀಮ್ ಬಹಳ ಚೆನ್ನಾಗಿ ಇದೆ, ಚೆನ್ನಾಗಿ ಕೆಲಸವನ್ನು ಸಹ ಮಾಡುತ್ತಿದ್ದೀರಿ. ನಿಜವಾಗಲೂ ಈ ಕೆಲಸವನ್ನು ಬೇಗ ಬೇಗ ಮುಗಿಸಿದರೆ ಈಗ ನಾವು ಹಾಕಿ ಕೊಂಡಿರುವ ಯೋಜನೆಗಳೆಲ್ಲ ಬಹಳ ಚೆನ್ನಾಗಿ ಆಗುತ್ತದೆ ಎಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಅನೇಕಸಾರಿ ನೀವು ನಿಮ್ಮ ಮಂಡಳಿಯ ಅಧ್ಯಕ್ಷರು ಎಲ್ಲಾ ಸೇರಿ ಸಭೆಯನ್ನು ಕೂಡ ನಡೆಸಿದೆವು. ಮತ್ತೆ ತಿಪಟೂರಿನದನ್ನು ಸಹ ನೀವು ಮಾಡಿ ಎಂದು ಹೇಳಿದರೆ ಯಡಿಯೂರಪ್ಪನವರು ನಮ್ಮದನ್ನು ತಡೆಹಿಡಿಯಿರಿ ಎಂದು ಹೇಳಳುತ್ತಿದ್ದಾರೆ, ಇದು ನಮಗೂ ಅವರಿಗೂ ಇರತಕ್ಕಂಥ ಬಾಂಧವ್ಯ.

ಶ್ರೀ ಬಿ.ಎಸ್. ಬಚ್ಚೇಗೌಡ : ಹೇಮಾವತಿ ನಾಲೆಗೆ ನೀರಿನ ತೊಂದರೆ ಇದೆ ಯೆಂದು ಅರಿತುಕೊಂಡು ಬಹಳ ವೇಗವಾಗಿಯೇ ಪೈಪ್ ಲೈನ್ ಎಳೆಯವಂಥದ್ದು, ಮತ್ತು ಇನ್ನಿತರೆ ಕೆಲಸಗಳನ್ನು ಮಾಡಿದ್ದೇವೆ. ಅದು ಅವರಿಗೂ ಗೊತ್ತಿದೆ. ಜೊತೆಗೆ ಒಂದು ಟಾರ್ಗೆಟ್ ಇಟ್ಟುಕೊಂಡು ಸಹ ಮಾಡುತ್ತಿದ್ದೇವೆ. ಟಾರ್ಗೆಟ್‌ಗೆ ದಿನಾಂಕವನ್ನು ಗೊತ್ತುಪಡಿಸಿಕೊಂಡರೆ ಕೆಲಸ ಬೇಗ ಆಗುತ್ತದೆ ಎಂದು ಸಾಕಷ್ಟು ಶ್ರಮವನ್ನು ತೆಗೆದುಕೊಂಡಿದ್ದೇವೆ. ಅದರಲ್ಲೂ ನಂಜಾಮರಿ ಮತ್ತು ಶಿವಣ್ಣನವರು, ಅಲ್ಲಿನ ಇಂಜಿನಿಯರ್‌ಗಿಂತ ಹೆಚ್ಚಾಗಿ ನಮಗಿಂತ ಹೆಚ್ಚಾಗಿ ಲೈನ್ ಮೇಲೆ ಓಡಾಡಿ ಕಷ್ಟಪಟ್ಟಿದ್ದಾರೆ. ಆ ನೀರಾವರಿ ಇಲಾಖೆಯ ಇಂಜಿನಿಯರ್‌ರವರನ್ನು ಭೇಟಿಯಾಗಿದ್ದಾರೆ, ನಮ್ಮ ಇಲಾಖೆಯ ಇಂಜಿನಿಯರ್, ಭೂ ಸ್ವಾಧೀನ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿದ್ದಾರೆ ಮತ್ತು ಪೈಪ್‌ಲೈನ್ ಹಾಕುವುದಕ್ಕೆ ಅಡ್ಡಬಂದಂಥ ಜಮೀನುಗಳನ್ನು ಬಿಡಿಸಿಕೊಡುವಂಥದ್ದಕ್ಕೆ ಬಹಳ ಶ್ರಮಪಟ್ಟಿದ್ದಾರೆ. ಈ ಸಂದರ್ಭದಲ್ಲಿ ಅವರ ಶ್ರಮವನ್ನು ಅಭಿನಂದಿಸಬೇಕಾಗುತ್ತದೆ. ಅವರು ಶಾಸಕರಾಗಿ ಬಹಳಷ್ಟು ಶ್ರಮವಹಿಸಿ ಜವಾಬ್ದಾರಿಯುತ ಕೆಲಸವನ್ನು ಮಾಡಿದ್ದಾರೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಅಧ್ಯಕ್ಷರೆ, ಈಗ ಸವದತ್ತಿ ನಗರದ ಯು.ಜಿ.ಡಿ. ಒಳಚರಂಡಿ ವ್ಯವಸ್ಥೆ ಕುರಿತಂತೆ ಮೊನ್ನೆ ಪೇಪರ್‌ನಲ್ಲಿ ಬಂತು. ಹುಬ್ಬಳ್ಳಿ-ಧಾರವಾಡ ವಾಟರ್ ಸಪ್ಲೈ ಜಾಕ್‌ವೆಲ್ ಎಲ್ಲಿದೆ ಅಲ್ಲಿಗೆ ಸವದತ್ತಿ ನಗರದ ವೇಸ್ಟ್ ನೀರೆಲ್ಲ ಹೋಗಿ ಸೇರತ್ತದೆ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ 1956ನೇ ಇಸವಿಯಲ್ಲಿ ಮಂಜೂರಾದಂತೆ ಯು.ಜಿ.ಡಿ. ಇವೊತ್ತಿನವರೆಗೂ ಕಂಪ್ಲೀಟ್ ಆಗಿಲ್ಲ. ಆ ಬಗ್ಗೆ ನಾನು ತಮಗೆ 3-4 ಸಾರಿ ಪತ್ರ ಬರೆದು ತಮ್ಮ ಸಮಕ್ಷಮ ಭೇಟಿಯಾಗಿ, ನಿಮ್ಮ ಮಂಡಳಿ ಅಧ್ಯಕ್ಷರನ್ನು ಸಹಿತ ಭೇಟಿಮಾಡಿ ವಿನಂತಿ ಮಾಡಿಕೊಂಡಿದ್ದೆ. ಆದುದರಿಂದ, ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ನಂಜಾಮರಿ : ಇಷ್ಟು ವರ್ಷವಾದರೂ ಕೂಡ ತಿಪಟೂರಿಗೆ ನೀರನ್ನು ಕೊಡಲಿಕ್ಕಾಗಲಿಲ್ಲ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಆದುದರಿಂದ ತುರ್ತಾಗಿ ವಿದ್ಯುಚ್ಛಕ್ತಿಯನ್ನು ಪಡೆದುಕೊಂಡು ನೀರನ್ನು ತುಂಬಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಂಜಾಮರಿಯವರೆ, ಮಾನ [illegible]ಗಳ ಉತ್ತರ ಪೂರ್ತಿಯಾದ ನಂತರ ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಉಪಾಧ್ಯಕ್ಷರು ಕೇಳಿದಂತೆ ಸವದತ್ತಿಯ ಯು.ಜೆ.ಡಿ.ಯದು, ನಾಲ್ಕು ಕೋಟಿ ರೂಪಾಯಿಯ ಯೋಜನೆ ಸಿದ್ಧವಾಗಿದ್ದು, ಅದು ಆರ್ಥಿಕ ಇಲಾಖೆಯಲ್ಲಿ ಅಪ್ರೂವಲ್ ಆಗಬೇಕಾಗಿದೆ. ಆದರೆ ಏನೊಂದು ನಿಯಮ ಇದೆಯೆಂದರೆ ತಾವು 20 ಭಾಗದಷ್ಟು ಹಣವನ್ನು ತುಂಬಬೇಕು.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಆಗಲೇ ತಾವು ಏನು ಹೇಳಿದಿರಿ ಇಂತಿಂಥ ಊರುಗಳಿಗೆ ಸ್ಯಾಂಕ್ಷನ್ ಮಾಡಿದ್ದೇವೆ ಎಂದು. ಅವರೆಲ್ಲ ಶೇಕಡ 20 ಭಾಗದಷ್ಟು ಹಣವನ್ನು ತುಂಬಿದ್ದಾರೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ : ಯು.ಜಿ.ಡಿ.ಯ ಕಾಂಟ್ರಿಬ್ಯೂಷನ್ ಎಲ್ಲಾ ತುಂಬಿದ್ದಾರೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಮಲಪ್ರಭಾ ಯೋಜನೆಯಿಂದ ಇದು ಸ್ಥಗಿತವಾಗಿ, ಈ ಯೋಜನೆ 1956ರಲ್ಲಿ ಪ್ರಾರಂಭವಾಗಿ ಇದುವರೆಗೂ ಪೂರ್ಣಗೊಂಡಿಲ್ಲ ಇದರಲ್ಲಿ ತಪ್ಪು ಯಾರದು? ನಗರಸಭೆಯಿಂದ ಒಂದೂವರೆ ಲಕ್ಷ ರೂಪಾಯಿಗಳ ಅಸಲು ಮತ್ತು ಬಡ್ಡಿಯನ್ನು ವಸೂಲು ಮಾಡಿದ್ದೀರಿ. ಇವೊತ್ತು ಆ ಯೋಜನೆಯನ್ನು ಪೂರ್ಣ ಗೊಳಿಸಲು ತಯಾರಿಲ್ಲ. 40 ವರ್ಷಗಳಾದರೂ ಈ ಯೋಜನೆ ಮುಗಿಯಲಿಲ್ಲ ಎಂದರೆ ಹೇಗೆ? ಹಿಂದಿನ ಸರ್ಕಾರ ಇರಬಹುದು, ಈಗಿನ ಸರ್ಕಾರ ಇರಬಹುದು.

ಶ್ರೀ ಬಿ.ಎನ್. ಬಚ್ಚೇಗೌಡ : ಇದರ ಬಗ್ಗೆ ನೋಡಿ ತಮ್ಮ ಹತ್ತಿರ ಮಾತನಾಡಿ ತಿಳಿಸುತ್ತೇನೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಇದರ ಬಗ್ಗೆ ತಮ್ಮ ಜೊತೆಯಲ್ಲಿ 2-3 ಸಲ ಮಾತನಾಡಿದ್ದೇನೆ. ಮತ್ತು ತಮ್ಮ ಕಾರ್ಯದರ್ಶಿ ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಜೊತೆಗೂ ಸಹ ಮಾತನಾಡಿದ್ದೇನೆ. ಇದು ಯಾವಾಗ ಮುಗಿಯುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು

ಸವದತ್ತಿ ಯು.ಜಿ.ಡಿ. ಯೋಜನೆ ಆಗದೇ ಇದ್ದುದಕ್ಕೆ ಹೊಲಸು ನೀರೆಲ್ಲಾ ಹುಬ್ಬಳ್ಳಿ-ಧಾರವಾಡ ಮುಖಾಂತರ ಸವದತ್ತಿ ಕುಡಿಯುವ ನೀರಿನ ಯೋಜನೆಗೆ ಹೋಗುತ್ತದೆ; ಅದೇ ನೀರನ್ನು ನಾವು ಇವೊತ್ತು ಕುಡಿಯಬೇಕಾಗಿದೆ. 40 ವರ್ಷಗಳಿಂದ ಈ ಒಂದು ಯೋಜನೆಯನ್ನು ಮುಗಿಸಿಲ್ಲ ಎಂದರೆ ಹೇಗೆ?

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ 75 ಸಾವಿರ ಜನಸಂಖ್ಯೆವರೆಗೂ ನಗರಸಭೆಯವರಾಗಲೀ, ಪುರಸಭೆಯವರಾಗಲೀ ಯಾರೂ ಕೂಡ ಕುಡಿಯುವ ನೀರು ಕೊಡುವ ಯೋಜನೆಗೆ ತಮ್ಮ ವಂತಿಗೆಯನ್ನು ಕೊಡುವಂತಿರಲಿಲ್ಲ ಈ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಬಂದಮೇಲೆ ಮಾಡಿದೆವು. ಇವೊತ್ತು ಅದೇರೀತಿ ಒಳಚರಂಡಿ ವ್ಯವಸ್ಥೆಯನ್ನು ಸಹ ಮಾಡಬೇಕೆಂಬ ಪ್ರಸ್ತಾವನೆಯು ನಮ್ಮ ಸರ್ಕಾರದ ಮುಂದಿದೆ. ಯಾವ ಸ್ಥಳೀಯ ಸಂಸ್ಥೆಗಳು ಹಣವನ್ನು ಕಟ್ಟುವುದಕ್ಕೆ ಆಗುವುದಿಲ್ಲ ಅವರಿಗೆ ಶೇಕಡ 25 ಭಾಗ ಹಣವನ್ನು ಕಟ್ಟಿ ಅಂದರೆ ಒಂದು ಕೋಟಿ ರೂಪಾಯಿಗಳಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನ ಕಟ್ಟಬೇಕು. ನಾಲ್ಕು ಕೋಟಿ ರೂಪಾಯಿಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಕಟ್ಟಲೇಕಾಗುತ್ತದೆ. ಅದನ್ನು ಕಟ್ಟಲು ಯಾರ ಕೈಯಲ್ಲೂ ಸಾಧ್ಯವಿಲ್ಲ. ಈಗ ಇರುವಂತಹ ಹಣಕಾಸಿನ ಪರಿಸ್ಥಿತಿಯಲ್ಲಿ ಇದು ಯಾರ ಕೈಯಲ್ಲೂ ಸಾಧ್ಯವಿಲ್ಲ. ಅದು ಇಷ್ಟು ಜನಸಂಖ್ಯೆಯೊಳಗೆ ಬರುವಂಥ ಯೋಜನೆ ಎಂದು ಆದಾಗ ಬಹುಶಃ ಈ ಪೂರ್ತಿ ಹಣವನ್ನು ಸರ್ಕಾರವೇ ತುಂಬವಂಥಾದ್ದು ಆಗುತ್ತದೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಮಾನ್ಯ ಅಧ್ಯಕ್ಷರೆ, ತಾವು ಯಾವಾಗ ಮಾಡುತ್ತೀರೆನ್ನುವುದನ್ನು ಹೇಳಿ, ನೀವು ಈಗಾಗಲೇ ಯೋಜನೆಗಳನ್ನು ಮಾಡಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ : ಹೇಳುತ್ತೇನೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಈಗ ಮಾನ್ಯ ವಾಟಾಳ್ ನಾಗರಾಜ್‌ರವರದು ಆಗಲೇ ಸ್ಯಾಂಕ್ಷನ್ ಮಾಡಿದ್ದೇವೆಂದು ಹೇಳಿದ್ದೀರಿ. ಅವರೆಲ್ಲಿರಗೂ ಶೇ.20ರಷ್ಟು ತುಂಬಿಸಿಕೊಂಡಿದ್ದೀರೋ ತಾವು ನಿರ್ದಿಷ್ಟವಾಗಿ ಉತ್ತರವನ್ನು ಹೇಳಿ.

ಶ್ರೀವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರಿಗೆ ನಮ್ಮ ಮೇಲೆ ಏಕೆ ಕಣ್ಣು? ಅಧ್ಯಕ್ಷರು ನಮ್ಮ ಪರವಾಗಿ ಇದ್ದಾರೆ, ನೀವು ಒಳಗೊಳಗೆ ನಮ್ಮಪರ ಇದ್ದೀರಿ. ನಮ್ಮ ವಿರುದ್ಧ ಬಹಿರಂಗವಾಗಿ ಮಾತನಾಡಿದರೆ ನಮ್ಮ ಪರಿಸ್ಥಿತಿ ಹೇಗೆ? ಇದು ಒಂದು ನೀತಿಯ ಪ್ರಶ್ನೆ. ಇದರಲ್ಲಿ ಏನೂ ವಿರೋಧವಿಲ್ಲ. ಎಷ್ಟೆಷ್ಟು ಲಕ್ಷ ಜನಸಂಖ್ಯೆ ಇರುತ್ತದೆ, ಅದಕ್ಕೆ ಏನೇನು ಮಾಡಬೇಕೆಂದು ಒಂದು ನೀತಿ ಇರುತ್ತದೆ. ಇಲ್ಲಿ ನನಗೇನು ವಿಶೇಷವಾಗಿ ಮಾಡುತ್ತಾ ಇಲ್ಲ. ನಮ್ಮ ಯೋಜನೆ ಪ್ರಾರಂಭವಾದದ್ದು ಏಳು ವರ್ಷಗಳ ಹಿಂದೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ ಆದಂಥದ್ದು.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಮಾನ್ಯ ಅಧ್ಯಕ್ಷರೆ, ನಮ್ಮದು 1956ರಲ್ಲಿ ಪ್ರಾರಂಭವಾದದ್ದು, ಇದು ಇವತ್ತಿನವರೆಗೂ ಮುಗಿದಿಲ್ಲ. ನೀವು ಏಳು ವರ್ಷಕ್ಕೆ ಹೋದಿರಿ, ನಮ್ಮದು 40 ವರ್ಷಗಳಾಗಿದ್ದು ಇವತ್ತಿಗೂ ಮುಗಿದಿಲ್ಲ. ಇದನ್ನು ಯಾವ ರೀತಿಯಾಗಿ ಮಾಡುವುದು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಇದು ಪಿ.ಹೆಚ್.ಸಿ. (ಪಬ್ಲಿಕ್ ಹೆಲ್ತ್ ಇಂಜಿನಿಯರ್) ಇದ್ದಾಗ ಇದ್ದದ್ದು ಈಗ ನಿಂತು ಹೋಗಿದೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಮಾನ್ಯ ಅಧ್ಯಕ್ಷರೆ, ಅದು ಯಾವಾಗಲೇ ಆಗಿರಲಿ, ಈಗ ನಾವು ಏನು ಮಾಡುವುದು ಹೇಳಿ?

ಶ್ರೀ ಬಿ.ಎನ್. ಬಚ್ಚೇಗೌಡ : ನಮ್ಮ ಮಂಡಳಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಕಾಗಿತ್ತು, ಅದರಂತೆ ನಾಲ್ಕು ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಅದನ್ನು ಯಾವಾಗ ತೆಗೆದಕೊಳ್ಳುತ್ತೀರೆಂಬುದನ್ನು ಹೇಳಿಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮುಂದೆ ಇದೆ. ಅವರು ಕನ್‌ಕರೆನ್ಸ್ ಕೊಟ್ಟ ಮೇಲೆ ಈ ಕಾರ್ಯಕ್ರಮವನ್ನು ಈ ವರ್ಷ ತೆಗೆದುಕೊಳ್ಳಲಿದ್ದೇವೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಮಾನ್ಯ ಅಧ್ಯಕ್ಷರೆ, ಕನ್‌ಕರೆನ್ಸ್ ಯಾರು ಕೊಡಬೇಕು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಇದು ಹಿಂದೆ ಪಿ.ಹೆಚ್.ಇ.ನಲ್ಲಿ ಆಗಿರುವಂಥಾದ್ದು, ನಿಂತು ಹೋಗಿದೆ. ಇದನ್ನು ಈಗ ನಾವು ನಮ್ಮ ಮಂಡಳಿಯಿಂದ ತೆಗೆದುಕೊಳ್ಳಬೇಕು. ನಾವು ನಾಲ್ಕು ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ಕಳುಹಿಸಿದ್ದೇವೆ. ಅದಕ್ಕೆ ಹಣಕಾಸಿನ ಇಲಾಖೆಯವರು ಕನ್‌ಕರೆನ್ಸ್ ಕೊಟ್ಟಮೇಲೆ ಅಡ್‌ಮಿನಿಸ್ಟ್ರೇಟೀವ್ ಅಪ್ರೂವಲ್ ತೆಗೆದುಕೊಂಡು ಕೆಲಸವನ್ನು ಶುರು ಮಾಡುತ್ತೇವೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ : ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಎಂದರೆ ಎಷ್ಟು ವರ್ಷಗಳು ಬೇಕಾಗುತ್ತದೆ? ಈಗ ನಲವತ್ತು ವರ್ಷಗಳಾದ ಮೇಲೂ ಮಾಡುವುದಕ್ಕಾಗುವುದಿಲ್ಲ, ಏನು ಮಾಡುವುದಕ್ಕಾಗುವುದಿಲ್ಲವೆಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಎಷ್ಟು ಸಲ ಈ ಪ್ರಶ್ನೆಯನ್ನು ಕೇಳುವುದು. ಒಂದು ಸಲ ರಿವೋಕ್ ಮಾಡಿ, ಆಗ ಅವರಿಗೆ ಗೊತ್ತಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಖರೀದಿ ಸಮಿತಿಯನ್ನು ರಚನೆ ಮಾಡಿದ್ದೇವೆ, ಕಂಪ್ಯೂಟರ್ ವಿಭಾಗವನ್ನು ಮಾಡಿಕೊಂಡಿದ್ದೇವೆ. ಇದರ ಜೊತೆಗೆ ಮೂರನೇ ವ್ಯಕ್ತಿ ಇನ್‌ಸ್ಪೆಕ್ಷನ್ ಮಾಡಿ ತೀರ್ಮಾನ ಕೊಡುವಂಥಾದ್ದನ್ನು ಮಾಡಿದ್ದೇವೆ. ಹೀಗೆ ಸಾಕಷ್ಟು ಕಾರ್ಯಕ್ರಮಗಳನ್ನು ಕಳೆದ ಒಂದು ವರ್ಷದಿಂದ ಹಾಕಿಕೊಂಡು ಇವತ್ತು ನೀರನ್ನು ಕೊಡುವಂಥ ಯೋಜನೆ ಸಮರ್ಪಕವಾಗಿ ಆಗಬೇಕೆನ್ನುವಂತಹ

ದೃಷ್ಟಿಯಿಂದ ಮಂಡಳಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಎಲ್ಲೆಲ್ಲಿ ನೀರು ಕೊಡುವಂಥಾದ್ದಕ್ಕೆ ತೊಂದರೆ ಇದೆ, ಅದು ನಗರಗಳಾಗಲಿ, ಪಟ್ಟಣಗಳಲ್ಲಾಗಲಿ, ಪುರಸಭೆಯ ವ್ಯಾಪ್ತಿಯಲ್ಲಿ ಬರುವಂಥಾದ್ದಕ್ಕೆ ನಾವು ಆದಷ್ಟು ಒತ್ತನ್ನು ಕೊಡುವಂತಹ ದೃಷ್ಟಿಯಿಂದ ನಾವು ಕೆಲಸ ಕಾರ್ಯಗಳನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ನಮ್ಮ ನಗರ ಯೋಜನಾ ಇಲಾಖೆಗೆ ಜೀಪುಗಳನ್ನು ಕೊಟ್ಟಿದ್ದೇವೆ. ನೌಕರವರ್ಗದವರಿಗೆ ಪ್ರಮೋಷನ್‌ಗಳನ್ನು ಕೊಟ್ಟಿದ್ದೇವೆ. ಹೊಸದಾಗಿ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದೇವೆ. ರೀಜನಲ್ ಪ್ಲಾನಿಂಗ್ ಯೂನಿಟ್ಸ್ ಎಂದು ಆಯಾ ರೀಜಿನಲ್ ಪ್ಲಾನಿಂಗ್ ಯೂನಿಟ್‌ಗಳ ಕಾರ್ಯಮಾಡುವಂಥಾದ್ದನ್ನು ಸಂಚಾರ ಮಾಡಿದ್ದೇವೆ. ವ್ಯವಸ್ಥೆಯಲ್ಲಿ ಒತ್ತಡ ಬಹಳ ಇದೆ ಎಂದು ಸಂಚಾರಿ ವ್ಯವಸ್ಥೆಗೆ ಸಹಾಯ ಮಾಡುವ ದೃಷ್ಟಿಯಿಂದ ತಂತ್ರಜ್ಞಾನ ಕೊಡುವ ಕಾರ್ಯವನ್ನು ಇಲಾಖೆಯವರು ಹಮ್ಮಿಕ್ಕೊಂಡಿದ್ದಾರೆ. ಇದನ್ನು ಇನ್ನೂ ಹೆಚ್ಚು ಸಮರ್ಪಕವಾಗಿ ಮಾಡುವ ದೃಷ್ಟಿಯಿಂದ ಮಾನ್ಯ ಸದಸ್ಯರುಗಳು ನನ್ನನ್ನು ವೈಯಕ್ತಿಕವಾಗಿ ಭೇಟಿಮಾಡಿ ಅವರ ಸಲಹೆಗಳನ್ನು ನನಗೆ ಕೊಡಬಹುದು. ಈ ಕಾರ್ಯವನ್ನು ಒಟ್ಟಾರೆ ಮಾಡುತ್ತೇವೆಂದು ತಿಳಿಸಿ, ಇದಕ್ಕೆ ಎಲ್ಲಾ ಸದಸ್ಯರುಗಳ ಸಹಕಾರವನ್ನು ಕೋರಿ ತಮಗೆ ವಂದಿಸಿ ತಾವೆಲ್ಲರೂ ಈ ಬೇಡಿಕೆಗಳ ಮಂಜೂರಾತಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದನ್ನು ಪಾಸ್ ಮಾಡುವುದಕ್ಕೆ ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ, ಇದನ್ನು ನಾನು ಏಕೆ ರೈಸ್ ಮಾಡುತ್ತಿದ್ದೇನೆಂದರೆ ಇದಕ್ಕೆ ಕಾನೂನಿನ ತೊಡಕು ಕೂಡ ಇದೆ. ಈಗ ಇವರು ಡಿಮ್ಯಾಂಡ್ ನಂ.31ರಲ್ಲಿ "Urban Development excluding Bangalore Development Projects and Urban Infrastructure Development Corporation." ಎಂದದೆ ಈ ಡಿಮ್ಯಾಂಡ್ ಮೇಲೆ ಮಾತನಾಡಿದ್ದಾರೆ ಮತ್ತು ಹೇಳಿದ್ದಾರೆ. ಇದರಲ್ಲಿ ಟೌನ್ ಮುನಿಸಿಪಾಲಿಟಿ ಕೂಡ ಬರುವಂಥಾದ್ದು, ಇದರ ಬಗ್ಗೆ ಅವರು ಹಣವನ್ನು ಕೇಳಲಿಲ್ಲ. ಅವರು ತಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಹಣದ ಬಗ್ಗೆ ವಿವರವನ್ನು ಕೊಟ್ಟರು ಮತ್ತು ಹೇಳಿದರು. ಆದರೆ, ಉಳಿದಂತಹ ಟೌನ್ ಮುನಿಸಿಪಾಲಿಟಿಗಳು ಸುಮಾರು 205 ಇವೆ. ಇವುಗಳ ಬಗ್ಗೆ ಯಾವ ಬೇಡಿಕೆಯೂ ಇಲ್ಲ. ಈ ಬೇಡಿಕೆಗಳನ್ನು ಇದರಲ್ಲೇ ಅಳವಡಿಸಿಕೊಂಡು ಹೋಗಿದ್ದಾರೆಂದರೆ ನಾವು ಇದನ್ನು ಯಾವ ರೀತಿಯಾಗಿ ಈ ಸದನದಲ್ಲಿ ಪಾಸ್ ಮಾಡಬೇಕು? ಇದು ಬಹಳ ಮುಖ್ಯವಾದಂತ ಬೇಡಿಕೆಯಾಗಿದ್ದು ಇದನ್ನು ಮೂವ್ ಮಾಡಬೇಕಾಗಿತ್ತು. ಇಲ್ಲವೆಂದರೆ ಇದರ ಬಗ್ಗೆ ಎಕ್ಸ್‌ಪ್ಲನೇಶನ್ ಕೊಡಬೇಕಾಗಿತ್ತು, ಇಲ್ಲವೆಂದರೆ ಇದನ್ನು ಇದರಲ್ಲೇ ಅಳವಡಿಸಿಕೊಂಡಿದ್ದೇವೆ ಎಂದು ಹೇಳಬೇಕಾಗಿತ್ತು. ಆದ್ದರಿಂದ ಇದನ್ನು ಈಗ ಪಾಸ್ ಮಾಡುವುದಕ್ಕಾಗುವುದಿಲ್ಲ. ತಾವು ಇದನ್ನು ಬೇರೆ ರೀತಿಯಲ್ಲಿ ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ನಾವು ಇದನ್ನು ಓಟ್ ಆನ್ ಅಕೌಂಟ್ ಮಾಡಿದಾಗ ಯಾವ ಹೆಡ್‌ನಲ್ಲಿತ್ತು ಎಂದರೆ ಬೇಡಿಕೆ ಸಂಖ್ಯೆ : 31ರಲ್ಲಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ ಬೇಡಿಕೆ ಸಂಖ್ಯೆ 31ರಲ್ಲೇ ಇರಲಿ, ಇದ್ದರೆ ಯಾರು ಮೂವ್ ಮಾಡಿದ್ದಾರೆ. ಅವರಿಗೆ ಇದರ ಬಗ್ಗೆ ಅರಿವು ಇರಬೇಕು. ಮಾನ್ಯ ಸಗೀರ್ ಅಹಮದ್ ರವರು ಮಾತನಾಡುವಾಗ ಮಾನ್ಯ ಮಂತ್ರಿಯವರು ಅದು ನನಗೆ ಸಂಬಂಧಪಟ್ಟದ್ದಲ್ಲ. ಅದು ಈ ಡಿಮ್ಯಾಂಡ್‌ನಲ್ಲಿ ಬರುವುದಿಲ್ಲ, ನೀವು ಮಾತನಾಡಬೇಡಿ ಎಂದು ಕುಳಿತರು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಡಿ ಎಂದು ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಮಾತನಾಡಬೇಡಿ ಎಂದು ಹೇಳಿದ್ದೀರಿ, ಅದು ನನಗೆ ಸಂಬಂಧಪಟ್ಟದ್ದು ಅಲ್ಲವೆಂದು ಹೇಳಿದ್ದೀರಿ. ಇದಕ್ಕೆ ನಾನು ಉತ್ತರ ಕೊಡುವ ಹಾಗೆ ಇಲ್ಲವೆನ್ನುವಂಥಾದ್ದು ಬಂತು. ಆಗ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಕೂಡ ಇರಲಿಲ್ಲವೆಂದಾಗ ಈ ಡಿಮ್ಯಾಂಡ್ ಅನ್ನು ಈ ಸದನದಲ್ಲಿ ಹೇಗೆ ಪಾಸ್ ಮಾಡುತ್ತೀರೆಂಬುದನ್ನು ಹೇಳಿ. There is no demand and without asking if this House is going to pass, then you can pass.

Mr. Speaker, There is nothing like the House passing demand without being asked by anybody. Such a Situation will not arise. But this demand of Municipal Administration was included under Demand No. 31 when we had passed the vote on account.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಇದರಲ್ಲಿ ಬರುವುದಿಲ್ಲವೆಂದು ಹೇಳಿದ್ದಾರೆ.

Mr. Speaker : Hon'ble Leader of Opposition, you were the Cabinet Minister. You know. Some times there will be lack of information. I have got the clarification from the Finance Department. The Hon'ble Minister for Municipal Administration is not independently incharge of municipal administration. He is attached. Actually the mistake lies with the Finance Department. At the time of notification they should have clarified. Anyway they have now come forward clarifying this. I appeal to the Members not to make it a big issue. Try to treat it as Demand No. 31.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಬಹಳಷ್ಟು ಕನ್‌ಫ್ಯೂಶನ್ ಆಗುತ್ತದೆ. ಆ ಡಿಮ್ಯಾಂಡ್ ಇದರಲ್ಲಿ ಇಲ್ಲ, ಮಂತ್ರಿಗಳು ಇಲ್ಲವೆಂದರೆ ಅದರ ಮೇಲೆ ಮಾತನಾಡುವುದು ಇರುವುದಿಲ್ಲ. ಏಕೆಂದರೆ 205 ಮುನಿಸಿಪಾಲಿಟಿಗಳೆಂದರೆ ಈ ಸದನದಲ್ಲಿರುವಂತಹ ಅನೇಕ ಸದಸ್ಯರುಗಳಿಗೆ ಸಂಬಂಧಪಟ್ಟದ್ದು ಇರುತ್ತದೆ. ಯಾವುದಾದರೂ ಒಂದು ರೂಪದಲ್ಲಿ ಪ್ರಶ್ನೆಯನ್ನು ಕೇಳುವಂಥಾದ್ದು ಅಥವಾ ಹೇಳುವಂಥಾದ್ದು ಇರುತ್ತದೆ.

ಅಧ್ಯಕ್ಷರು : ಕ್ಲಾರಿಫಿಕೇಷನ್ ಕೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದ್ದರೆ ತಾನೆ ಕೇಳುವುದು, ಅದು ನಿಮಗೆ ಬಿಟ್ಟಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನೇ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ಮೇಲೆ ಮಾತನಾಡಿದ್ದೇನೆ. ಆಗ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಯವರು ಗೈರು ಹಾಜರಿ ಇದ್ದರು. ಈ ವಿಷಯ ಬಂದಾಗ ಮಾನ್ಯ ನಗರಾಭಿವೃದ್ಧಿ ಸಚಿವರು ನಾನು ಬರೆದುಕೊಂಡು ಮಂತ್ರಿಯವರಿಗೆ ಬಂದಮೇಲೆ ಹೇಳುತ್ತೇನೆಂದು ಹೇಳಿದ್ದರು ಈಗ ಇರುವಂತಹ ಸ್ಥಳೀಯ ಸಂಸ್ಥೆಗಳಲ್ಲಿ ಸಾಕಷ್ಟು ಸಮಸ್ಯೆಗಳು ಇರುವಾಗ ನಾನು ಮಾತನಾಡಿದ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ಉತ್ತರವನ್ನು ಕೊಡುವುದಾದರೆ ನೋಡೋಣ.

ಅಧ್ಯಕ್ಷರು : ನೀವು ಕಲ್ಕತ್ತಾಗೆ ಹೋಗಿ ಬನ್ನಿ, ನಾನು ಶ್ರೀ ಮೀರಾಜುದ್ದೀನ್ ಪಾಟೀಲ್‌ರ ಹತ್ತಿರ ಅನಂತರ ಉತ್ತರ ಕೊಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು ಕಲ್ಕತ್ತಾಗೆ ಹೋಗುವಂತಹ ಸ್ಥಿತಿಯಲ್ಲಿ ಇಲ್ಲ.

ಅಧ್ಯಕ್ಷರು : ನೀವು ಮೊದಲು ಕಲ್ಕತ್ತಾಗೆ ಹೋಗುವಂಥಾದ್ದನ್ನು ಖಾಯಂ ಮಾಡಿಕೊಳ್ಳಿ ನಂತರ ನಿಮಗೆ ಶ್ರೀ ಮೀರಾಜುದ್ದೀನ್ ಪಾಟೀಲ್‌ರವರಿಗೆ ಹೇಳಿ ಎಲ್ಲಾ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಮೀರಾಜುದ್ದೀನ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅರ್ಬನ್ ಡೆವಲಪ್‌ಮೆಂಟ್ ಎಂದು ಮುನಿಸಿಪಾಲಿಟಿ ಅಡ್ಮಿನಿಸ್ಟ್ರೇಷನ್ ಬೇರೆ ಎಂದು ಸೆಪರೇಟಾಗಿ ತೋರಿಸಿಲ್ಲ. ಅದಕ್ಕಾಗಿ ನಾನು ಹಾಜರಿರಲಿಲ್ಲ. ಮತ್ತೊಂದು ವಿಷಯ ನಾನು ಲೇಟಾಗಿ ಬರುವುದಕ್ಕೆ ಕಾರಣ ನನ್ನ ತಂದೆಯವರು ಆಸ್ಪತ್ರೆಯಲ್ಲಿ ಅಡ್‌ಮಿಟ್ ಆಗಿದ್ದಾರೆ. ಆದುದರಿಂದ, ನಾನು ಅಲ್ಲಿಗೆ ಹೋಗಿದ್ದೆ. ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮಾನ್ಯ ಬಚ್ಚೇಗೌಡರು ಉತ್ತರವನ್ನು ಕೊಟ್ಟಿದ್ದಾರೆ. ನೀವು ಸೆಪರೇಟಾಗಿ ಉತ್ತರವನ್ನು ಕೊಡಬೇಕೆಂದರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ರಾಜಶೇಖರ್ ಶೀಲವಂತ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಬಜೆಟ್ ಅಧಿವೇಶನದ ಅವಧಿಯಲ್ಲಿ ನಾನು ಲಿಖಿತ ಮೂಲಕ ಪ್ರಶ್ನೆಯನ್ನು ಕೇಳಿದ್ದಾಗ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದೇನೆಂದರೆ ಗುಳೇದಗುಡ್ಡಕ್ಕೆ ವಾಟರ್ ಸಪ್ಲೈಯನ್ನು 31ನೇ ಮಾರ್ಚಿ ತಿಂಗಳ ಒಳಗಡೆ ಸಂಪೂರ್ಣವಾಗಿ ಮುಗಿಸಿ ಕೊಡುತ್ತೇನೆಂದು ಸನ್ಮಾನ್ಯ ಮಂತ್ರಿಯವರು ತಿಳಿಸಿದ್ದರು. ಆ ಪ್ರಕಾರ ಅವರ ಕಡೆಯಿಂದ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಗೆ, ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ತಿಳಿಸಲಾಯಿತು. ಆಷ್ಟಾದರೂ ಸಹಿತ ಗುಳೇದಗುಡ್ಡದಲ್ಲಿ ಬೇಸಿಗೆ ಸಂದರ್ಭದಲ್ಲಿ ಕನಿಷ್ಟ 15 ದಿವಸಕ್ಕಿಂತ ಮೊದಲು ಒಮ್ಮೆಯೂ ಸಹ ನೀರನ್ನು ಪೈಪ್ ಮೂಲಕ ಪಡೆಯಲಿಲ್ಲ. ಬೋರ್‌ವೆಲ್‌ಗಳು ಹಾಗೂ ಸವಳು ನೀರು ಇರುವುದರಿಂದ ಕುಡಿಯುವ ನೀರಿನ ವ್ಯವಸ್ಥೆ ಹದಗೆಟ್ಟು ಜನರ ಒತ್ತಡದಿಂದಾಗಿ

ನಾನು ಸತ್ಯಾಗ್ರಹವನ್ನು ಕೂಡ ಮಾಡುವಂಥ ಪರಿಸ್ಥಿತಿ ಬಂತು. ಪೈಪ್‌ಲೈನ್ ಎಳೆಯುವಂಥ ವ್ಯವಸ್ಥೆ ಸಂಪೂರ್ಣವಾಗಿ ಆಗಿದ್ದು ಮೋಟಾರನ್ನು ಅಳವಡಿಸುವಂಥ ಕೆಲಸ ಮಾತ್ರ ಬಾಕಿ ಉಳಿದಿತ್ತು. ಈ ಒಂದು ಕೆಲಸವನ್ನು ಮಾಡಲಿಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏಕೆ ಹಿಂದೇಟು ಹಾಕಿದರು ಎಂದು ತಿಳಿಯಲಿಲ್ಲ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳಿಗೂ ಸಾಕಷ್ಟು ಬಾರಿ ಒತ್ತಡವನ್ನು ಸಹ ಮಾಡಿದೆವು. ಈ ಮಳೆಗಾಲದ ಸಂದರ್ಭದಲ್ಲೂ ಸಹಿತ ಗುಳೇದಗುಡ್ಡದಲ್ಲಿ ಹನ್ನೆರಡು ದಿವಸಕ್ಕೆ ಒಮ್ಮೆ ನೀರು ಸಿಗುತ್ತಾ ಇದೆ ಎಂದರೆ ನಾವು ಜನರಿಗೆ ಯಾವರೀತಿ ಉತ್ತರವನ್ನು ಕೊಡಬೇಕು ಎಂಬ ಸಮಸ್ಯೆ ಉಂಟಾಗಿದೆ. ಅವರು ಅತ್ಯಂತ ತೀವ್ರವಾಗಿ ಒಂದು ಮೆಷಿನ್‌ನ್ನು ಕೂರಿಸಿದ್ದು ಅದರ ಟ್ರಯಲ್ ಸಹಿತ ಇನ್ನೂವರೆಗೆ ಮಾಡಿಲ್ಲ. ನಾವು ಎಷ್ಟೋ ಸಾರಿ ಒತ್ತಡವನ್ನು ತಂದರೂ ಕೂಡ ಟ್ರಯಲ್ ಅನ್ನು ಶುರು ಮಾಡಿಲ್ಲ. ಅದು ಏಕೆ ಈ ರೀತಿ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾನು ಏನು ಸತ್ಯಾಗ್ರಹವನ್ನು ಮಾಡಿದ್ದೆ ಅದರ ಕುರಿತು ಕಾಪಿಯನ್ನು ಜಿಲ್ಲಾಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ಕಳುಹಿಸಿದ್ದೆ. ಈವರೆಗೂ ಸಹ ಏನು ಕ್ರಮವನ್ನು ತೆಗೆದುಕೊಳ್ಳದಿರುವಂಥದ್ದನ್ನು ನೋಡಿದರೆ ಮುಂದೆ ನಾವು ಯಾವರೀತಿಯಿಂದ ಹೋರಾಟ ಮಾಡಬೇಕು ಎನ್ನುವಂಥ ಸಮಸ್ಯೆ ಇದೆ. ದಯವಿಟ್ಟು ಮಾನ್ಯ ಮಂತ್ರಿಗಳು ನಮ್ಮ ಗುಳೇದಗುಡ್ಡಕ್ಕೆ ಕುಡಿಯುವ ನೀರಿನ ಸರಬರಾಜು ಮಾಡುವುದಕ್ಕಾಗಿ, ಉಳಿದಿರುವ ಕೆಲಸಗಳನ್ನು ಮುಗಿಸುವುದಕ್ಕಾಗಿ ಏನಾದರೂ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಒಂದು ವಾರದಲ್ಲಿ ಅವರಿಗೆ ನೀರನ್ನು ಕೊಡುವಂಥದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರು ತಿಳಿದುಕೊಳ್ಳಬೇಕು. ಈಗಾಗಲೇ ಸಮಯ ಎರಡು ಗಂಟೆಯಾಗಿದೆ, ಇನ್ನೂ ವಸತಿ ಸಚಿವರ ಉತ್ತರ ಆಗಬೇಕು. ಅನಂತರ ಸ್ಪಷ್ಟೀಕರಣ ಆಗಬೇಕು, ಅನಂತರ ಊಟಕ್ಕೆ ಹೋಗಬೇಕಾಗಿದ್ದು ಮಧ್ಯಾಹ್ನಕ್ಕೂ ಕೂಡ ಸಾಕಷ್ಟು ಕೆಲಸ ಇದೆ. ನಿಮ್ಮ ಇಂಡವಿಜುಯಲ್ ಪ್ರಾಬ್ಲಮ್ಸ್ ಏನಾದರೂ ಇದ್ದರೆ ದಯಮಾಡಿ ಮಾನ್ಯ ಮಂತ್ರಿಗಳನ್ನು ಕೇಳಿ, ಮಂತ್ರಿಗಳು ಬಹಳ ಒಳ್ಳೆಯವರಿದ್ದಾರೆ ಅವರು ಕೆಲಸಗಳನ್ನು ಮಾಡಿಕೊಡುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಾನು ಸಾಕಷ್ಟುಬಾರಿ ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ, ನಾವು ಬಾರ್ಡರ್ ಏರಿಯಾದಲ್ಲಿದ್ದು 5-10 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಿರಿ ಎಂದು ಸಾಕಷ್ಟು ಸಾರಿ ಹೇಳಿದರೂ ಕೂಡ ನಮ್ಮ ಬೆಳಗಾಂ ಜಿಲ್ಲೆಯ ಪುರಸಭೆಗಳಿಗೆ ಹಣವನ್ನು ಬಿಡುಗಡೆ ಮಾಡುವುದೇ ಇಲ್ಲ. ಅದೇ ಬೀದರ್‌ಗೆ45 ಲಕ್ಷ ರೂಪಾಯಿಗಳ ಹಾಸನಕ್ಕೆ75 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಾಗ ನಮ್ಮ ಜಿಲ್ಲೆಗೂ ಸಹ ಎರಡು ಕೋಟಿ ರೂಪಾಯಿಗಳ ಗ್ರಾಂಟ್ಸ್ ಏನು ಬಂದಿದೆ ಅದರಲ್ಲಿ ಸರಿಸಮಾನವಾಗಿ ಹಂಚುವಂಥ ವ್ಯವಸ್ಥೆ ಆಗಬೇಕಾಗುತ್ತದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, 1993-94ರಲ್ಲಿ ಒಳಚರಂಡಿ ವ್ಯವಸ್ಥೆ 43 ನಗರಗಳಿಗೆ ಮಂಜೂರಾಗಿತ್ತು. ಆ ಪೈಕಿ 23 ನಗರಗಳಲ್ಲಿ ಕೆಲಸ ಪ್ರಾರಂಭವಾಗಿದ್ದು, ಉಳಿಕೆ 20 ನಗರಗಳದ್ದು ಕುರಿತಂತೆ ಹಣಕಾಸಿಗೆ ಸಂಬಂಧಿಸಿದಂತೆ ಪ್ರೋಸೆಸ್‌ನಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದರ ಪೈಕಿ ನಮ್ಮ ಶಿಡ್ಲಘಟ್ಟ ನಗರವೂ ಸೇರಿಕೊಂಡಿದೆ. ನಮ್ಮ ಪುರಸಭೆ ವತಿಯಿಂದ 19 ಲಕ್ಷ ರೂಪಾಯಿಗಳ ವಂತಿಗೆಯನ್ನು ಕಟ್ಟಿ ಸುಮಾರು ಆರು ತಿಂಗಳಿಗೂ ಹೆಚ್ಚು ಕಾಲವಾಗಿದೆ. ಯಾರ್‍ಯಾರು ಪುರಸಭೆಗೆ ವಂತಿಗೆಯನ್ನು ಕಟ್ಟಿಲ್ಲ ಅವರದು ಮಾತ್ರ ಪೆಂಡಿಂಗ್‌ನಲ್ಲಿದೆ ಎಂದು ಮಂತ್ರಿಗಳು ಹೇಳಿದ್ದಾರೆ. ನಾವು ಈಗಾಗಲೇ 19 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿದ್ದರೂ ಇನ್ನೂವರೆಗೂ ಕೂಡ ಕೆಲಸ ಪ್ರಾರಂಭವಾಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಈಗಾಗಲೇ ಇದು ಬೋರ್ಡ್‌ನಲ್ಲಿ ಅಪ್ರೂವಲ್ ಆಗಿ ಸರ್ಕಾರದ ಮುಂದೆ ಬಂದಿದ್ದು ಕೆಲವೇ ದಿವಸದಲ್ಲಿ ಇದಕ್ಕೆ ಮಂಜೂರಾತಿಯನ್ನು ನೀಡಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು : ಮಿರಾಜುದ್ದೀನ್‌ರವರೆ, ಪ್ರಕಾಶ್ ಹುಕ್ಕೇರಿಯವರ ಪ್ರಶ್ನೆ ಏನೆಂದರೆ, ಎರಡು ಕೋಟಿ ರೂಪಾಯಿಗಳ ಗ್ರ್ಯಾಂಟ್ ಬಂತಲ್ಲ ಅದನ್ನು ಸ್ವಲ್ಪ ನಿಮ್ಮ ಜಿಲ್ಲೆಗೆ ಹೆಚ್ಚು ತೆಗೆದುಕೊಂಡಿದ್ದೀರಿ, ಎಲ್ಲಾ ಕಡೆಗೂ ಸಮಾನವಾಗಿ ಹಂಚಬೇಕು ಎಂದು ಕೇಳುತ್ತಿದ್ದಾರೆ, ಇನ್ನು ಮುಂದೆ ಅದೇ ರೀತಿ ಮಾಡುತ್ತೇನೆ ಎಂದು ಹೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದಂತೆಯಾದರು ಮಾಡಿದರೆ ಚಿಂತೆ ಇಲ್ಲ. ಆದರೆ ಅನೇಕ ಸಲ ನಿಮ್ಮ ಮಾತೂ ಕೂಡ ನಡೆಯುವುದಿಲ್ಲವಲ್ಲ. ಆಗ ನಾವು ಇಕ್ಕಟ್ಟಿಗೆ ಸಿಕ್ಕುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಹಾಸನಕ್ಕೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಅದೂ ಬ್ಯಾಕ್‌ವರ್ಡ್ ಏರಿಯಾನೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಾಸನಕ್ಕೆ ತೆಗೆದುಕೊಂಡರೆ ತಪ್ಪೇನು. ಮುಖ್ಯಮಂತ್ರಿಗಳಾಗಿದ್ದರು, ಪ್ರಧಾನಿಗಳಾಗಿದ್ದರು. ನೀವೇನಾದರೂ ಇದ್ದರೆ ಆ ರೀತಿ ಕೊಡುವುದಿಲ್ಲವೆ. ಅದರಲ್ಲಿ ತಪ್ಪೇನು?

ಶ್ರೀ ಹೆಚ್.ಡಿ. ರೇವಣ್ಣ : ಅದು ಕನ್ನಡ ಸಾಹಿತ್ಯ ಪರಿಷತ್‌ನ ಸಮ್ಮೇಳನಕ್ಕೋಸ್ಕರ ಕೊಟ್ಟಂಥದ್ದು. ನಮ್ಮ ಸ್ವಂತಕ್ಕೆ ಎಂದು ಅಲ್ಲ.

ಶ್ರೀ ಮಿರಾಜುದ್ದೀನ್ ಪಟೇಲ್ : ಸನ್ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡುತ್ತಿದ್ದುದರಿಂದ, ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ನಿಮ್ಮ ಮುನಿಸಿಪಾಲಿಟಿಯಿಂದ ಏನಾದರೂ ಅವರಿಗೆ ಸ್ವಲ್ಪ ಸಹಾಯ ಮಾಡಿ ಎಂದು ಹೇಳಿದರು ಅದಕ್ಕೋಸ್ಕರ ಕೊಟ್ಟಂಥದ್ದು. ಬೇಕಾದರೆ ಬೆಳಗಾಂನಲ್ಲೂ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿದರೆ ಅಲ್ಲಿಗೂ ಕೂಡ ಕೊಡೋಣ.

ಅಧ್ಯಕ್ಷರು : ಈಗ ವಸತಿ ಸಚಿವರಿಂದ ಉತ್ತರ.

1997-98ನೇ ಸಾಲಿನ ವಸತಿ ಇಲಾಖೆಯ ಬೇಡಿಕೆಗೆ ಮಂತ್ರಿಗಳಿಂದ ಉತ್ತರ

+ ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆ ಕುರಿತು ಇದುವರೆಗೆ ಮಾನ್ಯ ಹಿರಿಯ ಸದಸ್ಯರಾದಂಥ ಯು.ಆರ್. ಸಭಾಪತಿಯವರು, ಜಗದೀಶ್ ಶೆಟ್ಟರು, ಸಗೀರ್ ಅಹಮದ್‌ರವರು, ಬಣಕಾರ್‌ರವರು, ಯೋಗೀಶ್ ಭಟ್‌ರವರು, ಮತ್ತು ಇನ್ನಿತರೆ ಮಾನ್ಯ ಸದಸ್ಯರುಗಳು ನಾನಾ ಸಲಹೆಗಳನ್ನು ನೀಡಿದ್ದಾರೆ. ಇವೊತ್ತಿನದಿವಸ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ನಿವೇಶನ, ಮನೆ ಒದಗಿಸಿಕೊಡಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ 1995ರ ಏಪ್ರಿಲ್ ತಿಂಗಳಿನಲ್ಲಿ ಈ ಒಂದು ವಸತಿ ಇಲಾಖೆಯನ್ನು ಸೆಪರೇಟ್ ಮಾಡಿ, ಆ ಉದ್ದೇಶದಿಂದಲೆ ಒಂದು ನಿರ್ಣಯವನ್ನು ಮಾಡಿದೆ. ವಸತಿ ಇಲಾಖೆಯ ಸಮೀಕ್ಷೆಯ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 19 ಲಕ್ಷ ಕುಟುಂಬಗಳಿಗೆ ಮನೆ ಇಲ್ಲ ಹಾಗೂ ಈ ಪೈಕಿ 8ಲಕ್ಷ ಕುಟುಂಬಗಳಿಗೆ ನಿವೇಶನ ಇದ್ದು, ಉಳಿದ11 ಲಕ್ಷ ಕುಟುಂಬಗಳಿಗೆ ನಿವೇಶನ ಇರುವುದಿಲ್ಲ. ಈ ಒಂದು ಉದ್ದೇಶದಿಂದ ಕಳೆದ 1995-96ನೇ ಸಾಲಿನಲ್ಲಿ ಸುಮಾರು 60 ಸಾವಿರ ಮನೆಗಳನ್ನು ಮಾಡಬೇಕೆಂದು ಸರ್ಕಾರ ಗುರಿ ಹೊಂದಿತ್ತು. ಅದಕ್ಕೋಸ್ಕರವೆ 48 ಕೋಟಿ ರೂಪಾಯಿಗಳನ್ನು ನಮ್ಮ ಬಜೆಟ್ಟಿನಲ್ಲಿ ಇಟ್ಟಿದ್ದರು. ಅದರಲ್ಲಿ ಇಟ್ಟಿದ್ದಂಥ48 ಕೋಟಿ ರೂಪಾಯಿಗಳ ಪೂರ್ತ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ರಾಜ್ಯದಲ್ಲಿ 1995-96, 1996-97ರಲ್ಲಿ ಆಶ್ರಯ ಯೋಜನೆಯಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ ಮತ್ತು ಹಣವನ್ನು ಸಹ ಬಿಡುಗಡೆ ಮಾಡಿಲ್ಲ ಎಂದು ಮಾನ್ಯ ಸದಸ್ಯರು ತಿಳಿಸಿದರು. ನಾವು ಕಳೆದ 5 ವರ್ಷಗಳ ಮಾಹಿತಿಯನ್ನು ಸಭೆಯ ಮುಂದಿಡುತ್ತಿದ್ದೇನೆ. 1993-94ರಲ್ಲಿ ಸುಮಾರು 75,336 ಮನೆಗಳನ್ನು ಕಟ್ಟಲಿಕ್ಕಾಗಿ ಯೋಜನೆಯನ್ನು ಹಾಕಿಕೊಂಡು ಅದರಲ್ಲಿ71,000 ಮನೆಗಳನ್ನು ನಿರ್ಮಾಣ ಮಾಡುವುದಕ್ಕಾಗಿ 114 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 1994-95ರಲ್ಲಿ 9,329 ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಯೋಜಿಸಲಾಗಿತ್ತು ಅದರಲ್ಲಿ 8,082 ಮನೆಗಳು ಪೂರ್ಣಗೊಂಡಿವೆ. ಇದಕ್ಕಾಗಿ 12ಕೋಟಿ 12ಲಕ್ಷ ರೂಪಾಯಿಗಳ ಬಿಡುಗಡೆಯಾಗಿದೆ. ಬಾಕಿ ಹಣ ಬಿಡುಗಡೆಯಾಗಬೇಕಾಗಿರುವಂಥದ್ದಕ್ಕೆ ಸಂಬಂಧಿಸಿದಂತೆ ಕಳೆದ ವಿಧಾನಸಭೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಗೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆನ್ನುವ ಒಂದು ಪ್ರಸ್ತಾವನೆಯನ್ನು ಮಾನ್ಯ ಸದಸ್ಯರುಗಳು ಕೇಳಿದರು. ಆ ಬಾಕಿ ಹಣ ಏನು ನಾಲ್ಕುವರೆ ಕೋಟಿ ರೂಪಾಯಿಗಳು ಇತ್ತು ಅದನ್ನೂ ಸಹ ಬಿಡುಗಡೆ ಮಾಡಿದ್ದೇವೆ.

2.10 ಪಿ.ಎಂ

ಅದರ ಜೊತೆಗೆ 1995-96ನೇ ಸಾಲಿನಲ್ಲಿ ಸುಮಾರು 60,000 ಮನೆಗಳನ್ನು ಮಾಡಬೇಕು ಎನ್ನುವ ಗುರಿ ಹೊಂದಿದ್ದು, ಅದರಲ್ಲಿ ಸುಮಾರು 48,000 ಮನೆಗಳನ್ನು ಈಗಾಗಲೇ ನಾವು ಪೂರ್ಣಗೊಳಿಸಿದ್ದೇವೆ. ಬಾಕಿ ಉಳಿಕೆ ಮನೆಗಳನ್ನು ಮಾಡುವುದಕ್ಕೆ ನಾವು ಈಗಾಗಲೇ 103 ಕೋಟಿ

ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ. ಬಾಕಿ 17 ಕೋಟಿ ರೂಪಾಯಿಗಳಷ್ಟು ಹುಡ್ಕೋ ವತಿಯಿಂದ ಸಾಲದ ರೂಪದಲ್ಲಿ ತರಬೇಕಾಗಿದೆ. ಅದನ್ನು ತರುವುದಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರನ್ನು ನಾನು ದೆಹಲಿಗೆ ಕಳುಹಿಸಿಕೊಟ್ಟಿದ್ದೇನೆ. ಅದರ ಜೊತೆಗೆ 1996-97ರಲ್ಲಿ ಸುಮಾರು 40,000 ಮನೆಗಳನ್ನು ಮಾಡಬೇಕು ಎನ್ನುವ ಗುರಿಯನ್ನು ಹೊಂದಿದ್ದು, ಅದರಲ್ಲಿ 8,580 ಮನೆಗಳು ಪ್ರಗತಿಯಲ್ಲಿವೆ. ಅದಕ್ಕೂ ಸಹ 44 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿದ್ದೇವೆ. ಬಾಕಿ ಉಳಿಕೆ ಹಣವನ್ನು ಹುಡ್ಕೋ ನೆರವಿನಿಂದ ಸಾಲ ಪಡೆಯಲು ಪ್ರಯತ್ನ ಪಡುತ್ತಿದ್ದೇವೆ. 1997-98ರಲ್ಲಿ 43 ಕೋಟಿ ರೂಪಾಯಿಗಳಷ್ಟು ಹಣ ಇಟ್ಟಿದ್ದು, ಅದರಲ್ಲಿ 43,600 ಮನೆಗಳನ್ನು ಕಟ್ಟಬೇಕು ಎನ್ನುವ ಗುರಿಯಿದ್ದು, ಅದರಲ್ಲಿ ಈಗಾಗಲೇ ಸುಮಾರು 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬಾಕಿ ಉಳಿಕೆ ಹಣವನ್ನು ಹುಡ್ಕೋದಿಂದ ಸಾಲ ತರಬೇಕು. ಆಶ್ರಯ ಮನೆಗಳು ಏನಿವೆ ಅವುಗಳನ್ನು ಹಂಚಲು ನಾನು ಎಲ್ಲಾ ಸದಸ್ಯರ ಅಪೇಕ್ಷೆ ಮೇರೆಗೆ ಒಂದು ಸಮಿತಿಯನ್ನು ಮಾಡಿದ್ದೇನೆ. ಹಿಂದೆ ಪಂಚಾಯತ್ ರಾಜ್ ಆಕ್ಟ್ ಪ್ರಕಾರ ಗ್ರಾಮಸಭೆಗಳ ಮುಖೇನ, ಗ್ರಾಮಸಭೆಗಳು ತೀರ್ಮಾನ ಮಾಡಿದ ಫಲಾನುಭವಿಗಳನ್ನೇ ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ ಆಯ್ಕೆ ಮಾಡಬೇಕು ಎನ್ನುವುದು ಇತ್ತು. ಅದನ್ನು ತೆಗೆದು ಹಾಕಿ ನಾವು ಮಾನ್ಯ ಸದಸ್ಯರ ಅಪೇಕ್ಷೆ ಮೇರೆಗೆ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಈಗಾಗಲೇ ರಚನೆ ಮಾಡಿದ್ದೇವೆ. ಆ ಸಮಿತಿಗೆ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಅದರ ಜೊತೆಗೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಉಪಾಧ್ಯಕ್ಷರಾಗಿರುತ್ತಾರೆ. ಮೂರು ಜನ ನಾಮನಿರ್ದೇಶನ ಹೊಂದಿದ ಸದಸ್ಯರೂ ಸಹ ಸಮಿತಿಯಲ್ಲಿ ಇರುತ್ತಾರೆ. ಸಮಿತಿಗೆ ಪೂರ್ಣ ಅಧಿಕಾರ ಇರುತ್ತದೆ. ಅದಕ್ಕೆ ಆದೇಶವನ್ನೂ ಸಹ ಕೊಟ್ಟಿದ್ದೇವೆ. ಏನು ಅಧಿಕಾರ ಇರುತ್ತದೆ ಎನ್ನುವುದನ್ನು ನಾನು ಈ ಸಭೆಯ ಮುಂದೆ ತಿಳಿಸಬೇಕಾಗುತ್ತದೆ. ಈ ಸಮಿತಿ ಕಾರ್ಯನಿರ್ವಹಣೆ ಮಾಡಬೇಕಾದರೆ, ಗ್ರಾಮಸಭೆಗಳು ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ, ಹಾಗೆ ಆಯ್ಕೆಯಾದಂಥ ಎಲ್ಲ ಪಟ್ಟಿಯೂ ಆ ಸಮಿತಿಯ ಮುಂದೆ ಬರುತ್ತದೆ. ಅದರಲ್ಲಿ ನಿಜವಾದಂಥ ಫಲಾನುಭವಿಗಳನ್ನು ಆಯ್ಕೆ ಮಾಡುವಂಥ ಅಧಿಕಾರ ಸಮಿತಿಗೆ ಇರುತ್ತದೆ. ಅದರ ಜೊತೆಗೆ ಯಾರಾದರೂ ಫಲಾನುಭವಿಗಳನ್ನು ಕೈಬಿಟ್ಟಿದ್ದರೆ, ಆ ಫಲಾನುಭವಿಗಳು ಸಮಿತಿಯವರ ಮುಂದೆ ಅರ್ಜಿ ಕೊಟ್ಟರೆ, ಅದನ್ನು ಪರಿಶೀಲನೆ ಮಾಡಿ ಆ ಫಲಾನುಭವಿಗಳು ನಿಜವಾದ ಫಲಾನುಭವಿಗಳು ಆಗಿದ್ದರೆ ಅವರಿಗೂ ಸಹ ಕೊಡುವಂಥ ಅಧಿಕಾರವನ್ನು ನಾವು ಸಮಿತಿಗೆ ಕೊಟ್ಟಿದ್ದು, ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ಮಾಡಿ, ಈಗಾಗಲೇ 12-6-97ರಲ್ಲಿ ಸರ್ಕಾರೀ ಆದೇಶವನ್ನೂ ನಾವು ಹೊರಡಿಸಿದ್ದೇವೆ. ಅದರ ಜೊತೆಗೆ, ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಆಶ್ರಯ ನಿವೇಶನಗಳಿಗೆ ಹಣವನ್ನೇ ಕೊಟ್ಟಿಲ್ಲ ಎನ್ನುವ ಆಪಾದನೆಯನ್ನೂ ಸಹ ಮಾನ್ಯ ಸದಸ್ಯರು ಮಾಡಿ, ಸಭೆಯ ಗಮನಕ್ಕೆ ತಂದರು. ನಾವು ಈಗಾಗಲೇ 1995-96ನೇ ಸಾಲಿನಲ್ಲಿ 1,75,000 ನಿವೇಶನಗಳನ್ನು ಮಾಡಬೇಕು ಎನ್ನುವ ಯೋಜನೆಯನ್ನು ಮಾಡಿ 32,808 ನಿವೇಶನಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಅದಕ್ಕೆ 5 ಕೋಟಿ ರೂಪಾಯಿಗಳಷ್ಟು ಇದ್ದು, ನಾವು

5 ಕೋಟಿ ರೂಪಾಯಿಗಳಷ್ಟು ಹಣವನ್ನೂ ಬಿಡುಗಡೆ ಮಾಡಿದ್ದೇವೆ. ಅದರ ಜೊತೆಗೆ 1996-97ನೇ ಸಾಲಿನಲ್ಲಿ 1,42,000 ನಿವೇಶನಗಳನ್ನು ಕೊಡಬೇಕು ಎನ್ನುವ ಕಾರ್ಯಕ್ರಮವಿದ್ದು, ಅದರಲ್ಲಿ 99,497 ನಿವೇಶನಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಅದಕ್ಕೆ 13 ಕೋಟಿ 75 ಲಕ್ಷ ರೂಪಾಯಿ ಹಣ ಇತ್ತು. ನಾವು 13 ಕೋಟಿ 75 ಲಕ್ಷ ರೂಪಾಯಿ ಹಣವನ್ನು ಬಿಡುಗಡೆಮಾಡಿದ್ದೇವೆ. ಅದರ ಜೊತೆಗೆ ಈ ವರ್ಷ ಅಂದರೆ 1997-98ನೇ ಸಾಲಿನಲ್ಲಿ ಕಳೆದ ವರ್ಷಕ್ಕಿಂತ ಒಂದೂಕಾಲು ಕೋಟಿ ರೂಪಾಯಿ ಹಣವನ್ನು ನಿವೇಶನಕ್ಕೋಸ್ಕರ ಹೆಚ್ಚಿಗೆ ಇಟ್ಟಿದ್ದೇವೆ. ಅಂದರೆ, ಈ ವರ್ಷ 15 ಕೋಟಿ ರೂಪಾಯಿ ಹಣವನ್ನು ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ಮಾಡುವುದಕ್ಕಾಗಿ ಇಟ್ಟಿದ್ದೇವೆ. ಅದಕ್ಕೆ ಈಗಾಗಲೇ 6 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದರ ಜೊತೆಗೆ, ನಗರ ಪ್ರದೇಶಗಳಲ್ಲಿ ನಿವೇಶನಗಳನ್ನು ಮಾಡಿಲ್ಲ ಎನ್ನುವ ಅಪಾದನೆಯನ್ನೂ ಮಾನ್ಯ ಸಗೀರ್ ಅಹಮದ್‌ರವರು ಮಾಡಿದರು. 1995-96ನೇ ಸಾಲಿನಲ್ಲಿ 29,000 ನಿವೇಶನ ಮಾಡಬೇಕು ಎನ್ನುವ ಗುರಿ ಇತ್ತು. ಅದರಲ್ಲಿ ಈಗ 13,866 ಫಲಾನುಭವಿಗಳಿಗೆ ನಿವೇಶನವನ್ನು ಕೊಟ್ಟಿದ್ದೇವೆ. ಅದರಲ್ಲಿ 4 ಕೋಟಿ ರೂಪಾಯಿ ಹಣ ಇತ್ತು. ನಗರ ಪ್ರದೇಶಗಳ ನಿವೇಶನಗಳಿಗಾಗಿ ನಾವು 4 ಕೋಟಿ ರೂಪಾಯಿ ಹಣವನ್ನೂ ಬಿಡುಗಡೆ ಮಾಡಿದ್ದೇವೆ. 1996-97ನೇ ಸಾಲಿನಲ್ಲಿ 65,000 ನಿವೇಶನಗಳನ್ನು ಕೊಡಬೇಕು ಎನ್ನುವ ಗುರಿ ಇತ್ತು. ಅದರಲ್ಲಿ 17,355 ನಿವೇಶನಗಳನ್ನು ಕೊಟ್ಟಿದ್ದೇವೆ. ಅದಕ್ಕೆ 3 ಕೋಟಿ 75 ಲಕ್ಷ ರೂಪಾಯಿ ಹಣ ಇತ್ತು. ನಾವು 3 ಕೋಟಿ 75 ಲಕ್ಷ ರೂಪಾಯಿ ಹಣವನ್ನೂ ಕೊಟ್ಟಿದ್ದೇವೆ. ಅದರ ಜೊತೆಗೆ, 1997-98ನೇ ಸಾಲಿನಲ್ಲಿ 5 ಕೋಟಿ ರೂಪಾಯಿ ಹಣ ಇತ್ತು. ಈಗಾಗಲೇ ನಾವು ಅದರಲ್ಲಿ 2 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದೂ ಅಲ್ಲದೆ, ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಮೀನು ಕೊಳ್ಳಬೇಕಾದರೆ, ಮಾರುಕಟ್ಟೆ ಬೆಲೆಗಿಂತ ರಿಜಿಸ್ಟ್ರೇಷನ್ ಬೆಲೆ ವ್ಯತ್ಯಾಸ ಇರುತ್ತದೆ. ಏಕೆಂದರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಮಾಡಿಸುವಾಗ ಒಂದು ಲಕ್ಷಕ್ಕೆ ಮಾಡಿಸಿರುತ್ತಾರೆ. ಆದರೆ ನಗರ ಪ್ರದೇಶಗಳಲ್ಲಿ ಒಂದು ಲಕ್ಷಕ್ಕೆ ಜಮೀನು ಸಿಕ್ಕುವುದಿಲ್ಲ. ಆ ದೃಷ್ಟಿಯಿಂದ ಈಗ ನಾವು ಜಿಲ್ಲಾಧಿಕಾರಿಗಳಿಗೆ ಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಅದು ಒಂದು ಲಕ್ಷ ಇರಬಹುದು, ಒಂದೂವರೆ ಲಕ್ಷ ಇರಬಹುದು, ಎರಡು ಲಕ್ಷ ಇರಬಹುದು, ಅಂಥ ನಿವೇಶನಗಳನ್ನು ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪತ್ತೆ ಹಚ್ಚಿ ಸಂಬಂಧಪಟ್ಟ ಶಾಸಕರು ಮತ್ತು ಜಿಲ್ಲಾಧಿಕಾರಿಗಳು ಇಬ್ಬರೂ ಸೇರಿ ಕೆಲಸ ಮಾಡಬೇಕು ಎಂದು ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಗೆ ಪೂರ್ಣ ಅಧಿಕಾರ ಕೊಟ್ಟಿದ್ದೇವೆ. ನಾನು ಈಗಾಗಲೇ 16-7-97ರಂದು ಎಲ್ಲಾ ಮಾನ್ಯ ಶಾಸಕರುಗಳಿಗೆ ಪತ್ರ ಬರೆದು, ವಸತಿ ಬಗ್ಗೆ ಅದು ಆಶ್ರಯ ಮನೆ ಕೊಡುವುದು ಇರಬಹುದು, ಆಶ್ರಯ ನಿವೇಶನ ಇರಬಹುದು ಅಥವಾ ನಗರ ಪ್ರದೇಶಗಳಲ್ಲಿ ನಿವೇಶನ ಮಾಡುವುದು ಇರಬಹುದು, ಅದನ್ನು ಮಾಡಲು ಜಿಲ್ಲಾ ಮಂತ್ರಿಗಳಿಗೆ ಹಾಗೂ ಎಲ್ಲಾ ಶಾಸಕರಿಗೆ ಪತ್ರವನ್ನೂ ಸಹ ಬರೆದು ತಿಳಿಸಿದ್ದೇನೆ. ಅದರ ಜೊತೆ ನಗರ ಪ್ರದೇಶದಲ್ಲಿ ನಾವು ಹುಡ್ಕೋ ವತಿಯಿಂದ ಶೇ. 100ರಷ್ಟು ಸಾಲ ತೆಗೆದುಕೊಂಡು, ಸಾಲದ ಮುಖೇನ ಮನೆಗಳನ್ನು ಕಟ್ಟಬೇಕು ಎನ್ನುವ ಗುರಿಯನ್ನು ಹೊಂದಿದ್ದೇವೆ. ಆದರೆ, ನಗರ ಪ್ರದೇಶಗಳಲ್ಲಿ 20,000 ಮನೆಗಳನ್ನು ಕಟ್ಟಲು ಯಾರೂ ಮುಂದೆ ಬರುತ್ತಿಲ್ಲ. ಆ

ಉದ್ದೇಶದಿಂದ ಈ ವರ್ಷ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ 35,000 ರೂಪಾಯಿಗಳನ್ನು ಇಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈ ರೀತಿ ನಗರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಲು ಬೇಕಾಗಿರುವ 35,000 ರೂಪಾಯಿಗಳನ್ನು ಹುಡ್ಕೋ ನೆರವಿನೊಂದಿಗೆ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಹಮ್ಮಿಕ್ರೊಂಡಿದ್ದೇವೆ. ಅದನ್ನು ಸಚಿವ ಸಂಪುಟದ ಸಭೆಯ ಮುಂದೆ ತಂದು, ಅಲ್ಲಿ ಒಪ್ಪಿಯಾದಮೇಲೆ, ಅವರು 35,000 ರೂಪಾಯಿಗಳಿಗೆ ಆದೇಶ ಕೊಟ್ಟಮೇಲೆ ಅದನ್ನು ನಾನು ಪ್ರಾಮಾಣಿಕವಾಗಿ ನಗರ ಪ್ರದೇಶಗಳಲ್ಲಿ ಮಾಡಲು ಪ್ರಯತ್ನ ಮಾಡುತ್ತೇವೆ ಎಂದು ಈ ಸಭೆಗೆ ತಿಳಿಸುತ್ತೇನೆ. ಅದರ ಜೊತೆಗೆ ಇವತ್ತಿನ ದಿವಸ ಮಾನ್ಯ ಸದಸ್ಯರು ಕೆಲವರು ಸ್ಲಮ್ ಬೋರ್ಡಿನ ಬಗ್ಗೆ ಕೆಲಸ ಆಗಿಲ್ಲ ಎನ್ನುವ ಅಭಿಪ್ರಾಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇವತ್ತು ರಾಜ್ಯದಲ್ಲಿ, 1,871 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಅದರಲ್ಲಿ 1,563 ಪ್ರದೇಶಗಳನ್ನು ಈಗಾಗಲೇ ನಾವು ಐಡೆಂಟಿಪೈ ಮಾಡಿದ್ದೇವೆ. ಅದರಲ್ಲಿ ಬಾಕಿ ಉಳಿಕೆ ಪ್ರದೇಶಗಳನ್ನು ಮಾಡುವುದಕ್ಕೆ ನಾವು ಪ್ರಾಮಾಣಿಕವಾಗಿ ಜಿಲ್ಲಾಧಿಕಾರಿಗಳ ಮುಖೇನ ಪ್ರಯತ್ನ ಪಡುತ್ತಿದ್ದೇವೆ. ಇವತ್ತಿನ ದಿವಸ 1,871 ಸ್ಲಮ್‌ಗಳಲ್ಲಿ 3,36,284 ಬಡ ಕುಟುಂಬದವರು ಇದ್ದಾರೆ ಎಂದು ಹೇಳಿದ್ದಾರೆ. ಅದರಲ್ಲಿ 17 ಲಕ್ಷ ಜನ ಇದ್ದಾರೆ. ಅದರಲ್ಲಿ 8.25,000 ಕೊಳಚೆ ನಿವಾಸಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಎಂದು ಮಾಹಿತಿ ಪ್ರಕಾರ ಕೊಟ್ಟಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ 2 ಕಾರ್ಯಕ್ರಮಗಳನ್ನು ನಾವು ಮಾಡಬೇಕು ಎನ್ನುವ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ. ಅದರಲ್ಲಿ ಮೊದಲನೆಯ ಯೋಜನೆ, ಅದು ಕುಡಿಯುವ ನೀರು ಇರಬಹುದು, ಬೀದಿ ದೀಪ ಇರಬಹುದು, ಸಾರ್ವಜನಿಕ ಶೌಚಾಲಯ ಇರಬಹುದು, ರಸ್ತೆ ಇರಬಹುದು, ಈ ಕಾರ್ಯಕ್ರಮಕ್ಕೆ 1993-94ನೇ ಸಾಲಿನಲ್ಲಿ 3 ಕೋಟಿ 70 ಲಕ್ಷ ರೂಪಾಯಿ ಹಣ ಇಟ್ಟಿದ್ದರು. ಅದರಲ್ಲಿ ಸುಮಾರು 70,475 ಜನರಿಗೆ ಅನುಕೂಲವಾಗಿದೆ ಎನ್ನುವ ಮಾಹಿತಿ ನಮ್ಮ ಇಲಾಖೆ ವತಿಯಿಂದ ಬಂದಿದೆ. 1994-95ನೇ ಸಾಲಿನಲ್ಲಿ 2 ಕೋಟಿ 80 ಲಕ್ಷ ರೂಪಾಯಿಗಳು 1995-96ನೇ ಸಾಲಿನಲ್ಲಿ 3 ಕೋಟಿ 55 ಲಕ್ಷ ರೂಪಾಯಿಗಳು 1996-97ನೇ ಸಾಲಿನಲ್ಲಿ 3 ಕೋಟಿ 95 ಲಕ್ಷ ರೂಪಾಯಿಗಳನ್ನು, ಈ ವರ್ಷ ಅಂದರೆ 1997-98ನೇ ಸಾಲಿನಲ್ಲಿ ಸುಮಾರು 5 ಕೋಟಿ 60 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಸುಮಾರು ಒಂದೂವರೆ ಕೋಟಿ ರೂಪಾಯಿಗೂ ಜಾಸ್ತಿ ಹಣವನ್ನು ಈ ವರ್ಷ ನಾವು ಕೊಳಚೆ ಪ್ರದೇಶಗಳಿಗೆ ಇಟ್ಟಿದ್ದೇವೆ. ಅದರ ಜೊತೆಗೆ, ಎರಡನೆಯದಾಗಿ ಸರ್ಕಾರದ ಅನುದಾನ ಇತರೆ ಇಲಾಖೆಗಳಿಂದ, ನಮ್ಮ ಸಮಾಜ ಕಲ್ಯಾಣ ಇಲಾಖೆಯಿಂದ ಏನು ಬರುತ್ತದೆ, ಆ ಇಲಾಖೆ ಮುಖೇನ 1993-94ನೇ ಸಾಲಿನಲ್ಲಿ 3 ಕೋಟಿ 72 ಲಕ್ಷ ರೂಪಾಯಿ ಖರ್ಚು ಮಾಡಿ 1,600 ಮನೆಗಳನ್ನು ಮಾಡಿದ್ದೇವೆ, 1994-95ನೇ ಸಾಲಿನಲ್ಲಿ 5 ಕೋಟಿ 82 ಲಕ್ಷ ರೂಪಾಯಿ ಖರ್ಚು ಮಾಡಿ 1,775 ಮನೆಗಳನ್ನು ಮಾಡಿದ್ದೇವೆ. 1995-96ನೇ ಸಾಲಿನಲ್ಲಿ 7 ಕೋಟಿ 76 ಲಕ್ಷ ರೂಪಾಯಿ ಖರ್ಚು ಮಾಡಿ ಸುಮಾರು 2,000 ಮನೆಗಳನ್ನು ಮಾಡಿದ್ದೇವೆ. 1996-97ನೇ ಸಾಲಿನಲ್ಲಿ 6 ಕೋಟಿ 79 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 2,000 ಮನೆಗಳನ್ನು ಮಾಡಿದ್ದೇವೆ. ಈ ವರ್ಷ ಅಂದರೆ 1997-98ನೇ ಸಾಲಿನಲ್ಲಿ 8 ಕೋಟಿ 50 ಲಕ್ಷ ರೂಪಾಯಿಗಳ ಹಣವನ್ನು ಇಟ್ಟು ಸುಮಾರು 2,100 ಮನೆಗಳನ್ನು ಮಾಡಬೇಕು

ಎನ್ನುವ ಗುರಿಯನ್ನು ಹೊಂದಿದ್ದೇವೆ. ಕೊಳಚೆ ಪ್ರದೇಶಗಳಿಗೆ ಕೇಂದ್ರ ಸರ್ಕಾರದಿಂದ ಪ್ರಥಮವಾಗಿ ರಾಜ್ಯಕ್ಕೆ 12 ಕೋಟಿ 64 ಲಕ್ಷ ರೂಪಾಯಿ ಬಂದಿದೆ. 12 ಕೋಟಿ 64 ಲಕ್ಷ ರೂಪಾಯಿ ಹಣದಲ್ಲಿ ಸುಮಾರು 184 ಕೊಳಚೆ ಪ್ರದೇಶಗಳನ್ನು ಇವತ್ತು ನಾವು ತೆಗೆದುಕೊಂಡಿದ್ದೇನೆ. 184 ಕೊಳಚೆ ಪ್ರದೇಶಗಳನ್ನು ತೆಗೆದುಕೊಳ್ಳಬೇಕಾದರೆ ಎಲ್ಲಾ ಕೊಳಚೆ ಪ್ರದೇಶಗಳಿಗೆ 6 ಲಕ್ಷ 75 ಸಾವಿರ ರೂಪಾಯಿಗಳಂತೆ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 184 ಕೊಳಚೆ ಪ್ರದೇಶಗಳು ಏನಿವೆ ಅವುಗಳಿಗೆ 6 ಲಕ್ಷ 75 ಸಾವಿರ ರೂಪಾಯಿಗಳಂತೆ ಹಣವನ್ನು ಮೀಸಲಾಗಿಡಲಾಗಿದೆ. ಅದಕ್ಕೆ ಸಂಬಂಧಪಟ್ಟಂಥ ಸ್ಥಳೀಯ ಶಾಸಕರು, ಅವರು ಯಾವುದೇ ಪಕ್ಷದ ಶಾಸಕರು ಇರಬಹುದು, ಅವರ ಮುಖೇನ ಪತ್ರ ತೆಗೆದುಕೊಂಡು ಬಂದರೆ ಸಾಕು. ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ, ಅದರಂತೆ ಶಾಸಕರು, ಯಾವ ಸ್ಲಮ್‌ಗಳಲ್ಲಿ ಕೆಲಸ ಆಗಬೇಕು ಎಂದು ಹೇಳುತ್ತಾರೆ ಅಲ್ಲಿ 6 ಲಕ್ಷ 75 ಸಾವಿರ ರೂಪಾಯಿಯಂತೆ ಕೊಡಿ ಎಂದು ತಿಳಿಸಿದ್ದೇನೆ. ಅದರ ಪ್ರಕಾರ ಈಗಾಗಲೇ ನಾವು ಟೆಂಡರ್ ಕರೆದು ಕಾನೂನುಬದ್ಧವಾಗಿ ಕೆಲಸಗಳನ್ನು ತೆಗೆದುಕೊಳ್ಳುವ ಹಂತದಲ್ಲಿದ್ದೇವೆ. ಕೆಲವು ಕೆಲಸಗಳು ಟೆಂಡರ್ ಕರೆದು ಕಾನೂನುಬದ್ಧವಾಗಿ ಕೆಗೆದುಕೊಳ್ಳಲು ಇವೆ. ಈ 12 ಕೋಟಿ 64 ಲಕ್ಷ ರೂಪಾಯಿಗಳಲ್ಲಿ ಕಾನುನುಬದ್ಧವಾಗಿ, ಶಾಸಕರು ಎಲ್ಲಿ ಕೆಲಸ ತೆಗೆದುಕೊಳ್ಳಬೇಕು ಎಂದು ತಿಳಿಸುತ್ತಾರೆ ಅದರ ಪ್ರಕಾರ ನಾವು ಮಾಡುವುದಕ್ಕೆ ಬದ್ಧರಾಗಿದ್ದೇವೆ ಎಂದು ಈ ಸಭೆಗೆ ತಿಳಿಸುತ್ತೇನೆ. ಅದರ ಜೊತೆಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ 10 ಕೋಟಿ 78 ಲಕ್ಷ ರೂಪಾಯಿಗಳನ್ನು ಈ ವರ್ಷ ನಾವು ಖರ್ಚು ಮಾಡುತ್ತಿದ್ದೇವೆ. ಆ ಹಣದಲ್ಲಿ 3,080 ಮನೆಗಳನ್ನು ಕಟ್ಟಿಸಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಒಂದು ಮನೆಗೆ ಸುಮಾರು 35 ಸಾವಿರ ರೂಪಾಯಿ ವೆಚ್ಚ ತಗಲುವ ಅಂದಾಜು ಇಟ್ಟು ಕೊಂಡಿದ್ದೇವೆ. ಅದನ್ನು ಈಗಾಗಲೇ ರಾಜ್ಯದ ಕೊಳಚೆ ನಿರ್ಮೂಲನ ಮಂಡಳಿ ಮುಖೇನ ಕಾರ್ಯಕ್ರಮ ರೂಪಿಸಿ ತೆಗೆದುಕೊಳ್ಳುತ್ತಿದ್ದಾರೆ. ಇಷ್ಟನ್ನು ನಾನು ಕೊಳಚೆ ಪ್ರದೇಶದ ಬಗ್ಗೆ ತಿಳಿಸಿದ್ದೇನೆ, ಕಳೆದ ಎರಡು ವರ್ಷಗಳಿಂದ ನಾವು ಕೊಳಚೆ ನಿರ್ಮೂಲನೆ ಬಗ್ಗೆ ಯಾವುದೇ ಕೆಲಸ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. 184 ಕೊಳಚೆ ಪ್ರದೇಶದಲ್ಲಿ ಅವರೇನಾದರೂ ಕೊಟ್ಟಿಲ್ಲ ಎಂದರೆ ಅದಕ್ಕೆ ಸಂಬಂಧಪಟ್ಟವರಿಗೆ ಮತ್ತೊಮ್ಮೆ ತಿಳಿಸುತ್ತೇನೆ. ಏಕೆಂದರೆ ಅದು ಕೊಳಚೆ ಪ್ರದೇಶ ಎಂದು ಡಿಕ್ಲೇರ್ ಆಗದೇ ಇರುವುದಕ್ಕೆ ಕೊಟ್ಟದರೆ ಅದನ್ನು ಬೇರೆಯವರಿಗೆ ಮಾಡಿಕೊಡಬೇಕಾಗುತ್ತದೆ, ಇಲ್ಲ ಎಂದರೆ ಬೇರೆಯವರ ಕಡೆಗೆ ಆ ಹಣ ಡೀವಿಯೇಟ್ ಆಗುತ್ತದೆಂದು ಈ ಸದನದ ಮೂಲಕ ತಿಳಿಸುತ್ತೇನೆ. ಇನ್ನು ಗೃಹ ಮಂಡಳಿಯ ಬಗ್ಗೆ ಶಾಸಕರಾದಂಥ ಮಾನ್ಯ ಸಗೀರ್ ಅಹಮದ್ ಅವರು ಚಿಕ್ಕಮಗಳೂರಿನಲ್ಲಿ ಸುಮಾರು 8 ಮನೆಗಳನ್ನು ಕಟ್ಟಿ ಆ ಮನೆಗಳು ಬಿದ್ದುಹೋಗಿವೆ, ಆ ಮನೆಗಳು ಕಳಪೆ ಕಾಮಗಾರಿಯಿಂದ ಕಟ್ಟಲಾಗಿದೆ ಎನ್ನುವ ವಿಷಯವನ್ನು ಸಭೆಯ ಮುಖೇನ ತಿಳಿಸಿದ್ದಾರೆ. ಇಲ್ಲಿ 8 ಮನೆ ಬಿದ್ದುಹೋಗಿರುವುದು ನಿಜ. ಏಕೆಂದರೆ ಅಲ್ಲಿಯ ನೆಲ ಬ್ಲಾಕ್ ಕಾಟನ್‌ಸಾಯಿಲ್ ಆಗಿರುವುದರಿಂದ ಅಲ್ಲಿ ನೆಲದಲ್ಲಿ ಸರಿಯಾಗಿ ಫೌಂಡೇಷನ್ ಹಾಕದೆ ಇರುವುದರಿಂದ ಆ ಕಟ್ಟಡ ಬಿರುಕು ಬಿಟ್ಟಿರುವುದು ನಿಜ. ಆದ್ದರಿಂದ, ಅದರ ಫೈನಲ್ ಬಿಲ್ಲನ್ನು ಸಹ ಕಂಟ್ರಾಕ್ಟ್‌ದಾರರಿಗೆ ನಾನು ಕೊಟ್ಟಿಲ್ಲ. ಅದು 1993-94ರಲ್ಲಿ ಆದಂಥ ಕೆಲಸ. ಅದು ಕಂಟ್ರಾಕ್ಟರ್ ಸರಿಯಾಗಿ ಕೆಲಸ

ಮಾಡದಿರುವುದರಿಂದ ಕಂಟ್ರಾಕ್ಟರ್ ಫೈನಲ್ ಬಿಲ್ಲನ್ನು ಕೊಡದೆ ತಡೆಹಿಡಿದಿದ್ದೇವೆ. ಸಂಬಂಧಪಟ್ಟ ಸಿಬ್ಬಂದಿವರ್ಗದವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಹ ನಾವು ಸೂಚನೆ ಕೊಟ್ಟಿದ್ದೇವೆ. ಆ 8 ಮನೆಗಳಿಗೆ ಫಲಾನುಭವಿಗಳೇ ವಾಲಂಟರಿಯರ್ ಆಗಿ ಬಂದು ಸ್ವಾಮಿ ನಮಗೆ ಏನೇ ಇದ್ದರೂ ಪರವಾಗಿಲ್ಲ, ಮನೆಯನ್ನು ನಾವು ಕಟ್ಟಿಸಿಕೊಳ್ಳುತ್ತೇವೆ, ಎಂದು ಹೇಳಿದ ದೃಷ್ಟಿಯಿಂದ ನಾವು ಅವರಿಗೆ ಕೊಟ್ಟಿದ್ದೇವೆ. ಆ ಮನೆ ಬಿದ್ದು ಹೋದರೂ ಪರವಾಗಿಲ್ಲ, ನಾವು ಅದರಲ್ಲಿ ಹೋಗುತ್ತೇವೆ ಎನ್ನುವ ಅಗ್ರಿಮೆಂಟ್ ಮೇಲೆ ನಾವು ಕೊಟ್ಟಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯು ಶ್ರೀ ಸಗೀರ್ ಅಹಮದ್‌ರವರ ಸ್ವಂತ ಕ್ಷೇತ್ರವಾಗಿದೆ. ಅವರಿಗೂ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಅವರು ಈ 8 ಜನರಲ್ಲಿ ಎರಡು ಜನರಿಗೆ ಈ ತರಹ ಮಾಡಬೇಕೆಂದು ಹೇಳಿ ಅವರೇ ಎರಡು ಜನರಿಗೆ ಕೊಡಿಸಿದ್ದಾರೆ. ನಾನು ಏನೂ ಸ್ವಂತಕ್ಕೆ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. ಆದರೂ ಇದನ್ನು ಸಭೆಯ ಗಮನಕ್ಕೆ ತಂದು, ಅದರ ಜೊತೆಗೆ ಬಿ.ಜಿ. ಬಣಕಾರ್‌ರವರು ಮತ್ತು ಶ್ರೀ ಯಡಿಯೂರಪ್ಪನವರು - ಹೌಸಿಂಗ್ ಬೋರ್ಡಿನಲ್ಲಿ ಸುಮಾರು 13 ಎಕರೆ 31 ಗುಂಟೆ ಪ್ರದೇಶವನ್ನು ನೀವು ಗೃಹ ಮಂಡಳಿಯಿಂದ ಬಿಡುಗಡೆ ಮಾಡಿದ್ದೀರಿ ಎಂದು ನನ್ನ ಮೇಲೆ ಆಪಾದನೆ ಮಾಡಿದರು. ಹೌಸಿಂಗ್ ಬೋರ್ಡಿನಲ್ಲಿ ಇವತ್ತಿನವರೆಗೆ ನಾವು ಯಾವುದೇ ಡೀ-ನೋಟಿಫಿಕೇಷನ್ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾಡಬೇಡಿ ಎಂದರೂ ಕಂದಾಯ ಇಲಾಖೆಯಿಂದ ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಕಂದಾಯ ಸಚಿವರು ಸದನದಲ್ಲಿ ಇಲ್ಲ. ಅವರು ಬಂದಮೇಲೆ ದಯಮಾಡಿ ಅವರ ಕಡೆಯಿಂದ ತಾವು ಉತ್ತರ ಪಡೆದುಕೊಳ್ಳಿ. ನಾವು ಏನಾದರೂ ಅಂಥದ್ದು ಮಾಡಿದ್ದು ನನ್ನ ಗಮನಕ್ಕೆ ಬಂದರೆ ಅದರ ಮೇಲೆ ನಾವು ಕಾನೂನಿನ ರೀತಿಯ ನೋಟಿಫಿಕೇಶನ್‌ನ್ನು ಮಾಡಿ 13 ಎಕರೆ 31 ಗುಂಟೆ ಜಾಗ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನುವುದಿದ್ದರೆ ಅದನ್ನು ರಿ-ಅಕ್ವೈಯರ್ ಮಾಡುವುದಕ್ಕೆ ಹೌಸಿಂಗ್ ಬೋರ್ಡಿನಿಂದ ನೋಟಿಫಿಕೇಶನ್ ಮಾಡುವುದಕ್ಕೆ ಕಳುಹಿಸುತ್ತೇವೆ. ಅದರ ಜೊತೆಗೆ ಕಂದಾಯ ಮಂತ್ರಿಗಳು ಬಂದ ಮೇಲೆ ಅದರ ಬಗ್ಗೆ ಉತ್ತರ ಪಡೆದುಕೊಳ್ಳಬೇಕೆಂದು ಹೇಳಿ ತಮ್ಮ ಮುಖೇನ ಕೋರುತ್ತೇನೆ. ಅದರ ಜೊತೆಗೆ ಹೌಸಿಂಗ್ ಬೋರ್ಡಿನಲ್ಲಿ ಯಾವುದೇ ರಸ್ತೆಗಳು ಇರಲಿ, ಬೀದಿ ದೀಪಗಳು ಇರಲಿ, ಮಾಡಿಲ್ಲವೆಂದು ಹೇಳಿ ಮಾನ್ಯ ಸಗೀರ್ ಅಹಮದ್‌ರವರು ಸಭೆಯ ಗಮನಕ್ಕೆ ತಂದರು. ಈಗಾಗಲೇ ನಾವು ಮೈಸೂರಿನಲ್ಲಿ ಊಟುಗಳ್ಳಿಯೊಳಗೆ ಸುಮಾರು ದಿವಸಗಳಿಂದ ಬಿದ್ದಿದ್ದಂಥ ಕೆಲಸವನ್ನು ತೆಗೆದುಕೊಂಡು ಅದು ರಸ್ತೆ ಇರಬಹುದು, ಲೈಟ್ ಇರಬಹುದು, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಜನ ವಾಸ ಮಾಡವುದಕ್ಕೆ ಯೋಗ್ಯವಿರುವ ಹಾಗೆ ಇವತ್ತು ನಾವು ಮಾಡಿದ್ದೇವೆ. ಅದು ಮೈಸೂರಿನ ಊಟ್‌ಗಳ್ಳಿ ಇರಬಹುದು, ಬೆಂಗಳೂರಿನ ಯಲಹಂಕ ಇರಬಹುದು ಮಂಗಳೂರಿನ ಕಂಕನಾಡಿ ಇರಬಹುದು, ಚಿತ್ರದುರ್ಗದ ಚೆಲ್‌ಕೋಟೆ ಇರಬಹುದು, ಗುಲ್ಬರ್ಗಾದ ಕೊಟ್ಟೂರು, ಬೀದರ್ ಜಿಲ್ಲೆಯ ಬಾಲ್ಕಿ ಇರಬಹುದು, ಹೊನ್ನಾವರದಲ್ಲಿ ದಾಂಡೇಲಿ, ಸಂಕೇಶ್ವರ ಹೀಗೆ ಇತರ ಎಲ್ಲಾ ಜಿಲ್ಲೆಗಳಲ್ಲೂ ನಾವು

ಇವತ್ತು ಹೌಸಿಂಗ್ ಬೋರ್ಡಿನಲ್ಲಿ ಏನು ಕೆಲಸ ಇತ್ತೋ ಅದನ್ನು ತೆಗೆದುಕೊಂಡಿದ್ದೇವೆ. ಯಾವುದಾದರೂ ಅಂಥದ್ದು ತಮ್ಮ ಗಮನಕ್ಕೆ ಬಂದಿದ್ದು ನನಗೆ ತಿಳಿಸಿದರೆ ಬಾಕಿ ಉಳಿದ ಕೆಲಸವನ್ನೂ ನಾವು ಮಾಡಿಸುತ್ತೇವೆ ಈ ಸಾರಿ ಹೌಸಿಂಗ್ ಬೋರ್ಡಿನಲ್ಲಿ ಯಾವುದೇ ಯೋಜನೆಗಳನ್ನು ತಾವು ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಈ ಹೊಸ ಯೋಜನೆಗಳನ್ನು ಈ ಸಲ ನಾವು ತೆಗೆದುಕೊಂಡಿದ್ದೇವೆ. ಸಂಯುಕ್ತ ವಸತಿ ಯೋಜನೆ ಕುವೆಂಪುನಗರ, ಬಳ್ಳಾರಿ, ಚಿಂಚೋಳಿ ಗುಲ್ಬರ್ಗಾ, ಬಿಜಾಪುರದಲ್ಲಿ ಜಮಖಂಡಿ, ಚಿತ್ರದುರ್ಗದಲ್ಲಿ ಜಗಳೂರು, ಗದಗ್ ಜಿಲ್ಲೆಯ ಶೆಟ್ಟಿಗೆರೆ, ಮಂಗಳೂರಿನ ಕಂಕನಾಡಿ, ಹಾಗೂ ಅರಸೀಕೆರೆ ಕ್ಷೇತ್ರದ ಗಂಡಸಿ, ಚಿಕ್ಕಮಗಳೂರಿನಲ್ಲಿ ಯಾವುದು ಇದೆಯೋ ಅಲ್ಲಿಯೂ ಸಹ ವಸತಿ ಯೋಜನೆಗೆ ಸುಮಾರು 15 ಕೋಟಿ ರೂಪಾಯಿಯಷ್ಟು ಹಣ ಬೇಕಾಗುತ್ತದೆ. ಅದನ್ನು ಸಹ ಹುಡ್ಕೋ ನೆರವಿನಿಂದ ಈ ವರ್ಷ ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತೇವೆ. ಅದರ ಜೊತೆಗೆ ಹೌಸಿಂಗ್ ಬೋರ್ಡಿನಲ್ಲಿ ಕಳೆದ ಐದು ವರ್ಷಗಳಲ್ಲಿ ಏನು ವಸೂಲಾತಿ ಮಾಡಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. 1.4.1991ರಿಂದ 31.3.1992ರವರೆಗೆ 23 ಕೋಟಿ 9 ಲಕ್ಷ ರೂಪಾಯಿಗಳು, 1.4.1992 ರಿಂದ 31.3.1993ರವರೆಗೆ 27 ಕೋಟಿ 35 ಲಕ್ಷ ರೂಪಾಯಿಗಳು, 1.4.1993ರಿಂದ 31.3.1994ರವರೆಗೆ 31 ಕೋಟಿ 53 ಲಕ್ಷ ರೂಪಾಯಿಗಳು, 1.4.1994 ರಿಂದ 31.3.1995ರ ವರೆಗೆ 30 ಕೋಟಿ 5 ಲಕ್ಷ ರೂಪಾಯಿಗಳು, 1.4.1995ರಿಂದ 31.3.1996 ರವರಗೆ 56 ಕೋಟಿ ರೂಪಾಯಿಗಳು, 1.4.1996 ರಿಂದ 31.3.1997ರವರೆಗೆ 55 ಕೋಟಿ ರೂಪಾಯಿಗಳು. ಕಳೆದು ಎರಡು ವರ್ಷಗಳಲ್ಲಿ ಹೌಸಿಂಗ್ ಬೋರ್ಡಿನಲ್ಲಿ ಏನು ಹಣ ಬರಬೇಕಾಗಿತ್ತೋ ಅದು ಹೆಚ್ಚಿನ ಪ್ರಮಾಣದಲ್ಲಿ ಅಂದರೆ 100ಕ್ಕೆ 80ರಷ್ಟು ಹಣವನ್ನು ವಸೂಲು ಮಾಡಿದ್ದೇವೆ. ಇನ್ನು ಕೆಲವು ಕಡೆ ಕಳಪೆ ಕಾಮಗಾರಿ ನಡೆದಿದೆ ಎಂದು ಅದು ಕೋರ್ಟು ಕೇಸಿನಲ್ಲಿ ಇರಬಹುದು, ಕಳಪೆ ಕಾಮಗಾರಿಗಳು ಕೆಲವು ಇರಬಹುದು, ಆದರ ಮೇಲೆ ನಾವು ಇವತ್ತು ಹೆಚ್ಚಿನ ರೀತಿಯಲ್ಲಿ ನಿಗಾ ಇಟ್ಟು ಹೊಸ ಯೋಜನೆಗಳನ್ನು ಮಾಡಿದ್ದೇವೆ. ಹೌಸಿಂಗ್ ಬೋರ್ಡು ಬಗ್ಗೆ ಸಾರ್ವಜನಿಕರಲ್ಲಿ ಕೆಟ್ಟಾಭಿಪ್ರಾಯ ಮಾಡಿತ್ತು. ಆ ಕೆಟ್ಟ ಅಭಿಪ್ರಾಯವನ್ನು ಹೋಗಲಾಡಿಸುವ ಉದ್ದೇಶಕ್ಕೋಸ್ಕರ ನಾವು ಈ ಹೊಸ ಯೋಜನೆಗಳನ್ನು ತೆಗೆದುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿಸುತ್ತೇವೇ ಎಂದು ಹೇಳಿ, ಇವತ್ತಿನ ದಿವಸ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥ ಕಾಲದಲ್ಲಿ 1995-96ನೇ ಸಾಲಿನಲ್ಲಿ ಆಶ್ರಯ ಮನೆಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು ಶಿಕಾರಿಪುರ ಸೇರಿದಂತೆ ಶಿವಮೊಗ್ಗ ಜಿಲ್ಲೆಯ ಬಗ್ಗೆ ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿ 1995-96ನೇ ಸಾಲಿನಲ್ಲಿ ಆಶ್ರಯ ಮನೆಗಳಿಗೆ ಬಿಲ್ ಪಾವತಿ ಆಗಿಲ್ಲ. ಸುಮಾರು ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳ ಪ್ರತಿಯೊಂದು ಜಿಲ್ಲೆಯಲ್ಲೂ ಬಾಕಿ ಇದೆ. ಸುಮಾರು 25ರಿಂದ 30 ಲಕ್ಷ ರೂಪಾಯಿಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಬಾಕಿ ಇದೆ.

ಇದು ಮೊದಲನೆಯ ಪ್ರಶ್ನೆ. ಇನ್ನು ಎರಡನೆಯದು ಎಂದರೆ, ಇವತ್ತು ನಿಮಗೆ ಹುಡ್ಕೋದಿಂದ ಸಾಲ ಸಿಗುತ್ತಿಲ್ಲ ಬಹುಶಃ ನೀವು ತೆಗೆದುಕೊಂಡ ಸಾಲ ಕಟ್ಟಿಲ್ಲವೆಂದೋ ಅಥವಾ ಬೇರೆ ಯಾವುದೋ ಕಾರಣದಿಂದಲೋ ಅದು ನನಗೆ ಗೊತ್ತಿಲ್ಲ. ಅದರ ಬಗ್ಗೆ ತಾವು ಹೇಳಬೇಕು. ಇನ್ನು ತಾವು ಏನು ಸ್ಲಮ್ ಬೋರ್ಡಿನಿಂದ ಮನೆಗಳನ್ನು ಕಟ್ಟುತ್ತೀರಿ ಅದು ಹಾಸನವೂ ಸೇರಿ ಬಹಳ ಚಿಕ್ಕ ಸ್ಥಳದಲ್ಲಿ ಮನೆಗಳನ್ನು ಕಟ್ಟುತ್ತೀರಿ. ಆ ಕುಟುಂಬದರಲ್ಲಿ ಇರುವಂಥ 7-8 ಜನರು ಹೊರಗೆ ಬರುವಂಥ ಪರಿಸ್ಥಿತಿ ಬಂದಿದೆ. ಆ ಮನೆ ಬೇಡ ಬೇಕಾದರೆ ನಾವು ಗುಡಿಸಲಿನಲ್ಲಿ ಇರುತ್ತೇವೆಂದು ಅವರು ಹೇಳುತ್ತಾರೆ. ಮನೆ ಕಟ್ಟುವ ಆ ಅಳತೆಯನ್ನು ಸ್ವಲ್ಪ ದೊಡ್ಡದು ಮಾಡಿ ಸ್ವಲ್ಪ ಅವರು ಬದುಕುವುದಕ್ಕೆ ಅನುಕೂಲವಾಗುವಂತೆ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆಯೇ? ಮೂರನೆಯದು ಈ ಆಶ್ರಯ ಯೋಜನೆಗೆ ಜಮೀನನ್ನು ಕೊಂಡುಕೊಳ್ಳಬೇಕೆಂದು ತಾವು ಹೇಳಿದಿರಿ. ಜಮೀನನ್ನು ಕೊಂಡುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳು ಆಸಕ್ತಿ ತೋರಿಸುತ್ತಿಲ್ಲ. ನಾವು ಶಾಸಕರೆಲ್ಲ ಕುಳಿತು ಒಂದು ಬೆಲೆ ನಿಗದಿ ಮಾಡಿ ಕಡಿಮೆ ಬೆಲೆಯನ್ನು ನಿಗದಿ ಮಾಡಿದರೂ ಸಹ ಇಂಟೆರೆಸ್ಟ್ ತೆಗೆದುಕೊಂಡು ದುಡ್ಡು ಕೊಟ್ಟು ಆ ಜಾಗವನ್ನು ವಶಪಡಿಸಿಕೊಂಡು ಬೇಗ ಸೈಟ್ ಫಾರ್ಮೇಷನ್ ಮಾಡುವುದಕ್ಕೆ ಆಸಕ್ತಿ ತೋರಿಸುತ್ತಿಲ್ಲ. ಇದಕ್ಕೆ ಏನಾದರೂ ಬಿಗಿ ಮಾಡುತ್ತೀರೋ?

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, 1995-96ನೇ ಸಾಲಿನ ಪೂರ್ತಿ ಸಬ್ಸಿಡಿ ಹಣ ಏನು ಇತ್ತೋ ಅದು ಹುಡ್ಕೋದಿಂದ ಇರಬಹುದು ಅದು ನಮ್ಮ ರಾಜ್ಯ ಸರ್ಕಾರದಿಂದ ಕೊಡುವ ಹಣವನ್ನು ಪೂರ್ತಿ ಕೊಟ್ಟಿದ್ದೇವೆ. ಮುಖ್ಯ ಕಾರ್ಯದರ್ಶಿಗಳು ಅಲ್ಲಿ ಒಂದು ಅಂದಾಜಿನ ಪ್ರಕಾರ 2 ಸಾವಿರ ಮನೆ ಇದ್ದರೆ ಸುಮಾರು 50 ಪರ್ಸೆಂಟ್ ಹಣ ಏನು ಖರ್ಚು ಮಾಡಿದ್ದೇವೆ, ಹಣ ಖರ್ಚು ಮಾಡಿರುವ ವರದಿಯನ್ನು ಕಳುಹಿಸಿಕೊಟ್ಟರೆ ಇವತ್ತೇ ಆ ಹಣವನ್ನು ನಾವು ಹುಡ್ಕೋ ಸಂಸ್ಥೆಯವರ ಜೊತೆ ಮಾತನಾಡಿ ಆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಅದರ ಜೊತೆಗೆ ಈಗ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಲು ಒಂದು ಮನೆಗೆ 35 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ಅದನ್ನು ಫಲಾನುಭವಿಗಳಿಗೆ ಕೊಟ್ಟು ಅವರು ಇನ್ನೂ ಐದು ಸಾವಿರ ರೂಪಾಯಿ ಹೆಚ್ಚಿಗೆ ಖರ್ಚು ಮಾಡಿ ಚೆನ್ನಾಗಿ ಮನೆ ಕಟ್ಟಿಸಿಕೊಳ್ಳುತ್ತೇವೆಂದು ಅವರಿಗೇ ಕೊಡಬೇಕೆಂದು ತಾವು ಹೇಳುವುದಾದರೆ ಆ ರೀತಿ ಮಾಡುತ್ತೇವೆ ಅಥವಾ ನಾವೇ ಕಟ್ಟಿಸಿಕೊಡಬೇಕೇ ಒಟ್ಟಿನಲ್ಲಿ ತಾವು ನನಗೆ ಯಾವ ರೀತಿ ಸೂಚನೆ ಕೊಡುತ್ತೀರೋ ಅದೇ ರೀತಿ ಮಾಡುವುದಕ್ಕೆ ಸಿದ್ಧರಿದ್ದೇವೆ. ಇನ್ನು ಆಶ್ರಯ ಸಮಿತಿ ಬಗ್ಗೆ ಹೇಳುವುದಾದರೆ, ಶಾಸಕರು ಸ್ಥಳವನ್ನು ನಿಗದಿ ಮಾಡಿ ಕಡಿಮೆ ಬೆಲೆ ನಿಗದಿ ಪಡಿಸಿಕೊಟ್ಟರೂ ಸಹ ಜಿಲ್ಲಾಧಿಕಾರಿಗಳು ಆಸಕ್ತಿ ತೋರಿಸುತ್ತಿಲ್ಲ ಎಂದು ಹೇಳಿದಿರಿ. ಅದಕ್ಕೆ ಬೇಕಾದರೆ ಆಶ್ರಯ ಸಮಿತಿ ಮುಖೇನ ಅದು ನಿವೇಶನ ಕೊಳ್ಳುವುದು ಇರಬಹುದು, ಅಥವಾ ಮನೆಗಳ ಕ್ವಾಲಿಟಿ ಬಗ್ಗೆ ಮೆಯಿಂಟೇನ್ ಮಾಡುವುದು ಇರಬಹುದು, ಅದನ್ನೆಲ್ಲವನ್ನೂ ಪೂರ್ಣವಾಗಿ ಬೇಕಾದರೆ ಆಶ್ರಯ ಸಮಿತಿಗೆ ಒದಗಿಸುತ್ತೇವೆ. ಅದ್ಕಕೆ ಸರ್ಕಾರದ ಆದೇಶವನ್ನೂ ಸಹ ಹೊರಡಿಸಿದ್ದೇವೆ. ಅದು ಒಂದು ಲಕ್ಷ ಇರಬಹುದು, ಒಂದೂವರೆ ಲಕ್ಷ ಇರಬಹುದು ಅಲ್ಲಿ ಆಶ್ರಯ ಸಮಿತಿಯವರು ಏನು ತೀರ್ಮಾನ ಮಾಡುತ್ತಾರೋ ಅದಕ್ಕೆ ಹಣವನ್ನು ಜಿಲ್ಲಾಧಿಕಾರಿಗಳು ಕೊಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಮನೆಗಳನ್ನು ಕಟ್ಟುತ್ತಿದ್ದಾರೆ. ನಗರ, ಪಟ್ಟಣ ಪ್ರದೇಶಗಳಲ್ಲಿ, ಮುನಿಸಿಪಾಲಿಟಿ ಏರಿಯಾದಲ್ಲಿ 1993-94ನೇ ಸಾಲಿನಿಂದ ಒಂದು ಪೈಸೆ ಕೂಡ ಬಿಡುಗಡೆಯಾಗಿಲ್ಲ, ಅರ್ಧಂಬರ್ಧ ಮನೆಗಳನ್ನು ಕಟ್ಟಿದ್ದಾರೆ. ಅದೇ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ1996-97ರಲ್ಲಿ ಒಂದು ಪೈಸೆಯೂ ಸಹ ಬಿಡುಗಡೆಯಾಗಿಲ್ಲ. ಈಗ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಹೇಳಿದ್ದೀರಿ. ಇದಕ್ಕೆ ಯಾವ ರೀತಿಯಾಗಿ ಹಣವನ್ನು ತುಂಬಿಸುತ್ತೀರಿ? ವರ್ಷಕ್ಕೆ ಇಷ್ಟು ಮನೆಗಳೆಂದು ಪ್ಲಾನ್ ಮಾಡಿ ಬಿಡುತ್ತಾರೆ. ನಕಾಶೆಯನ್ನು ತಂದು ಇಟ್ಟುಕೊಂಡಿರುತ್ತಾರೆ. ಹಳ್ಳಿಗಾಡಿನ ಪ್ರದೇಶದಲ್ಲಿ 1996-97ರಲ್ಲಿ ಹಣ ಬಿಡುಗಡೆಯಾಗಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ಹಣವನ್ನು ಕೊಡತಕ್ಕಂಥವರು. ಅದು ವಸತಿ ಇಲಾಖೆಗೆ ಬರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿರತಕ್ಕಂಥದ್ದನ್ನು ಸ್ವಾಗತ ಮಾಡುತ್ತೇನೆ. 3-4 ಜನರು ಶಾಸಕರು ಇರುವಂತಹ ಸ್ವಾಗತ ಮಾಡುತ್ತೇನೆ. 3-4 ಜನರು ಶಾಸಕರು ಇರುವಂತಹ ಸಂದರ್ಭದಲ್ಲಿ ಮೇಜರ್ ಆಗಿರುವವರು ಮೀಟಿಂಗ್‌ನ್ನು ಕರೆಯದೇ ಇರುವಂತಹ ಸಂದರ್ಭದಲ್ಲಿ ಬೇರೆಯವರಿಗೆ ಕರೆಯುವುದಕ್ಕೆ ಅವಕಾಶ ಇದೆಯೇ?

ಅಧ್ಯಕ್ಷರು : ನೀವು ವಕೀಲರಾಗಿದ್ದೀರಿ, ಆಟೋಮಿಟಿಕ್ ಆಗಿ ಬರುತ್ತದೆ. ನಾನು ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ಉಪಾಧ್ಯಕ್ಷರು ಇಲ್ಲಿ ಕುಳಿತುಕೊಳ್ಳುತ್ತಾರೆ. ಅದನ್ನು ನೀವು ಕೇಳಬೇಕೇ? ನೀವು ವಕೀಲರಾಗಿರುವವರು ಅವರಿಗೆ ನೀವು ಗೈಡ್ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾಗಿ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಣವನ್ನು ಯಾವಾಗ ಕೊಡುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ : ಅಂಬೇಡ್ಕರ್ ಯೋಜನೆಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತಹ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರ ಜೊತೆ ಚರ್ಚೆ ಮಾಡಿ ಕೂಡಲೇ ಹಣ ಬಿಡುಗಡೆ ಮಾಡಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : 1997-98ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

> "31.3.1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 30 ಮತ್ತು 31 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 30 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ1,76,80,08,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ8,26,68,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 31 - ನಗರಾಭಿವೃದ್ಧಿ - (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ.)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳ ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ.) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,06,3740,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,38,91,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಧ್ಯಕ್ಷರು : ಈಗ ಸಭೆಯನ್ನು ಮುಂದಕ್ಕೆ ಹಾಕಲಾಗಿದೆ ಮತ್ತೆ ಮಧ್ಯಾಹ್ನ 3.30 ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2.33 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3..30ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 3-40ಕ್ಕೆ ಸಮಾವೇಶಗೊಂಡಿತು : ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)